ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾವೇರಿ

ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ

2025–26

ವಿಷಯ: ಸಮಾಜ ವಿಜ್ಞಾನ

ತರಗತಿ: 10

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,

ಬನಶಂಕರಿ 3ನೇ ಹಂತ, ಬೆಂಗಳೂರು–560085

ಪರಿಕಲ್ಪನೆ ಮತ್ತು ಮಾರ್ಗದರ್ಶನ	
ಶ್ರೀಮತಿ ರಶ್ಮಿ ಮಹೇಶ್ ಭಾ. ಆ. ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ	
ಡಾ. ತ್ರಿಲೋಕ್ ಚಂದ್ರ ಕೆ. ವಿ. ಭಾ. ಆ. ಸೇ. ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೆಂಗಳೂರು	ಶ್ರೀ ಗೋಪಾಲಕೃಷ್ಣ ಹೆಚ್. ಎನ್. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು
ಡಯಟ್ ಸಹಕಾರ	
ಶ್ರೀ ಗಿರೀಶ ಪದಕಿ ಪ್ರಾಂಶುಪಾಲರು ಡಯಟ್, ಹಾವೇರಿ	ಶ್ರೀ ಕೊಟ್ರೇಶಪ್ಪ ಛತ್ರಕಿ ಉಪನ್ಯಾಸಕರು ಡಯಟ್, ಹಾವೇರಿ
ಸಂಯೋಜನೆ	
ಶ್ರೀಮತಿ ರಾಧಾ ಪಿ. ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು	
ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ರಚನಾ ಸಂಪನ್ಮೂಲ ತಂಡ	
ಶ್ರೀ ಶಂಕರ ಲಮಾಣಿ, ಜಿ.ಹೆಚ್.ಎಸ್. ಬಿಸಲಹಳ್ಳಿ, ತಾ: ಬ್ಯಾಡಗಿ ಶ್ರೀ ವಸಂತಕುಮಾರ ಶ್ಯಾಗೋಟಿ, ಜಿ.ಹೆಚ್.ಎಸ್. ಇಚ್ಚಂಗಿ, ತಾ: ಸವಣೂರು ಶ್ರೀ ನಿಂಗಪ್ಪ ಕಾಟೇನಹಳ್ಳಿ, ಜಿ.ಹೆಚ್.ಎಸ್. ಬನ್ನೂರು, ತಾ: ಶಿಗ್ಗಾಂವ ಶ್ರೀ ಗಿರೀಶ ಸವಣೂರು, ಜಿ.ಹೆಚ್.ಎಸ್. ಕುನ್ನೂರು, ತಾ: ಶಿಗ್ಗಾಂವ ಶ್ರೀಮತಿ ಸವಿತಾ ಕಲಕೇರಿ, ಜಿ.ಹೆಚ್.ಎಸ್. ನೆಲೋಗಲ್ ತಾ: ಹಾವೇರಿ ಶ್ರೀ ಶ್ರೀನಿವಾಸ ಕಲಾಲ, ಕೆ.ಪಿ.ಎಸ್. ಆಡೂರ, ತಾ: ಹಾನಗಲ್ಲ ಶ್ರೀ ಸಿ.ಟಿ. ಪೂಜಾರ, ಜಿ.ಹೆಚ್.ಎಸ್. ಕಳಸೂರು, ತಾ: ಸವಣೂರು ಶ್ರೀ ಅಜ್ಜಪ್ಪ ಸರ್ವೆರ್, ಜಿ.ಹೆಚ್.ಎಸ್. ಛತ್ರ, ತಾ: ಬ್ಯಾಡಗಿ	ಶ್ರೀ ಶಿವಕುಮಾರ ಪಟ್ಟೇದ, ಜಿ.ಹೆಚ್.ಎಸ್. ಗುಂಡೇನಹಳ್ಳಿ ಶ್ರೀ ನಾಗರಾಜ ಬಿಸೆಂಬ್ಲಿ, ಕೆ.ಪಿ.ಎಸ್. ಅರೇಮಲ್ಲಾಪೂರ ತಾ: ರಾಣೇಬೆನ್ನೂರು ಶ್ರೀ ವೆಂಕಟೇಶ ಬಂಡೇರ, ಜಿ.ಹೆಚ್.ಎಸ್. ಹಿರೇಹುಲ್ಲಾಳ, ತಾ: ಹಾನಗಲ್ಲ ಶ್ರೀ ಮೇಘರಾಜ ಮಾಳಗಿಮನಿ, ಜಿ.ಹೆಚ್.ಎಸ್. ಹಿರೇಕೆರೂರು ಶ್ರೀ ಚಂದ್ರಶೇಖರ ಪೂಜಾರ, ಜಿ.ಹೆಚ್.ಎಸ್. ಶೇಷಗಿರಿ, ತಾ: ಹಾನಗಲ್ಲ ಷಣ್ಮುಖ ಜಿ. ಹೆಚ್ ಜಿ.ಹೆಚ್.ಎಸ್. ಕಡೂರು, ತಾ: ಹಿರೇಕೆರೂರು ಶ್ರೀ ಶಂಕರ ಚಕ್ರಸಾಲಿ, ಜಿ.ಹೆಚ್.ಎಸ್. ಹಿರೇಅಣಜಿ, ತಾ: ಬ್ಯಾಡಗಿ ಶ್ರೀ ಲಕ್ಷ್ಮಣ ಕಾಳೆ, ಜಿ.ಹೆಚ್.ಎಸ್. ಹಿರೇಮಾಗನೂರು, ತಾ: ರಾಣೇಬೆನ್ನೂರು
ಮಾರ್ಗದರ್ಶಕರು ಮತ್ತು ಪರಿಶೀಲಕರು	
ಶ್ರೀ ಬಾನುಕುಮಾರ ಸಹಾಯಕ ನಿರ್ದೇಶಕರು ಕೆ.ಟಿ.ಬಿ.ಎಸ್. ಬೆಂಗಳೂರು	ಶ್ರೀ ಸುಧಾಕರರೆಡ್ಡಿ ಹೆಚ್ ಸಹ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಕಾದಲವೇಣಿ ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

ಕಲಿಕಾ ಫಲಗಳು ಮತ್ತು ಕಲಿಕಾಂಶಗಳು

ಇತಿಹಾಸ

ಕ್ರ. ಸಂ	ಅಧ್ಯಾಯದ ಹೆಸರು	ಕಲಿಕಾ ಫಲಗಳು
1	ಭಾರತಕ್ಕೆ ಯೂರೋಪಿಯನ್ನರ ಆಗಮನ	• ಭಾರತವು ಯುರೋಪಿಯನ್ನರೊಂದಿಗೆ ಹೊಂದಿದ್ದ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧವನ್ನು ತಿಳಿಯುವರು. • ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರನ್ನು ಪಟ್ಟಿ ಮಾಡುವರು. • ಯುರೋಪಿಯನ್ನರ ರಾಜಕೀಯ ಏಳಿಗೆಗೆ ಕಾರ್ನಾಟಿಕ್ ಯುದ್ಧಗಳು ಹೇಗೆ ಕಾರಣವಾದವು ಎಂಬುದನ್ನು ತಿಳಿಯುವರು. • ಪ್ಲಾಸಿಕದನ, ಬಕ್ಸಾರ್ ಕದನಗಳ ಕಾರಣ ಮತ್ತು ಪರಿಣಾಮಗಳನ್ನು ವಿವರಿಸುವರು. • ದ್ವಿ–ಸರ್ಕಾರ ಪದ್ಧತಿಯನ್ನು ವಿವರಿಸುವರು.
2	ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ	• ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಣೆಗಾಗಿ ಅನುಸರಿಸಿದ ಮಾರ್ಗಗಳನ್ನು ಪಟ್ಟಿ ಮಾಡುವರು. • ಆಂಗ್ಲೋ–ಮರಾಠ ಯುದ್ಧಗಳನ್ನು ಕುರಿತು ವಿವರಿಸುವರು. • ಸಹಾಯಕ ಸೈನ್ಯ ಪದ್ಧತಿಯ ಬಗ್ಗೆ ವಿವರಿಸುವರು. • ಆಂಗ್ಲೋ– ಸಿಖ್ ಯುದ್ಧಗಳನ್ನು ಕುರಿತು ವಿವರಿಸುವರು. • ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ಬಗ್ಗೆ ತಿಳಿಯುವರು.
3	ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು	• ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ಆಡಳಿತ ಮತ್ತು ನ್ಯಾಯಾಂಗ ವ್ಯವಸ್ಥೆಯ ಬದಲಾವಣೆಗಳನ್ನು ವಿವರಿಸುತ್ತಾರೆ. • ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ನಾಗರಿಕ ಸೇವಾ ವ್ಯವಸ್ಥೆಯನ್ನು ವಿವರಿಸುತ್ತಾರೆ. • ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ಪೊಲೀಸ್ ವ್ಯವಸ್ಥೆ ಮತ್ತು ಸೈನ್ಯ ವ್ಯವಸ್ಥೆಯನ್ನು ಇಂದಿನ ಪೊಲೀಸ್ ವ್ಯವಸ್ಥೆ ಮತ್ತು ಸೈನ್ಯ ವ್ಯವಸ್ಥೆಯ ಜೊತೆ ಹೋಲಿಸುತ್ತಾರೆ. • ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ಭೂ ಕಂದಾಯ. ನೀತಿಗಳು ಭಾರತೀಯ ರೈತರಿಗೆ ಹೇಗೆ ಮಾರಕವಾದವು ಎಂಬುದನ್ನು ತಿಳಿಯುವರು. • ಭಾರತದಲ್ಲಿ ಬ್ರಿಟಿಷ್ ಶಿಕ್ಷಣದ ಪರಿಣಾಮಗಳನ್ನು ತಿಳಿಯುವರು. • ಬ್ರಿಟಿಷರು ಭಾರತದಲ್ಲಿ ಜಾರಿಗೆ ತಂದ ಕಾಯ್ದೆಗಳು ಭಾರತ ಸಂವಿಧಾನ ರಚನೆಗೆ ಹೇಗೆ ಸಹಾಯಕವಾದವು ಎಂಬುದನ್ನು ಅರಿಯುವರು.
4	ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು	• ಮೈಸೂರಿನ ಒಡೆಯರ ಸಾಧನೆಗಳು ಮತ್ತು ಅವರ ಕೊಡುಗೆಗಳನ್ನು ಪ್ರಶಂಸಿಸುವರು. • ನಾಲ್ವಡಿ ಕೃಷ್ಣರಾಜ ಒಡೆಯರ ಜೀವನ ಮತ್ತು ಸಾಧನೆಗಳನ್ನು ಸಾರಾಂಶೀಕರಿಸುವರು. • ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ಹೇಗೆ ಬ್ರಿಟಿಷರ ವಿರುದ್ಧ ಹೋರಾಡಿದರು ಎಂಬುದನ್ನು ಉದಾಹರಣೆ ಸಹಿತ ವಿವರಿಸುವರು. • ಕಿತ್ತೂರಿನ ಬಂಡಾಯದಲ್ಲಿ ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಹೇಗೆ ಹೋರಾಟ ಮಾಡಿದರು ಎಂಬುದನ್ನು ಪ್ರಶಂಸಿಸುವರು. • ಅಮರಸುಳ್ಯ ಬಂಡಾಯವು ಒಂದು ರೈತ ಬಂಡಾಯ ಹೇಗೆ ಎಂಬುದನ್ನು ವಿವರಿಸುವರು. • ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಹಲಗಲಿ ಬೇಡರ ದಂಗೆಯನ್ನು ಪ್ರಶಂಸಿಸುವರು.
5	ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು	• 19ನೆಯ ಶತಮಾನವನ್ನು 'ಭಾರತೀಯ ಪುನರುಜ್ಜೀವನ' ಕಾಲವೆಂದು ತಿಳಿಯುವರು. • ಬ್ರಹ್ಮ ಸಮಾಜ, ಆರ್ಯ ಸಮಾಜ, ಪ್ರಾರ್ಥನಾ ಸಮಾಜ, ಸತ್ಯಶೋಧಕ ಸಮಾಜಗಳ ಸ್ಥಾಪನೆ ಮತ್ತು ಸುಧಾರಣೆಗಳನ್ನು ತಿಳಿಯುವರು. • ಯುವ ಬಂಗಾಳಿ ಹಾಗೂ ಅಲಿಘರ್ ಚಳವಳಿಗಳನ್ನು ವಿವರಿಸುವರು. • ರಾಮಕೃಷ್ಣ ಮಿಷನ್‌ನ ಬೋಧನೆಗಳನ್ನು ತಿಳಿಯುವರು. • ಥಿಯೊಸಾಫಿಕಲ್ ಸೊಸೈಟಿಯ ವಿಚಾರಗಳನ್ನು ವಿವರಿಸುವರು. • ನಾರಾಯಣಗುರು ಅವರ ಧರ್ಮಪರಿಪಾಲನಾ ಯೋಗಂ ಹಾಗೂ ಪೆರಿಯಾರ್ ರವರ ವಿಚಾರಗಳನ್ನು ತಿಳಿಯುವರು.

6	ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)	• ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳನ್ನು ವಿವರಿಸುವರು. • ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣವನ್ನು ತಿಳಿಯುವರು. • ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸ್ಫೋಟ ಮತ್ತು ಹರಡುವಿಕೆಯನ್ನು ತಿಳಿಯುವರು. • ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳು ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವರು.
7	ಸ್ವಾತಂತ್ರ್ಯ ಹೋರಾಟ	• ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬಗ್ಗೆ ಅರಿಯುವರು. • ಮಂದಗಾಮಿಗಳು, ತೀವ್ರವಾದಿಗಳು ಹಾಗೂ ಕ್ರಾಂತಿಕಾರಿಗಳನ್ನು ಗುರುತಿಸುವರು. • ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀ ಯುಗದ ಬಗ್ಗೆ ತಿಳಿಯುವರು. • ರೈತರು ಮತ್ತು ಕಾರ್ಮಿಕರ ಪ್ರತಿಭಟನೆಗಳ ಬಗ್ಗೆ ಮಾಹಿತಿ ಪಡೆಯುವರು. • ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಪಾತ್ರವನ್ನು ತಿಳಿಯುವರು. • ಭಾರತದ ವಿಭಜನೆಯ ಬಗ್ಗೆ ಅರಿಯುವರು.
8	ಸ್ವಾತಂತ್ರ್ಯೋತ್ತರಭಾರತ	• ಭಾರತದ ವಿಭಜನೆಯ ಪರಿಣಾಮಗಳನ್ನು ತಿಳಿಯುವರು. • ಭಾರತದ ನಿರಾಶ್ರಿತರ ಸಮಸ್ಯೆಯನ್ನು ಅರಿಯುವರು. • ಭಾರತ ಸರ್ಕಾರದ ರಚನೆಯ ಸಮಸ್ಯೆಯನ್ನು ಅರಿಯುವರು. • ದೇಶೀಯ ಸಂಸ್ಥಾನಗಳ ವಿಲೀನೀಕರಣದ ಮಹತ್ವವನ್ನು ಅರಿಯುವರು. • ರಾಜ್ಯಗಳ ಪುನರ್ ವಿಂಗಡಣಾ ಕಾನೂನಿನ ಬಗ್ಗೆ ತಿಳಿಯುವರು.
9	ಮಹಾಯುದ್ಧಗಳು ಹಾಗೂ ಭಾರತದ ಪಾತ್ರ	• ಪ್ರಥಮ ಮಹಾಯುದ್ಧದ ಕಾರಣಗಳು ಮತ್ತು ಪರಿಣಾಮಗಳನ್ನು ತಿಳಿಯುವರು. • ಜರ್ಮನಿಯ ಸರ್ವಾಧಿಕಾರಿಯಾದ ಹಿಟ್ಲರನ ನಾಜಿವಾದದ ಬಗ್ಗೆ ವಿವರಿಸುವರು. • ಇಟಲಿಯ ಸರ್ವಾಧಿಕಾರಿಯಾದ ಮುಸೋಲಿನಿಯ ಫ್ಯಾಸಿಸ್ಟ್ ವಾದದ ಬಗ್ಗೆ ತಿಳಿಯುವರು. • ಎರಡನೆಯ ಮಹಾಯುದ್ಧದ ಕಾರಣಗಳು ಮತ್ತು ಪರಿಣಾಮಗಳನ್ನು ವಿವರಿಸುವರು. • ಮಹಾಯುದ್ಧಗಳಲ್ಲಿ ಭಾರತದ ಪಾತ್ರವನ್ನು ತಿಳಿಯುವರು.
	ರಾಜ್ಯಶಾಸ್ತ್ರ	
1	ಸಾರ್ವಜನಿಕ ಆಡಳಿತ – ಒಂದು ಪರಿಚಯ	• ಸಾರ್ವಜನಿಕ ಆಡಳಿತದ ಅರ್ಥ ಗ್ರಹಿಸುವರು. • ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯನ್ನು ಅರಿಯುವರು. • ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ಅರಿಯುವರು. • ನೇಮಕಾತಿಯ ಅರ್ಥವನ್ನು ಗ್ರಹಿಸಿ, ನೇಮಕಾತಿಯ ವಿಧಾನಗಳನ್ನು ವ್ಯತ್ಯಸಿಸುವರು. • ಕೇಂದ್ರ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಲೋಕಸೇವಾ ಆಯೋಗದ ರಚನೆ ಮತ್ತು ಕಾರ್ಯಗಳನ್ನು ತಿಳಿಯುವರು. • ಕೇಂದ್ರ ಗೃಹಮಂತ್ರಾಲಯದ ಸಶಸ್ತ್ರ ಸೈನಿಕ ಪಡೆಗಳನ್ನು ಪಟ್ಟಿ ಮಾಡುವರು.
2	ಭಾರತಕ್ಕಿರುವ ಸವಾಲುಗಳು ಮತ್ತು ಅವುಗಳ ಪರಿಹಾರೋಪಾಯಗಳು	• ಕೋಮುವಾದದ ಅರ್ಥ ಗ್ರಹಿಸಿ, ನಿಯಂತ್ರಿಸುವ ಕ್ರಮಗಳನ್ನು ಪಟ್ಟಿ ಮಾಡುವರು. • ಪ್ರಾದೇಶಿಕವಾದ ಮತ್ತು ಉಪಪ್ರಾದೇಶಿಕವಾದದ ಪರಿಕಲ್ಪನೆಗಳನ್ನು ಅರಿಯುವರು. • ಅನಕ್ಷರತೆಯನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳನ್ನು ಅರಿಯುವರು. • ಮಹಿಳೆಯ ಸ್ಥಾನಮಾನದ ಸುಧಾರಣೆಗೆ/ಲಿಂಗತಾರತಮ್ಯ ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪ್ರಶಂಸಿಸುವರು. • ಲಿಂಗತ್ವ ಅಲ್ಪ ಸಂಖ್ಯಾತರು ಎಂಬ ಪರಿಕಲ್ಪನೆಯನ್ನು ಗ್ರಹಿಸಿ ಅವರ ಸಬಲೀಕರಣಕ್ಕಾಗಿ ಕೈಗೊಂಡಿರುವ ಉಪಕ್ರಮಗಳನ್ನು ಪಟ್ಟಿ ಮಾಡುವರು. • ಜನಸಂಖ್ಯಾ ಸ್ಫೋಟದಿಂದ ಉಂಟಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮಾರ್ಗಗಳನ್ನು ಅನ್ವೇಷಿಸುವರು. • ಕಳ್ಳ ಸಾಗಾಣಿಕೆಯ ದುಷ್ಪರಿಣಾಮಗಳನ್ನು ಅರಿತು ಪರಿಹಾರಗಳನ್ನು ಸೂಚಿಸುವರು. • ದಿನಿತ್ಯದ ಜೀವನದಲ್ಲಿ ಲಾಭಕೋರತನದಿಂದ ಆಗುವ ದುಷ್ಪರಿಣಾಮಗಳನ್ನು ಗುರುತಿಸುವರು. • ಭ್ರಷ್ಟಾಚಾರದ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪ್ರಶಂಸಿಸುವರು.

3	ಭಾರತದ ವಿದೇಶಾಂಗ ನೀತಿ ಹಾಗೂ ಜಾಗತಿಕ ಸವಾಲುಗಳು	• ಭಾರತದ ವಿದೇಶಾಂಗ ನೀತಿಯ ವಿಕಾಸದ ಹಂತಗಳನ್ನು ತಿಳಿಯುವರು. • ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳನ್ನು ಅರಿಯುವರು. • ಜಾಗತಿಕವಾಗಿ ಮಾನವ ಹಕ್ಕುಗಳ ರಕ್ಷಣೆಗಾಗಿ ನಡೆದ ಹೋರಾಟಗಳನ್ನು ಸ್ಮರಿಸುವರು. • ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಭಾರತ ಕೈಗೊಂಡಿರುವ ಕ್ರಮಗಳನ್ನು ವಿವರಿಸುವರು. • ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ದುಷ್ಪರಿಣಾಮಗಳನ್ನು ತಿಳಿದು, ಪರಿಹಾರಗಳನ್ನು ಸೂಚಿಸುವರು. • ಭಯೋತ್ಪಾದಕತೆಯ ಪರಿಣಾಮಗಳನ್ನು ತಿಳಿದು ಅದಕ್ಕೆ ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪ್ರಶಂಸಿಸುವರು.
4	ಜಾಗತಿಕ ಸಂಸ್ಥೆಗಳು	• ವಿಶ್ವಸಂಸ್ಥೆ ಮತ್ತು ಅದರ ಅಂಗಸಂಸ್ಥೆಗಳ ರಚನೆ ಮತ್ತು ಕಾರ್ಯಗಳನ್ನು ವಿವರಿಸುವರು. • ವಿಶ್ವಸಂಸ್ಥೆಯ ಸಾಧನೆಗಳನ್ನು ಪಟ್ಟಿ ಮಾಡುವರು. • ವಿಶ್ವ ಆರೋಗ್ಯ ಸಂಸ್ಥೆಯ ಸಾಧನೆಗಳನ್ನು ಸ್ಮರಿಸುವರು. • ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘಸಂಸ್ಥೆಗಳಾದ ಆಹಾರ ಮತ್ತು ಕೃಷಿ ಸಂಸ್ಥೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಯುನಿಸೆಫ್, ಯುನೆಸ್ಕೋ ಮುಂತಾದವುಗಳ ಸೇವೆಗಳನ್ನು ಸ್ಮರಿಸುವರು. • ಪ್ರಾದೇಶಿಕ ಸಹಕಾರ ಸಂಸ್ಥೆಗಳ ರಚನೆ, ಕಾರ್ಯಗಳು ಮತ್ತು ಮಹತ್ವವನ್ನು ತಿಳಿಯುವರು.
	ಸಮಾಜಶಾಸ್ತ್ರ	
1	ಸಾಮಾಜಿಕ ಸ್ಥರವಿನ್ಯಾಸ	• ಸಾಮಾಜಿಕ ಸ್ತರವಿನ್ಯಾಸದ ಬಗ್ಗೆ ತಿಳಿಯುವರು. • ಜನರಲ್ಲಿನ ಭಿನ್ನತೆಯನ್ನು ಅರ್ಥೈಸಿಕೊಳ್ಳುವರು. • ಸಾಮಾಜಿಕ ಅಸಮಾನತೆಯ ಬಗ್ಗೆ ತಿಳಿಯುವರು. • ಪೂರ್ವಾಗ್ರಹವನ್ನು ಗ್ರಹಿಸುವರು. • ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಎಂಬುದನ್ನು ಅರಿಯುವರು. • ಅಸ್ಪೃಶ್ಯತೆಯ ನಿವಾರಣಾ ಕ್ರಮಗಳನ್ನು ತಿಳಿಯುವರು.
2	ದುಡಿಮೆ ಮತ್ತು ಆರ್ಥಿಕ ಜೀವನ	• ಶ್ರಮ ವಿಭಜನೆ ಮತ್ತು ವರ್ಗಗಳನ್ನು ತಿಳಿಯುವರು. • ವಿಶೇಷ ಪರಿಣತಿಯನ್ನು ಅರಿಯುವರು. • ಕೂಲಿ ಸಹಿತ ಮತ್ತು ಕೂಲಿ ರಹಿತ ದುಡಿಮೆ ನಡುವಿನ ವ್ಯತ್ಯಾಸ ತಿಳಿಯುವರು. • ದುಡಿಮೆಯಲ್ಲಿ ಭೇದ– ಭಾವದ ಬಗ್ಗೆ ಅರಿಯುವರು. • ನಿರುದ್ಯೋಗಕ್ಕೆ ಕಾರಣ, ಪರಿಣಾಮ ಮತ್ತು ಪರಿಹಾರೋಪಾಯಗಳನ್ನು ತಿಳಿಯುವರು. • ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ತಿಳಿಯುವರು. • ಅಸಂಘಟಿತ ಕೆಲಸಗಾರರ ಸಮಸ್ಯೆಗಳನ್ನು ಅರಿಯುವರು.
3	ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು	• ಸಮೂಹ ವರ್ತನೆಯ ವಿವಿಧ ರೂಪಗಳನ್ನು ಪಟ್ಟಿ ಮಾಡುವರು. • ಜನಮಂದೆ– ಅರ್ಥ, ಸ್ವರೂಪ, ಪ್ರಭಾವವನ್ನು ವಿವರಿಸುವರು. • ದೊಂಬಿ– ಅರ್ಥ, ಸ್ವರೂಪ, ಪ್ರಭಾವವನ್ನು ವಿವರಿಸುವರು. • ಮಹಿಳಾ ಚಳವಳಿಗಳ ಬಗ್ಗೆ ತಿಳಿಯುವರು. • ರೈತ, ಕಾರ್ಮಿಕ ಮತ್ತು ಅಸ್ಪೃಶ್ಯತಾ ಆಚರಣೆ ವಿರೋಧಿ ಚಳವಳಿಗಳನ್ನು ತಿಳಿಯುವರು.
4	ಸಾಮಾಜಿಕ ಸವಾಲುಗಳು	• ಸಾಮಾಜಿಕ ಸವಾಲುಗಳನ್ನು ಪಟ್ಟಿ ಮಾಡುವರು. • ಬಾಲಕಾರ್ಮಿಕ ಸಮಸ್ಯೆ– ಕಾರಣ, ಪರಿಣಾಮ, ಸಮಸ್ಯೆಗಳ ನಿರ್ಮೂಲನೆಗಾಗಿ ಇರುವ ಸಾಂವಿಧಾನಿಕ ಪರಿಹಾರ ಕ್ರಮಗಳನ್ನು ತಿಳಿಯುವರು. • ಬಾಲ್ಯವಿವಾಹಕ್ಕೆ ಕಾರಣ, ಪರಿಣಾಮ, ನಿಯಂತ್ರಣ ಕ್ರಮಗಳನ್ನು ತಿಳಿಯುವರು. • ವರದಕ್ಷಿಣೆ– ಸ್ವರೂಪ, ಪರಿಣಾಮಗಳು, ಪರಿಹಾರ ಕ್ರಮಗಳನ್ನು ತಿಳಿಯುವರು. • ಹೆಣ್ಣು ಭ್ರೂಣಹತ್ಯೆ, ಹೆಣ್ಣು ಶಿಶುಹತ್ಯೆಯ ಅರ್ಥ ಹಾಗೂ ನಿಯಂತ್ರಣ ಕ್ರಮಗಳನ್ನು ತಿಳಿಯುವರು.
	ಭೂಗೋಳಶಾಸ್ತ್ರ	
1	ಭಾರತ : ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು	• ಭಾರತ ಎಂಬ ಹೆಸರಿನ ಹಿನ್ನೆಲೆ ಹಾಗೂ ವೈವಿಧ್ಯತೆಯನ್ನು ತಿಳಿಸುವರು. • ಭಾರತದ ಭೌಗೋಳಿಕ ಸ್ಥಾನ, ವಿಸ್ತೀರ್ಣ, ಭೂ ಮತ್ತು ಜಲ ಮೇರೆಗಳು ಹಾಗೂ ನೆರೆಯ ರಾಷ್ಟ್ರಗಳನ್ನು ಹೆಸರಿಸುವರು.

		• ಭಾರತದ ಪ್ರಾಕೃತಿಕ ವಿಭಾಗಗಳನ್ನು ಹೆಸರಿಸುವರು. • ಭಾರತದ ಭೂಪಟದಲ್ಲಿ ಭಾರತದ ಪ್ರಾಕೃತಿಕ ವಿಭಾಗಗಳನ್ನು ಗುರುತಿಸುವರು.
2	ಭಾರತದ ಋತುಗಳು.	• ಭಾರತದ ವಾಯುಗುಣದ ಪ್ರಮುಖ ಲಕ್ಷಣಗಳನ್ನು ಗುರುತಿಸುವರು. • ಭಾರತದ ಋತುಮಾನಗಳ ವಾಯುಗುಣದ ಪರಿಸ್ಥಿತಿಯನ್ನು ವಿಶ್ಲೇಷಿಸುವರು. • ಭಾರತದ ಋತುಕಾಲಿಕ ಮಳೆಯ ಹಂಚಿಕೆಯನ್ನು ವಿವರಿಸುವರು. • ಭಾರತದಲ್ಲಿ ಹೆಚ್ಚು ಮಳೆ ಪಡೆಯುವ ಮತ್ತು ಕಡಿಮೆ ಮಳೆ ಪಡೆಯುವ ಪ್ರದೇಶಗಳನ್ನು ಹೆಸರಿಸುವರು.
3	ಭಾರತದ ಮಣ್ಣುಗಳು	• ಭಾರತದ ಮಣ್ಣಿನ ವಿಧಗಳನ್ನು ಪಟ್ಟಿ ಮಾಡುವರು. • ಭಾರತದ ಮಣ್ಣುಗಳ ಹಂಚಿಕೆ, ಲಕ್ಷಣಗಳು, ಬೆಳೆಯುವ ಬೆಳೆಗಳನ್ನು ಕುರಿತು ವಿವರಿಸುವರು. • ಭಾರತದ ವಿವಿಧ ಮಣ್ಣುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಯುವರು. • ಮಣ್ಣಿನ ಸವೆತಕ್ಕೆ ಕಾರಣಗಳನ್ನು ತಿಳಿಯುವರು. • ಮಣ್ಣಿನ ಸವೆತದ ಪರಿಣಾಮಗಳನ್ನು ಅರಿಯುವರು. • ಮಣ್ಣಿನ ಸವೆತವನ್ನು ತಡೆಗಟ್ಟಲು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಅರಿಯುವರು.
4	ಭಾರತದ ಅರಣ್ಯ ಸಂಪತ್ತು	• ಭಾರತದ ಅರಣ್ಯಗಳ ವಿಧಗಳನ್ನು ತಿಳಿಯುವರು. • ಭಾರತದಲ್ಲಿ ಅರಣ್ಯಗಳ ಹಂಚಿಕೆಯನ್ನು ತಿಳಿಯುವರು. • ವಿವಿಧ ಅರಣ್ಯಗಳ ನಡುವಿನ ವ್ಯತ್ಯಾಸಗಳನ್ನು ತಿಳಿಯುವರು. • ಅರಣ್ಯಗಳಿಂದಾಗುವ ಪ್ರಯೋಜನಗಳನ್ನು ವಿವರಿಸುವರು. • ಭಾರತದ ವನ್ಯಜೀವಿಧಾಮಗಳು, ರಾಷ್ಟ್ರೀಯ ಉದ್ಯಾನವನಗಳು ಹಾಗೂ ಜೀವಿಗೋಳ ಮೀಸಲು ಪ್ರದೇಶಗಳ ಬಗ್ಗೆ ತಿಳಿಯುವರು.
5	ಭಾರತದ ಜಲಸಂಪನ್ಮೂಲಗಳು	• ನೀರಾವರಿಯ ಮಹತ್ವವನ್ನು ಅರಿಯುವರು. • ನೀರಾವರಿಯ ವಿಧಗಳನ್ನು ತಿಳಿಯುವರು. • ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳನ್ನು ಅರಿಯುವರು. • ಭಾರತದ ಪ್ರಮುಖ ಜಲ ವಿದ್ಯುಚ್ಛಕ್ತಿ ಯೋಜನೆಗಳ ಬಗ್ಗೆ ತಿಳಿಯುವರು. • ರಾಷ್ಟ್ರೀಯ ವಿದ್ಯುತ್ ಜಾಲದ ಮಹತ್ವವನ್ನು ಅರಿಯುವರು. • ಮಳೆ ನೀರು ಸಂಗ್ರಹಣೆಯ ಮಹತ್ವವನ್ನು ತಿಳಿಯುವರು.
6	ಭಾರತದ ಭೂ ಬಳಕೆ ಹಾಗೂ ಕೃಷಿ	• ಭೂಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಅರಿಯುವರು. • ಭೂ ಬಳಕೆಯ ಪ್ರಕಾರಗಳ ಬಗ್ಗೆ ತಿಳಿಯುವರು. • ವ್ಯವಸಾಯದ ಪ್ರಾಮುಖ್ಯತೆಯನ್ನು ಅರಿಯುವರು. • ವ್ಯವಸಾಯದ ವಿಧಗಳ ಬಗ್ಗೆ ತಿಳಿಯುವರು. • ಬೆಳೆಗಳ ಮಾದರಿಯನ್ನು ನಿರ್ಧರಿಸುವ ಅಂಶಗಳ ಬಗ್ಗೆ ಅರಿಯುವರು. • ಬೆಳೆಗಳ ವಿಧಗಳು ಮತ್ತು ಪುಷ್ಪ ಬೇಸಾಯದ ಬಗ್ಗೆ ಅರಿಯುವರು.
7	ಭಾರತದ ಖನಿಜ ಹಾಗೂ ಶಕ್ತಿ ಸಂಪನ್ಮೂಲಗಳು	• ಭಾರತದಲ್ಲಿ ದೊರೆಯುವ ಖನಿಜಗಳ ಪರಿಚಯ ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ಅರಿಯುವರು. • ಭಾರತದ ಪ್ರಮುಖ ಖನಿಜಗಳ ಹಂಚಿಕೆ ಹಾಗೂ ಉತ್ಪಾದನೆಯನ್ನು ತಿಳಿಯುವರು. • ಅಸಾಂಪ್ರದಾಯಿಕ ಶಕ್ತಿ ಮೂಲಗಳಾದ ಸೌರಶಕ್ತಿ, ಪವನಶಕ್ತಿಯ ಅವಶ್ಯಕತೆಯನ್ನು ಅರಿಯುವರು. • ಶಕ್ತಿ ಸಂಪನ್ಮೂಲಗಳ ಕೊರತೆಗೆ ಕಾರಣಗಳನ್ನು ತಿಳಿಯುವರು. • ಶಕ್ತಿ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಪರಿಹಾರೋಪಾಯಗಳನ್ನು ಅರಿಯುವರು.
8	ಭಾರತದ ಸಾರಿಗೆ ಹಾಗೂ ಸಂಪರ್ಕ	• ಭಾರತದಲ್ಲಿ ಸಾರಿಗೆಯ ಮಹತ್ವವನ್ನು ತಿಳಿಯುವರು. • ರಸ್ತೆ ಸಾರಿಗೆಯ ವಿಧಗಳು, ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಅರಿಯುವರು. • ರಸ್ತೆ ಸಾರಿಗೆಯ ಸಮಸ್ಯೆಗಳನ್ನು ತಿಳಿಯುವರು. • ರೈಲು ಸಾರಿಗೆ, ವಾಯು ಸಾರಿಗೆ ಮತ್ತು ಜಲಸಾರಿಗೆಗಳ ಬಗ್ಗೆ ತಿಳಿಯುವರು. • ಸಂಪರ್ಕ ಮಾಧ್ಯಮಗಳು, ಸಂಪರ್ಕದ ಪ್ರಾಮುಖ್ಯತೆಯ ಬಗ್ಗೆ ಅರಿಯುವರು.

	• ಭಾರತದ ನಕಾಶೆಯಲ್ಲಿ ಪ್ರಮುಖ ಬಂದರುಗಳು ಹಾಗೂ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಗುರುತಿಸುವರು.
9	ಭಾರತದ ಪ್ರಮುಖ ಕೈಗಾರಿಕೆಗಳು	• ಭಾರತದ ಕೈಗಾರಿಕೆಗಳ ಮಹತ್ವವನ್ನು ತಿಳಿಯುವರು. • ಭಾರತದ ಪ್ರಮುಖ ಕೈಗಾರಿಕಾ ವಲಯಗಳನ್ನು ಪರಿಚಯಿಸುವರು. • ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಅರ್ಥೈಸುವರು. • ಭಾರತದ ವಿವಿಧ ಕೈಗಾರಿಕೆಗಳನ್ನು ಪರಿಚಯಿಸುವರು. • ಜ್ಞಾನಾಧಾರಿತ ಕೈಗಾರಿಕೆಗಳ ಬಗ್ಗೆ ಮಾಹಿತಿ ಒದಗಿಸುವರು.
10	ಭಾರತದ ನೈಸರ್ಗಿಕ ವಿಕೋಪಗಳು	• ನೈಸರ್ಗಿಕ ವಿಕೋಪಗಳ ಅರ್ಥವನ್ನು ಅರಿಯುವರು. • ನೈಸರ್ಗಿಕ ವಿಕೋಪಗಳ ಬಗ್ಗೆ ತಿಳಿಯುವರು. • ನೈಸರ್ಗಿಕ ವಿಕೋಪಗಳಿಗೆ ಕಾರಣ, ಪರಿಣಾಮಗಳು ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಯುವರು. • ಭಾರತದಲ್ಲಿ ನೈಸರ್ಗಿಕ ವಿಕೋಪಗಳಿಗೆ ಒಳಪಡುವ ಪ್ರದೇಶಗಳನ್ನು ನಕ್ಷೆಯಲ್ಲಿ ಗುರುತಿಸುವರು.
ಅರ್ಥಶಾಸ್ತ್ರ		
1	ಅರ್ಥ ವ್ಯವಸ್ಥೆ ಮತ್ತು ಸರಕಾರ	• ಅರ್ಥ ವ್ಯವಸ್ಥೆ ಮತ್ತು ಸರಕಾರದ ನಡುವಿನ ಸಂಬಂಧವನ್ನು ವಿಶ್ಲೇಷಿಸುವರು. • ಭಾರತದಲ್ಲಿ ಯೋಜನೆಯ ಮಹತ್ವವನ್ನು ತಿಳಿಯವರು. • ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು, ಸಾಧನೆಗಳು ಹಾಗೂ ವಿಫಲತೆಗಳನ್ನು ವಿಶ್ಲೇಷಿಸುವರು. • ಹಸಿರು ಕ್ರಾಂತಿ ಮತ್ತು ಸದಾ ಹಸಿರು ಕ್ರಾಂತಿಯನ್ನು ಅರ್ಥೈಸುವರು.
2	ಗ್ರಾಮೀಣಾಭಿವೃದ್ಧಿ	• ಗ್ರಾಮೀಣಾಭಿವೃದ್ಧಿಯ ಅರ್ಥ ಮತ್ತು ಮಹತ್ವ ವಿವರಿಸುವರು. • ವಿಕೇಂದ್ರೀಕರಣದ ಅರ್ಥ ಮತ್ತು ಪ್ರಾಮುಖ್ಯತೆಯನ್ನು ವಿವರಿಸುವರು. • ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸುವರು. • ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರವನ್ನು ವಿವರಿಸುವರು.
3	ಸಾರ್ವಜನಿಕ ಹಣಕಾಸು ಹಾಗೂ ಆಯ–ವ್ಯಯ	• ಸಾರ್ವಜನಿಕ ಹಣಕಾಸಿನ ಅರ್ಥ ಮತ್ತು ಮಹತ್ವವನ್ನು ವಿವರಿಸುವರು. • ಆಯ–ವ್ಯಯದ ಪರಿಕಲ್ಪನೆಯನ್ನು ವಿವರಿಸುವರು. • ಸಾರ್ವಜನಿಕ ಆದಾಯದ ಮತ್ತು ಸಾರ್ವಜನಿಕ ವೆಚ್ಚಗಳ ಮೂಲಗಳನ್ನು ಗುರುತಿಸುವರು. • ಕೊರತೆ ಹಣಕಾಸಿನ ಬಗ್ಗೆ ಅರಿಯುವರು. • ವಿತ್ತೀಯ ಕೊರತೆಯ ಬಗ್ಗೆ ತಿಳಿಯುವರು.
ವ್ಯವಹಾರ ಅಧ್ಯಯನ		
1	ಬ್ಯಾಂಕ್ ವ್ಯವಹಾರಗಳು	• ಹಣಕಾಸಿನ ವ್ಯವಹಾರಗಳಲ್ಲಿ ಬ್ಯಾಂಕುಗಳು ಮತ್ತು ಅಂಚೆ ಕಚೇರಿಗಳ ಪಾತ್ರವನ್ನು ತಿಳಿಯುವರು. • ಬ್ಯಾಂಕುಗಳ ಗುಣ ಲಕ್ಷಣಗಳು, ಬ್ಯಾಂಕು ಖಾತೆಗಳಿಂದಾಗುವ ಅನುಕೂಲಗಳು, ಬ್ಯಾಂಕು ಸಲ್ಲಿಸುವ ಸೇವೆಗಳನ್ನು ತಿಳಿಯುವರು. • ಬ್ಯಾಂಕಿನಲ್ಲಿ ತೆರೆಯಬಹುದಾದ ವಿವಿಧ ಖಾತೆಗಳನ್ನು ಪಟ್ಟಿ ಮಾಡುವರು. • ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯುವ ವಿಧಾನವನ್ನು ತಿಳಿಯುವರು.
2	ಉದ್ಯಮ ಶೀಲತೆ	• ಉದ್ಯಮಶೀಲತೆಯ ಲಕ್ಷಣಗಳನ್ನು ಪಟ್ಟಿ ಮಾಡುವರು. • ಉದ್ಯಮಿಯ ಪಾತ್ರ ಮತ್ತು ಪ್ರಾಮುಖ್ಯತೆಯನ್ನು ವಿವರಿಸುವರು. • ಸ್ವಯಂ ಉದ್ಯೋಗ ಕೈಗೊಳ್ಳಲು ಇರುವ ಅವಕಾಶಗಳನ್ನು ಪಟ್ಟಿ ಮಾಡುವರು. • ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳನ್ನು ಪಟ್ಟಿ ಮಾಡುವರು. • ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸೇವೆಗಳನ್ನು ವಿವರಿಸುವರು.
3	ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ	• ಗ್ರಾಹಕರ ಹಕ್ಕುಗಳನ್ನು ಪಟ್ಟಿ ಮಾಡುವರು. • ಗ್ರಾಹಕರ ಶೋಷಣೆ ಹಾಗೂ ಜಾಗೃತಿಯನ್ನು ವಿವರಿಸುವರು. • ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯಾಂಶಗಳು ಮತ್ತು ಮಹತ್ವವನ್ನು ವಿಶ್ಲೇಷಿಸುವರು. • ಗ್ರಾಹಕ ನ್ಯಾಯಾಲಯಕ್ಕೆ ದೂರು ಸಲ್ಲಿಸುವ ವಿಧಾನವನ್ನು ಅರಿಯುವರು.

10ನೇ ತರಗತಿ ಸಮಾಜವಿಜ್ಞಾನ ಪ್ರಶ್ನೆಪತ್ರಿಕೆಯ ವಿನ್ಯಾಸ

ವಿಭಾಗವಾರು ಅಂಕ ಹಂಚಿಕೆ

ವಿಭಾಗ	ಅಂಕಗಳು
ಇತಿಹಾಸ	25
ರಾಜ್ಯಶಾಸ್ತ್ರ	11
ಸಮಾಜಶಾಸ್ತ್ರ	8
ಭೂಗೋಳಶಾಸ್ತ್ರ	22
ಅರ್ಥಶಾಸ್ತ್ರ	7
ವ್ಯವಹಾರ ಅಧ್ಯಯನ	7

ಉದ್ದಿಷ್ಟವಾರು ಅಂಕ ಹಂಚಿಕೆ

ಉದ್ದಿಷ್ಟ	ಅಂಕ	% ಅಂಕ
ಜ್ಞಾನ	13	16
ತಿಳುವಳಿಕೆ	40	50
ಅನ್ವಯ	22	28
ಕೌಶಲ	5	6
ಒಟ್ಟು	80	100

ಕಠಿಣತೆ ಆಧರಿಸಿ ಅಂಕ ಹಂಚಿಕೆ

ಕಠಿಣತೆ ಮಟ್ಟ	ಅಂಕಗಳು	% ಅಂಕ
ಸುಲಭ	24	30
ಸಾಧಾರಣ	40	50
ಕಠಿಣ	16	20
ಒಟ್ಟು	80	100

ಪ್ರಶ್ನೆ ಸ್ವರೂಪವಾರು ಅಂಕ ಹಂಚಿಕೆ

ಕ್ರ ಸಂ	ಪ್ರಶ್ನೆಯ ವಿಧ	ಪ್ರಶ್ನೆ ಸಂಖ್ಯೆ	ಅಂಕ	ಒಟ್ಟು ಅಂಕ
1	ಬಹುಆಯ್ಕೆ ಪ್ರಶ್ನೆ	8	1	8
2	1 ಅಂಕದ ಪ್ರಶ್ನೆ	8	1	8
3	2 ಅಂಕದ ಪ್ರಶ್ನೆ	8	2	16
4	3 ಅಂಕದ ಪ್ರಶ್ನೆ	9	3	27
5	4 ಅಂಕದ ಪ್ರಶ್ನೆ	4	4	16
6	5 ಅಂಕದ ಪ್ರಶ್ನೆ (Map)	1	5	5
	ಒಟ್ಟು	38	–	80

ಪ್ರಶ್ನೆವಾರು, ವಿಭಾಗವಾರು ಅಂಕಗಳ ಹಂಚಿಕೆ

ವಿಭಾಗ	ಬಹು ಆಯ್ಕೆ	1 ಅಂಕ	2 ಅಂಕ	3 ಅಂಕ	4 ಅಂಕ	5 ಅಂಕ	ಪ್ರಶ್ನೆ	ಅಂಕ
ಇತಿಹಾಸ	2	2	2	3	2	–	11	25
ರಾಜ್ಯಶಾಸ್ತ್ರ	1	1	1	1	1	–	5	11
ಸಮಾಜಶಾಸ್ತ್ರ	2	1	1	1	–	–	5	8
ಭೂಗೋಳಶಾಸ್ತ್ರ	1	2	2	2	1	1 (Map)	9	22
ಅರ್ಥಶಾಸ್ತ್ರ	1	1	1	1	–	–	4	7
ವ್ಯ. ಅಧ್ಯಯನ	1	1	1	1	–	–	4	7
ಒಟ್ಟು ಅಂಕಗಳು	8(8)	8(8)	16(8)	27(9)	16(4)	5(1)	38	80

ಆಯ್ಕೆ ಪ್ರಶ್ನೆಗಳು	2 ಅಂಕಗಳ ಆಯ್ಕೆ ಪ್ರಶ್ನೆಗಳು	ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ.
	3 ಅಂಕಗಳ ಆಯ್ಕೆ ಪ್ರಶ್ನೆಗಳು	ಇತಿಹಾಸ, ಭೂಗೋಳ, ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ
	4 ಅಂಕದ ಆಯ್ಕೆ ಪ್ರಶ್ನೆ	ಇತಿಹಾಸ
ನಕ್ಷೆ ಸ್ಥಳಗಳು	ಪಠ್ಯಪುಸ್ತಕದ ನಕ್ಷೆಯಲ್ಲಿ ನೀಡಿರುವುದನ್ನು ಮತ್ತು ವಿವರಣೆಯಲ್ಲಿ ನೀಡಿರುವುದನ್ನು ಕೊಡಬೇಕು.	

ಇತಿಹಾಸ, ಅಧ್ಯಾಯ 1

ಭಾರತಕ್ಕೆ ಯೂರೋಪಿಯನ್ನರ ಆಗಮನ

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. `ಯುರೋಪಿನ ವ್ಯಾಪಾರದ ಹೆಬ್ಬಾಗಿಲು' ಎಂದು ಇದನ್ನು ಕರೆಯುತ್ತಾರೆ, (ಸುಲಭ)
   A) ರೋಂ B) ಕಾನ್‌ಸ್ಟಾಂಟಿನೋಪಲ್ C) ಪ್ಯಾರಿಸ್ D) ರಿಯಾದ್
2. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡು ಹಿಡಿದವರು, (ಜೂನ್–2022) (ಸುಲಭ)
   A) ವಾಸ್ಕೋಡಗಾಮ B) ಡೂಪ್ಲೆ C) ಆಲ್ಮೇಡ D) ಅಲ್ಬುಕರ್ಕ್
3. ನೀಲಿ ನೀರಿನ ನೀತಿಯನ್ನು ಜಾರಿಗೆ ತಂದ ಪೋರ್ಚುಗೀಸ್ ವೈಸರಾಯ್ (ಸುಲಭ)
   A) ವಾಸ್ಕೋಡಗಾಮ B) ಫ್ರಾನ್ಸಿಸ್ಕೊ ಡಿ ಅಲ್ಮೇಡ C) ಅಲ್ಫೋನ್ಸೊ–ಡಿ–ಅಲ್ಬುಕರ್ಕ್ D) ಡೂಪ್ಲೆ
4. ಮೊದಲ ಕಾರ್ನಾಟಿಕ್ ಯುದ್ಧವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು (ಸಾಧಾರಣ)
   A) ಪಾಂಡಿಚೇರಿ B) ಏಕ್ಸ್–ಲಾ–ಚಾಪೆಲ್ C) ಪ್ಯಾರಿಸ್ D) ವಾಂಡಿವಾಷ್
5. ಬಂಗಾಳದಲ್ಲಿ ಬ್ರಿಟಿಷರಿಗೆ ಮುಕ್ತ ವ್ಯಾಪಾರ ಮಾಡಲು ದಸ್ತಕಗಳನ್ನು ನೀಡಿದ ಮೊಘಲ್ ದೊರೆ (ಸುಲಭ)
   A) ಜಹಾಂಗೀರ್ B) ಎರಡನೇ ಷಾ ಆಲಂ C) ಬಹುದ್ದೂರ್ ಷಾ D) ಫಾರೂಕ್ ಸಿಯಾರ್

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

6. ದ್ವಿ ಸರ್ಕಾರ ಪದ್ಧತಿಯನ್ನು ಜಾರಿಗೆ ತಂದ ಬ್ರಿಟಿಷ್ ಅಧಿಕಾರಿ ಯಾರು? (ಜೂನ್–2020) (ಸುಲಭ)
7. ನೀಲಿ ನೀರಿನ ನೀತಿ ಎಂದರೇನು? (ಸಾಧಾರಣ)
8. 1453ರಲ್ಲಿ ಕಾನ್‌ಸ್ಟಾಂಟಿನೋಪಲ್ ಅನ್ನು ವಶಪಡಿಸಿಕೊಂಡವರು ಯಾರು? (ಜೂನ್–2020) (ಸುಲಭ)
9. ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ಯಾರು? (ಸುಲಭ)
10. ಮೂರನೆಯ ಕಾರ್ನಾಟಿಕ್ ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? (ಸಾಧಾರಣ)
11. ಭಾರತದಲ್ಲಿ ಫ್ರೆಂಚರ ರಾಜಧಾನಿ ಯಾವುದು? (ಸುಲಭ)
12. ವಾಸ್ಕೋಡಿಗಾಮನು ಭಾರತಕ್ಕೆ ಬಂದು ತಲುಪಿದ ಸ್ಥಳ ಯಾವುದು ? (ಸುಲಭ)
13. ಮಾರ್ತಾಂಡ ವರ್ಮನ ಆಳ್ವಿಕೆಯಲ್ಲಿ ವಿಶ್ವದ ಪ್ರಮುಖ ಸಾಂಬಾರ ಪದಾರ್ಥಗಳ ಕೇಂದ್ರವಾಗಿ ಗುರುತಿಸಲ್ಪಟ್ಟ ನಗರ ಯಾವುದು? (ಸಾ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

14. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ. (ಸೆಪ್ಟಂಬರ್–2020) (ಸಾಧಾರಣ)
15. ದ್ವಿಸರ್ಕಾರ ಪದ್ಧತಿಯನ್ನು ವಿವರಿಸಿ/ ದ್ವಿಮುಖ ಸರ್ಕಾರದಿಂದ ದೇಶದ ಬೊಕ್ಕಸಕ್ಕೆ ನಷ್ಟ ಸಂಭವಿಸಿತು. ಸಮರ್ಥಿಸಿ. (ಸಾಧಾರಣ)
16. ಎರಡನೆಯ ಕಾರ್ನಾಟಿಕ್ ಯುದ್ಧದ ಪರಿಣಾಮಗಳಾವುವು? (ಮಾರ್ಚ್–2020) (ಕಠಿಣ)
17. ಮೂರನೆಯ ಕಾರ್ನಾಟಿಕ್ ಯುದ್ಧದ ಫಲಿತಾಂಶಗಳೇನು? (ಮಾರ್ಚ್–2020) (ಕಠಿಣ)
18. ಬಕ್ಸಾರ್ ಕದನದ ಕಾರಣಗಳನ್ನು ತಿಳಿಸಿ. (ಏಪ್ರಿಲ್–2025) (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

19. ಬಕ್ಸಾರ್ ಕದನವು ಬಂಗಾಳದ ಮೇಲೆ ಬ್ರಿಟಿಷರು ಪ್ರಭುತ್ವ ಸಾಧಿಸುವಂತೆ ಮಾಡಿತು. ಸಮರ್ಥಿಸಿ./ ಬಕ್ಸಾರ್ ಕದನದ ಪರಿಣಾಮಗಳೇನು? (ಸೆಪ್ಟೆಂಬರ್–2022, ಏಪ್ರಿಲ್–2023, ಏಪ್ರಿಲ್–2024) (ಕಠಿಣ)

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

20. ಪ್ಲಾಸಿ ಕದನದ ಕಾರಣ ಮತ್ತು ಪರಿಣಾಮಗಳೇನು? (ಜೂನ್–2023) (ಸಾಧಾರಣ)
21. ಮಾರ್ತಾಂಡವರ್ಮನು ಡಚ್ಚರನ್ನು ಹೇಗೆ ನಿಯಂತ್ರಿಸಿದನು? (ಸಾಧಾರಣ)

ಇತಿಹಾಸ, ಅಧ್ಯಾಯ– 2

ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಮೊದಲ ಆಂಗ್ಲೋ–ಮರಾಠ ಯುದ್ಧವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು. (ಸೆಪ್ಟಂಬರ್–2020) (ಸುಲಭ)
   A) ಬೆಸ್ಸಿನ್ B) ಸಾಲ್ ಬಾಯ್ C) ಲಾಹೋರ್ D) ಪೂನಾ
2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು, (ಸೆಪ್ಟಂಬರ್–2022) (ಸುಲಭ)
   A) ಲಾರ್ಡ್ ಡಾಲ್ ಹೌಸಿ B) ಲಾರ್ಡ್ ವೆಲ್ಲೆಸ್ಲಿ C) ರಾಬರ್ಟ್ ಕ್ಲೈವ್ D) ಕೌಂಟ್ ಡಿ ಲಾಲಿ
3. ಸಹಾಯಕ ಸೈನ್ಯ ಪದ್ಧತಿ ಒಪ್ಪಂದಕ್ಕೆ ಸಹಿ ಹಾಕಿದ ಮೊದಲ ಸಂಸ್ಥಾನ, (ಏಪ್ರಿಲ್–2023) (ಸುಲಭ)
   A) ಹೈದರಾಬಾದ್ B) ಮೈಸೂರು C) ಮರಾಠ D) ಪಂಜಾಬ್
4. 3ನೇ ಆಂಗ್ಲೋ–ಮರಾಠ ಯುದ್ಧದ ನಂತರ ಬ್ರಿಟಿಷರು ಸತಾರಾದಲ್ಲಿ ಪ್ರತಿಷ್ಠಾಪಿಸಿದ ಸಾಂಪ್ರದಾಯಿಕ ಮುಖಂಡ (ಕಠಿಣ)
   A) ಸಾಂಬಾಜಿ B) ಶಿವಾಜಿ C) ಷಹಜಿ D) ಪ್ರತಾಪಸಿಂಹ
5. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತಂದವನು (ಸುಲಭ)
   A) ಲಾರ್ಡ್ ಡಾಲ್ ಹೌಸಿ B) ಲಾರ್ಡ್ ವೆಲ್ಲೆಸ್ಲಿ C) ರಾಬರ್ಟ್ ಕ್ಲೈವ್ D) ಕೌಂಟ್ ಡಿ ಲಾಲಿ
6. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದವರು (ಏಪ್ರಿಲ್–2024) (ಸಾಧಾರಣ)
   (A) ಲಾರ್ಡ್ ಡಾಲ್‌ಹೌಸಿ (B) ಲಾರ್ಡ್ ವೆಲ್ಲೆಸ್ಲಿ (C) ರಾಬರ್ಟ್ ಕ್ಲೈವ್ (D) ಲಾರ್ಡ್ ಕಾರ್ನ್ ವಾಲೀಸ್
7. ಎರಡನೇ ಆಂಗ್ಲೋ–ಮರಾಠ ಯುದ್ಧವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು. (ಜೂನ್–2023) (ಸಾಧಾರಣ)
   A) ಬೆಸ್ಸಿನ್ B) ಸಾಲ್ ಬಾಯ್ C) ಲಾಹೋರ್ D) ಪೂನಾ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

8. ಸಿಖ್ಖರನ್ನು ಸಂಘಟಿಸುವಲ್ಲಿ ಯಶಸ್ವಿಯಾದವನು ಯಾರು? (ಸಾಧಾರಣ)
9. ಸಹಾಯಕ ಸೈನ್ಯ ಪದ್ಧತಿ ಎಂದರೇನು? (ಸುಲಭ)
10. ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಬ್ರಿಟನ್‌ಗೆ ಹಿಂದಿರುಗಲು ಕಾರಣವೇನು? (ಜೂನ್–2022) (ಕಠಿಣ)
11. ಮೂರನೆಯ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣವೇನು? (ಸಾಧಾರಣ)
12. 1839 ರಲ್ಲಿ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಲು ಕಾರಣವೇನು? (ಕಠಿಣ)
13. ಮೊದಲನೇ ಆಂಗ್ಲೋ–ಮರಾಠ ಯುದ್ಧದ ಬಳಿಕ ಪೇಶ್ವೆಯಾದವನು ಯಾರು? (ಸೆಪ್ಟಂಬರ್–2022) (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

14. ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಣೆಗಾಗಿ ಅನುಸರಿಸಿದ ಮಾರ್ಗಗಳಾವುವು? (ಸಾಧಾರಣ)
15. ಮೊದಲ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣಗಳೇನು? (ಸಾಧಾರಣ)
16. ಮೂರನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣಗಳಾವುವು? (ಸಾಧಾರಣ)
17. ಮೂರನೇ ಆಂಗ್ಲೋ–ಮರಾಠ ಯುದ್ಧದ ಪರಿಣಾಮಗಳೇನು?/ ಮೂರನೇ ಆಂಗ್ಲೋ ಮರಾಠಾ ಯುದ್ಧವು ಮರಾಠರ ಅವನತಿಗೆ ಕಾರಣವಾಯಿತು. ಸಮರ್ಥಿಸಿ (ಕಠಿಣ)
18. ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು? (ಸುಲಭ)
19. ಎರಡನೇ ಆಂಗ್ಲೋ ಸಿಖ್ ಯುದ್ಧದಲ್ಲಿ ಸಿಖ್ ದಂಗೆಗಳ ನೇತೃತ್ವ ವಹಿಸಿದ್ದ ನಾಯಕರು ಯಾರು?

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

20. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು?/ ಸಹಾಯಕ ಸೈನ್ಯ ಪದ್ಧತಿಯು ದೇಶಿಯ ರಾಜರನ್ನು ಬಲಹೀನಗೊಳಿಸಿತು. ಹೇಗೆ?
    (ಜೂನ್–2022, ಜೂನ್–2023, ಜೂನ್–2024, ಏಪ್ರಿಲ್–2025, ಜೂನ್ 2025)

ಇತಿಹಾಸ, ಅಧ್ಯಾಯ 3

ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಕಲ್ಕತ್ತಾದಲ್ಲಿ ಸುಪ್ರೀಂ ಕೋರ್ಟ್ ರಚನೆಗೆ ಅವಕಾಶ ನೀಡಿದ ಶಾಸನ (ಸಾಧಾರಣ)
   A) 1773ರ ರೆಗ್ಯುಲೇಟಿಂಗ್ ಶಾಸನ B) 1833ರ ಚಾರ್ಟರ್ ಕಾಯ್ದೆ
   C) 1935ರ ಭಾರತ ಸರ್ಕಾರದ ಕಾಯ್ದೆ D) 1909ರ ಭಾರತೀಯ ಪರಿಷತ್ ಕಾಯ್ದೆ
2. ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಹುದ್ದೆಯನ್ನು ಸೃಷ್ಟಿಸಿದವರು (ಸುಲಭ)
   A) ವಾರನ್ ಹೇಸ್ಟಿಂಗ್ಸ್ B) ಲಾರ್ಡ್ ಕಾರ್ನ್ ವಾಲೀಸ್ C) ಲಾರ್ಡ್ ವೆಲ್ಲೆಸ್ಲಿ D) ಲಾರ್ಡ್ ಡಾಲ್ ಹೌಸಿ
3. ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದವರು (ಸೆ–2021) (ಸಾಧಾರಣ)
   A) ವಿಲಿಯಮ್ ಬೆಂಟಿಕ್ B) ವಾರನ್ ಹೆಸ್ಟಿಂಗ್ಸ್ C) ಲಾರ್ಡ್ ಡಾಲ್ ಹೌಸಿ D) ಥಾಮಸ್ ಮನ್ರೋ
4. ಮುಸ್ಲಿಂರಿಗೆ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದ ಶಾಸನ (ಏ–2019) (ಕಠಿಣ)
   A) 1909 ರ ಭಾರತೀಯ ಪರಿಷತ್ ಕಾಯಿದೆ B) 1919 ರ ಭಾರತ ಸರ್ಕಾರದ ಕಾಯಿದೆ
   C) 1935 ರ ಭಾರತ ಸರ್ಕಾರದ ಕಾಯಿದೆ D) 1892 ರ ಭಾರತೀಯ ಪರಿಷತ್ ಕಾಯಿದೆ
5. 1935ರ ಭಾರತ ಸರ್ಕಾರದ ಕಾಯ್ದೆ ಸ್ವತಂತ್ರ ಭಾರತದ ಒಂದು ಪ್ರಮುಖ ದಾಖಲೆಯಾಗಿದೆ. ಏಕೆಂದರೆ (ಜೂ–2025, ಏ–2016) (ಕಠಿಣ)
   A) ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ಜಾರಿಗೆ ತಂದಿದೆ
   B) ನಿಯಂತ್ರಣ ಮಂಡಳಿ ಸ್ಥಾಪಿಸಿದೆ
   C) ಮತೀಯ ಆಧಾರದ ಮೇಲೆ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಪರಿಚಯಿಸಿತು
   D) ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು
6. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು. (ಜೂ–2024) (ಸುಲಭ)
   A) ವಾರನ್ ಹೇಸ್ಟಿಂಗ್ಸ್ B) ಲಾರ್ಡ್ ಕಾರ್ನ್ ವಾಲೀಸ್ C) ಲಾರ್ಡ್ ವೆಲ್ಲೆಸ್ಲಿ D) ಲಾರ್ಡ್ ಡಾಲ್ ಹೌಸಿ
7. ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾದ ವರದಿ (ಸಾಧಾರಣ)
   A) ಅಲೆಗ್ಸಾಂಡರ್ ರೀಡ್ ವರದಿ B) ಮೆಕಾಲೆ ವರದಿ C) ಚಾರ್ಲ್ಸ್ ವುಡ್ ವರದಿ D) ಪೀಲ್ ವರದಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

8. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ ಯಾರು? (ಸಾಧಾರಣ)
9. ಮಹಲ್ವಾರಿ ಪದ್ಧತಿಯನ್ನು ಪ್ರಯೋಗಿಸಿದವರು ಯಾರು? (ಸುಲಭ)
10. 1858ರಲ್ಲಿ ಭಾರತದ ಮೊದಲ ವೈಸರಾಯ್ ಆಗಿ ನೇಮಕಗೊಂಡವರು ಯಾರು? (ಮಾ–2019) (ಕಠಿಣ)
11. ದಿವಾನಿ ಅದಾಲತ್ ಎಂದರೇನು? (ಸುಲಭ)
12. ಚಾರ್ಟರ್ ಕಾಯಿದೆಗಳ ಪ್ರಮುಖ ಉದ್ದೇಶವೇನು? (ಏ–2021) (ಸಾಧಾರಣ)
13. ಬ್ರಿಟಿಷರ ಕಾಲದಲ್ಲಿ ಭಾರತೀಯರಿಗೆ ಸೈನ್ಯದಲ್ಲಿ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ ಯಾವುದು? (ಸಾಧಾರಣ)
14. ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು ಎಂದು ಹೇಳಿದವರು ಯಾರು? (ಕಠಿಣ)
15. ಭಾರತೀಯ ರಿಜರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿದ ಕಾಯ್ದೆ ಯಾವುದು? (ಸುಲಭ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

16. 1909ರ ಭಾರತೀಯ ಪರಿಷತ್ ಕಾಯ್ದೆಯ ಮೂಲಕ ಬ್ರಿಟಿಷರು ಭಾರತೀಯರನ್ನು ಒಡೆದು ಆಳುವ ನೀತಿಯನ್ನು ತೋರಿದರು. ದೃಢೀಕರಿಸಿ.
17. ಬ್ರಿಟಿಷ್ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಭಾರತೀಯ ಸೈನ್ಯವು ಆಧಾರ ಸ್ಥಂಭವಾಗಿತ್ತು. ಸಮರ್ಥಿಸಿ. (ಕಠಿಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

18. ರೈತವಾರಿ ಪದ್ಧತಿಯ ಲಕ್ಷಣಗಳೇನು? (ಸಾಧಾರಣ)
19. ಬ್ರಿಟಿಷ್ ಶಿಕ್ಷಣ ನೀತಿಯು ಭಾರತದ ಶೈಕ್ಷಣಿಕ ವ್ಯವಸ್ಥೆಯ ಮೇಲೆ ಮಹತ್ತರವಾದ ಪರಿಣಾಮಗಳನ್ನು ಬೀರಿತು. ಸಮರ್ಥಿಸಿ.
    / ಬ್ರಿಟಿಷ್ ಶಿಕ್ಷಣದ ಪರಿಣಾಮಗಳಾವುವು? (ಏ– 2016, ಜೂ– 2017) (ಕಠಿಣ)
20. ಬ್ರಿಟಿಷರ ಕಂದಾಯ ನೀತಿಯು ಭಾರತೀಯರನ್ನು ಸಂಪೂರ್ಣವಾಗಿ ಶೋಷಿಸಿತು. ಸಮರ್ಥಿಸಿ. (ಏ–2018, ಏ–2025) (ಕಠಿಣ)
21. 1919ರ ಮಾಂಟೆಗೋ–ಚೆಮ್ಸ್ ಫರ್ಡ್ ಸುಧಾರಣಾ ಕಾಯಿದೆಯ ಪ್ರಮುಖ ಅಂಶಗಳು ಯಾವುವು? (ಸಾಧಾರಣ)
22. 1935ರ ಭಾರತ ಸರ್ಕಾರದ ಕಾಯಿದೆಯು ಸಂವಿಧಾನ ರಚನೆಗೆ ಬುನಾದಿಯಾಗಿದೆ. ಸಮರ್ಥಿಸಿ. (ಮಾ–2025) (ಕಠಿಣ)
23. ಬ್ರಿಟಿಷರ ಆಡಳಿತ ವ್ಯವಸ್ಥೆಯಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಾದ ಬದಲಾವಣೆಗಳಾವುವು? (ಸಾಧಾರಣ)

ಇತಿಹಾಸ, ಅಧ್ಯಾಯ– 4

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1) ಮೈಸೂರಿನ ರಾಜ್ಯಗೀತೆ ಕಾಯೋಶ್ರೀಗೌರಿಯನ್ನು ರಚಿಸಿದವರು (ಸಾಧಾರಣ)

A) ಸಂಚಿ ಹೊನ್ನಮ್ಮ B) ಶ್ಯಾಮಶಾಸ್ತ್ರಿ C) ಬಸಪ್ಪಶಾಸ್ತ್ರಿ D) ತಿರುಮಲಾರ್ಯ

2) ಮೊದಲ ಆಂಗ್ಲೋ–ಮೈಸೂರುಯುದ್ಧ ಈ ಒಪ್ಪಂದದೊಂದಿಗೆ ಕೊನೆಗೊಂಡಿತು (ಏ–2019) (ಸುಲಭ)

A) ಮಂಗಳೂರುಒಪ್ಪಂದ B) ಶ್ರೀರಂಗಪಟ್ಟಣಒಪ್ಪಂದ C) ಸಾಲ್ ಬಾಯ್‌ಒಪ್ಪಂದ D) ಮದ್ರಾಸ್‌ಒಪ್ಪಂದ

3) ಸುರಪುರವು ಈ ಕೆಳಕಂಡ ಜಿಲ್ಲೆಯಲ್ಲಿದೆ (ಸಾಧಾರಣ)

A) ಕಲಬುರಗಿ B) ಬಳ್ಳಾರಿ C) ರಾಯಚೂರು D) ಯಾದಗಿರಿ

4) ಸಂಗೊಳ್ಳಿರಾಯಣ್ಣನನ್ನು ಗಲ್ಲಿಗೇರಿಸಿದ ಸ್ಥಳ (ಸಾಧಾರಣ)

A) ಕಿತ್ತೂರು B) ನಂದಗಡ C) ಬೆಳಗಾವಿ D) ಸಂಪಗಾವಿ

5) ಪೋರ್ಟ್ ನೋವೆ ಕದನದ ಪರಿಣಾಮವೆಂದರೆ (ಕಠಿಣ)

A) ಹೈದರಾಲಿ ಬ್ರಿಟಿಷರಿಂದ ಪರಾಭವ B) ಟಿಪ್ಪುಸುಲ್ತಾನ್ ಬ್ರಿಟಿಷರಿಂದ ಪರಾಭವ

C) ಬ್ರಿಟಿಷರಿಂದ ಕಿತ್ತೂರು ವಶ D) ದೋಂಡಿಯಾ ವಾಘನ ಮರಣ

6) ಬೆಂಗಳೂರು–ಮೈಸೂರು ರೈಲು ಮಾರ್ಗವನ್ನು ನಿರ್ಮಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. (ಜೂ–2023) (ಸಾಧಾರಣ)

A) ಜಯಚಾಮರಾಜ ಒಡೆಯರು B) ನಾಲ್ವಡಿ ಕೃಷ್ಣರಾಜ ಒಡೆಯರು C) 10 ನೇ ಚಾಮರಾಜೇಂದ್ರ ಒಡೆಯರು D) ರಾಜ ಒಡೆಯರು

7) ಮಹಾತ್ಮಾ ಗಾಂಧಿಯವರು 'ರಾಜರ್ಷಿ' ಎಂದು ಕರೆದದ್ದು (ಜೂ– 2020) (ಸಾಧಾರಣ)

A) ಜಯಚಾಮರಾಜ ಒಡೆಯರು B) ನಾಲ್ವಡಿ ಕೃಷ್ಣರಾಜ ಒಡೆಯರು C) 10 ನೇ ಚಾಮರಾಜೇಂದ್ರ ಒಡೆಯರು D) ರಾಜ ಒಡೆಯರು

8) ಮೈಸೂರು ಸಂಸ್ಥಾನದ ನವರಾತ್ರಿ ಉತ್ಸವವನ್ನು ಶ್ರೀರಂಗಪಟ್ಟಣದಲ್ಲಿ ಪ್ರಾರಂಭಿಸಿದವರು. (ಸುಲಭ)

A) ಜಯಚಾಮರಾಜ ಒಡೆಯರು B) ನಾಲ್ವಡಿ ಕೃಷ್ಣರಾಜ ಒಡೆಯರು C) 10 ನೇ ಚಾಮರಾಜೇಂದ್ರ ಒಡೆಯರು D) ರಾಜ ಒಡೆಯರು

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

9) ಭಾರತದ ಚರಿತ್ರೆಯಲ್ಲಿ 18ನೇ ಶತಮಾನವು ಏನೆಂದು ಚಿತ್ರಿಸಲ್ಪಟ್ಟಿದೆ? (ಸಾಧಾರಣ)

10) ರಾಣಿ ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿಗೆ ಸ್ಥಳಾಂತರಿಸಲು ಕಾರಣವೇನು? (ಕಠಿಣ)

11) ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು ? (ಸಾಧಾರಣ)

12) ಹಲಗಲಿ ಬೇಡರು ಬ್ರಿಟಿಷರ ವಿರುದ್ಧ ದಂಗೆ ಏಳಲು ಕಾರಣವೇನು? (ಮಾ 2019) (ಸುಲಭ)

13) ರಾಜಮುಡಿ ಕಿರೀಟವನ್ನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ಅರ್ಪಿಸಿದವರು ಯಾರು? (ಸುಲಭ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

14) ರಾಜ ಒಡೆಯರ ಸಾಧನೆಗಳೇನು? (ಸಾಧಾರಣ)

15) ಮೈಸೂರಿನ ಅಭಿವೃದ್ಧಿಗೆ ಕೆ.ಶೇಷಾದ್ರಿ ಅಯ್ಯರ್ ಅವರು ಪ್ರಮುಖ ಪಾತ್ರ ವಹಿಸಿದರು. ದೃಢೀಕರಿಸಿ. (ಪ 1–2024) (ಕಠಿಣ)

16) ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳೇನು?/ ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪು ಸುಲ್ತಾನನಿಗೆ ಅವಮಾನಕರ ಒಪ್ಪಂದವಾಗಿತ್ತು. ಸಮರ್ಥಿಸಿ. (ಮಾ–2020, ಜೂ–2015, ಜೂ–2018) (ಕಠಿಣ)

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

17) ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು/ ಕೊಡುಗೆಗಳನ್ನು ವಿವರಿಸಿ./ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯು ಮೈಸೂರನ್ನು ಮಾದರಿ ರಾಜ್ಯವನ್ನಾಗಿ ಮಾಡಿತು. ಸಮರ್ಥಿಸಿ. (ಏ–2023, ಜೂ–2023, ಪ 2–2024, ಏ –2025) (ಸಾಧಾರಣ)

18) ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿ (ಮಾ–2019) (ಸುಲಭ)

19) ಅಮರ ಸುಳ್ಯ ಬಂಡಾಯವನ್ನು ಒಂದು ರೈತ ಬಂಡಾಯ ಎಂದು ಕರೆಯಲು ಕಾರಣವೇನು? / ಅಮರಸುಳ್ಯ ಬಂಡಾಯವನ್ನು ವಿವರಿಸಿ. (ಮಾ–2024) (ಸಾಧಾರಣ)

ಇತಿಹಾಸ, ಅಧ್ಯಾಯ- 5

ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಮಾನವನ ಸೇವೆಯೇ ಪರಮಾತ್ಮನ ಸೇವೆ ಎಂಬ ನೆಲೆಗಟ್ಟನ್ನು ಹೊಂದಿದ್ದ ಸುಧಾರಣಾ ಸಂಸ್ಥೆ (ಕಠಿಣ)
   A) ಸತ್ಯಶೋಧಕ ಸಮಾಜ B) ಪ್ರಾರ್ಥನಾ ಸಮಾಜ C) ಆರ್ಯ ಸಮಾಜ D) ರಾಮಕೃಷ್ಣ ಮಿಷನ್
2. ರಾಮ್ ಮೋಹನ್ ರಾಯರು ಬಂಗಾಳಿ ಭಾಷೆಯಲ್ಲಿ ಆರಂಭಿಸಿದ ಪತ್ರಿಕೆ (ಸಾಧಾರಣ)
   A) ಸಂವಾದ ಕೌಮುದಿ B) ಮೂಕನಾಯಕ C) ಯಂಗ್ ಇಂಡಿಯಾ D) ಕಾಮನ್ ವ್ಹೀಲ್
3. ಶುದ್ಧಿಚಳುವಳಿ ಈ ಸಂಸ್ಥೆಯ ಪ್ರಮುಖ ಚಟುವಟಿಕೆಯಾಗಿತ್ತು. (ಸಾಧಾರಣ)
   A) ಪ್ರಾರ್ಥನಾ ಸಮಾಜ B) ಬ್ರಹ್ಮಸಮಾಜ C) ಸತ್ಯಶೋಧಕ ಸಮಾಜ D) ಆರ್ಯಸಮಾಜ
4. ಥಿಯೊಸಾಫಿಕಲ್ ಸೊಸೈಟಿ(ಬ್ರಹ್ಮ ವಿದ್ಯಾ ಸಮಾಜ)ಯನ್ನು ಪ್ರಾರಂಭಿಸಿದವರು (ಸುಲಭ)
   A) ರಾಮ್ ಮೋಹನ್ ರಾಯ್ B) ಅನಿಬೆಸೆಂಟ್ C) ದಯಾನಂದ ಸರಸ್ವತಿ D) ಕರ್ನಲ್ ಅಲ್ಕಾಟ್ ಮತ್ತು ಮ್ಯಾಡಮ್ ಬ್ಲಾವಟ್ಸ್ಕಿ
5. 'ನ್ಯೂ ಇಂಡಿಯಾ' ಪತ್ರಿಕೆಯನ್ನು ಪ್ರಾರಂಭಿಸಿದವರು (ಸಾಧಾರಣ)
   A) ರಾಮ್ ಮೋಹನ್ ರಾಯ್ B) ಮಹಾತ್ಮ ಗಾಂಧೀಜಿ C) ಅನಿಬೆಸೆಂಟ್ D) ದಯಾನಂದ ಸರಸ್ವತಿ
6. 'ವೇದಗಳಿಗೆ ಹಿಂದಿರುಗಿ ಎಂದು ಕರೆ ನೀಡಿದವರು (ಸುಲಭ)
   A) ದಯಾನಂದ ಸರಸ್ವತಿ B) ಆತ್ಮರಾಂ ಪಾಂಡುರಂಗ C) ಸ್ವಾಮಿ ವಿವೇಕಾನಂದ D) ರಾಮ್ ಮೋಹನ್ ರಾಯ್
7. ವಿಗ್ರಹಾರಾಧನೆಯಲ್ಲಿ ನಂಬಿಕೆ ಹೊಂದಿದ್ದವರು (ಸಾಧಾರಣ)
   A) ಜ್ಯೋತಿಬಾ ಫುಲೆ B) ರಾಮ್ ಮೋಹನ್ ರಾಯ್ C) ರಾಮ ಕೃಷ್ಣ ಪರಮಹಂಸ D) ಸ್ವಾಮಿ ವಿವೇಕಾನಂದ
8. ಸಮಾಜದ ವ್ಯವಸ್ಥೆಯ ಸುಧಾರಣೆಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿದ ಸಂಸ್ಥೆ (ಕಠಿಣ)
   A) ಪ್ರಾರ್ಥನಾ ಸಮಾಜ B) ಬ್ರಹ್ಮಸಮಾಜ C) ಸತ್ಯಶೋಧಕ ಸಮಾಜ D) ಆರ್ಯಸಮಾಜ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

9. 19ನೆಯ ಶತಮಾನವನ್ನು ಏನೆಂದು ಕರೆಯಲಾಗಿದೆ? (ಸುಲಭ)
10. ಆತ್ಮಗೌರವ ಚಳವಳಿಯು ಯಾರ ನೇತೃತ್ವದಲ್ಲಿ ಆರಂಭಗೊಂಡಿತು? (ಸುಲಭ)
11. ಪ್ರಾರ್ಥನಾ ಸಮಾಜದ ಸ್ಥಾಪಕರು ಯಾರು? (ಸುಲಭ)
12. ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ ಎಂದು ಪ್ರತಿಪಾದಿಸಿದವರು ಯಾರು? (ಸಾಧಾರಣ)
13. ಸ್ವಾಮಿ ವಿವೇಕಾನಂದರ ಗುರುಗಳಾಗಿದ್ದವರು ಯಾರು? (ಸುಲಭ)
14. ಯುವ ಬಂಗಾಳಿ ಚಳವಳಿಯನ್ನು ಪ್ರಾರಂಭಿಸಿದವರು ಯಾರು? (ಸಾಧಾರಣ)
15. ರಾಮಕೃಷ್ಣ ಮಿಷನ್ ಸ್ಥಾಪನೆಯ ಉದ್ದೇಶವೇನು? (ಸೆಪ್ಟಂಬರ್–2020) (ಕಠಿಣ)
16. "ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು" ಎಂದು ಹೇಳಿದವರು ಯಾರು? (ಸಾಧಾರಣ)
17. ಗುಲಾಮಗಿರಿ ಪುಸ್ತಕ ಬರೆದ ಸಮಾಜ ಸುಧಾರಕರು ಯಾರು? (ಸುಲಭ)
18. ಪ್ರಾರ್ಥನಾ ಸಮಾಜವನ್ನು ಜನಪ್ರಿಯಗೊಳಿಸಿದ ಸಮಾಜ ಸುಧಾರಕ ಯಾರು? (ಸಾಧಾರಣ)
19. ಆಂಗ್ಲೋ ಓರಿಯಂಟಲ್ ಕಾಲೇಜನ್ನು ಪ್ರಾರಂಭಿಸಿದವರು ಯಾರು? (ಸಾಧಾರಣ)
20. ಹೆನ್ರಿ ವಿವಿಯನ್ ಡಿರೋಜಿಯೋ ಯಾವ ಚರ್ಚಾ ವೇದಿಕೆಯ ಮೂಲಕ ಹೊಸ ಸಂವೇದನೆಯನ್ನು ಹುಟ್ಟು ಹಾಕಿದರು? (ಕಠಿಣ)
21. ರಾಮ್‌ಮೋಹನ್ ರಾಯರ ಸತಿ ಪದ್ಧತಿ ವಿರೋಧಿ ಹೋರಾಟವನ್ನು ವಿಲಿಯಂ ಬೆಂಟಿಂಕ್ ಹೇಗೆ ಬೆಂಬಲಿಸಿದರು? (ಸಾಧಾರಣ)
22. ಸತ್ಯಾರ್ಥ ಪ್ರಕಾಶ ಕೃತಿಯನ್ನು ರಚಿಸಿದವರು ಯಾರು? (ಜೂನ್–2024) (ಸುಲಭ)

III. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

23. 19ನೇ ಶತಮಾನವನ್ನು 'ಭಾರತೀಯ ಪುನರುಜ್ಜೀವನ ಕಾಲ' ಎಂದು ಕರೆಯಲಾಗಿದೆ. ಏಕೆ? (ಕಠಿಣ)
24. ಭಾರತದ ಸಾಮಾಜಿಕ ಸುಧಾರಣೆಯಲ್ಲಿ ರಾಜಾ ರಾಮ್ ಮೋಹನ್ ರಾಯರ ಪಾತ್ರವು ಸ್ಮರಣೀಯವಾದುದು. ಸಮರ್ಥಿಸಿ. (2025) (ಸು)
25. ಸತ್ಯಶೋಧಕ ಸಮಾಜದ ಸುಧಾರಣೆಗಳಾವುವು? (ಸಾಧಾರಣ)
26. ಬ್ರಹ್ಮ ಸಮಾಜದ ಬೋಧನೆಗಳಾವುವು? (ಸುಲಭ)
27. ದಯಾನಂದ ಸರಸ್ವತಿಯವರು ಪ್ರತಿಪಾದಿಸಿದ ಸುಧಾರಣೆಗಳಾವುವು?/ 'ವೈದಿಕ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವಲ್ಲಿ ದಯಾನಂದ ಸರಸ್ವತಿಯವರು ಪ್ರಮುಖ ಪಾತ್ರವಹಿಸಿದರು.' ಸಮರ್ಥಿಸಿ. (ಜೂನ್–2020, ಜೂನ್–2022, ಸೆಪ್ಟಂಬರ್–2022, ಏಪ್ರಿಲ್–2025) (ಸಾಧಾರಣ)
28. ಪ್ರಾರ್ಥನಾ ಸಮಾಜದ ಸುಧಾರಣೆಗಳನ್ನು/ ಗುರಿಗಳನ್ನು ತಿಳಿಸಿ. (ಏಪ್ರಿಲ್–2023, ಜೂನ್–2023) (ಸಾಧಾರಣ)
29. ಸ್ವಾಮಿ ವಿವೇಕಾನಂದರು ನೀಡಿದ ಕೊಡುಗೆಗಳಾವುವು? (ಸುಲಭ)
30. ಅನಿಬೆಸೆಂಟರ ಸುಧಾರಣಾ ಕ್ರಮಗಳಾವುವು? / ಸಾಮಾಜಿಕ ಸುಧಾರಣಾ ಚಳವಳಿ ಹಾಗೂ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅನಿಬೆಸೆಂಟ್‌ರವರ ಪಾತ್ರವನ್ನು ವಿವರಿಸಿ (ಸೆಪ್ಟಂಬರ್–2020, ಏಪ್ರಿಲ್–2024, ಆಗಸ್ಟ್–2024) (ಸಾಧಾರಣ)
31. ಶ್ರೀನಾರಾಯಣಗುರು ಅವರ ಧರ್ಮಪರಿಪಾಲನಾ ಯೋಗಂ ಸಂಘಟನೆಯ ಸುಧಾರಣೆಗಳನ್ನು ತಿಳಿಸಿ. (ಕಠಿಣ)
32. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ತಿಳಿಸಿ. / ಇ.ವಿ.ರಾಮಸ್ವಾಮಿ ನಾಯ್ಕರ್ ರವರ ಕೊಡುಗೆಗಳೇನು? (ಕಠಿಣ)

ಇತಿಹಾಸ, ಅಧ್ಯಾಯ– 17

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. 1857ರ ದಂಗೆಗೆ ತಕ್ಷಣದ ಕಾರಣ (ಸುಲಭ)

A) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದದ್ದು B) ಝಾನ್ಸಿರಾಣಿ ಲಕ್ಷ್ಮಿ ಬಾಯಿಯನ್ನು ಕೊಂದಿದ್ದು
C) ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ D) ಮೊಘಲ್ ಸಾಮ್ರಾಟನನ್ನು ಪದಚ್ಯುತಿಗೊಳಿಸಿದ್ದು

2. ಕಾನ್ಪುರದಲ್ಲಿ ಬ್ರಿಟಿಷರ ವಿರುದ್ಧ ಸಿಡಿದೆದ್ದ ನಾಯಕ (ಸಾಧಾರಣ)

A) ಮಂಗಲ ಪಾಂಡೆ B) ದೋಂಡಿಯಾ ವಾಘ್ C) ನಾನಾ ಸಾಹೇಬ್ D) ಎರಡನೇ ಬಹದ್ದೂರ್ ಷಾ

3. ಇವುಗಳಲ್ಲಿ ಭಾರತದ ಪ್ರಥಮ ಸ್ವತಂತ್ರ ಸಂಗ್ರಾಮದ ವಿಫಲತೆಗೆ ಒಂದು ಕಾರಣ, (ಸಾಧಾರಣ)

A) ಅದು ದೇಶಾದ್ಯಂತ ಹರಡಿತ್ತು B) ಇದು ಸುಸಂಘಟಿತ ದಂಗೆಯಾಗಿತ್ತು
C) ಒಬ್ಬ ಪ್ರಬಲ ನಾಯಕನನ್ನು ಹೊಂದಿರಲಿಲ್ಲ D) ಅನೇಕ ಭಾರತೀಯ ರಾಜರು ಬ್ರಿಟಿಷರಿಗೆ ವಿಶ್ವಾಸ ದ್ರೋಹಿಗಳಾಗಿದ್ದರು

4. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವೇಳೆ ಸಿಪಾಯಿಗಳು ಜನರ ವಿಶ್ವಾಸ ಕಳೆದುಕೊಳ್ಳಲು ಕಾರಣ (ಕಠಿಣ)

A) ದೇಶೀಯ ರಾಜರ ಬೆಂಬಲದ ಕೊರತೆ B) ಸೂಕ್ತ ಮಾರ್ಗದರ್ಶನದ ಕೊರತೆ
C) ಸ್ವಹಿತಾಸಕ್ತಿ ಮತ್ತು ಹಕ್ಕಿಗಾಗಿ ನಡೆದ ಹೋರಾಟ D) ಸೈನಿಕರ ಲೂಟಿ ಮತ್ತು ದರೋಡೆಗಳು

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

5. 1857 ರ ಹೋರಾಟವನ್ನು ಭಾರತೀಯ ಇತಿಹಾಸಕಾರರು ಏನೆಂದು ಕರೆದಿದ್ದಾರೆ? (ಸುಲಭ)
6. 1857ರ ಹೋರಾಟದ ಸಮಯದಲ್ಲಿ ಬ್ಯಾರಕ್ ಪುರದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದ ಸೈನಿಕ ಯಾರು? (ಸಾಧಾರಣ)
7. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ವಶಪಡಿಸಿಕೊಂಡ ಸ್ಥಳ ಯಾವುದು? (ಸಾಧಾರಣ)
8. 1858 ರಲ್ಲಿ ಭಾರತದಲ್ಲಿ ಬ್ರಿಟನ್ ರಾಣಿಯು ಹೊರಡಿಸಿದ ಘೋಷಣೆಯನ್ನು ಏನೆಂದು ಕರೆಯಲಾಗಿದೆ? (ಸಾಧಾರಣ)
9. 1857ರ ಭಾರತದ ಪ್ರಥಮ ಸ್ವತಂತ್ರ ಸಂಗ್ರಾಮಕ್ಕೆ ಬೀಜಾಂಕುರವಾದ ಘಟನೆ ಯಾವುದು? (ಕಠಿಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

10. 1857ರ ಭಾರತದ ಪ್ರಥಮ ಸ್ವತಂತ್ರ ಸಂಗ್ರಾಮಕ್ಕೆ ರಾಜಕೀಯ ಕಾರಣಗಳಾವುವು? (ಏಪ್ರಿಲ್–2023) (ಸಾಧಾರಣ)
11. 1857ರ ಭಾರತದ ಪ್ರಥಮ ಸ್ವತಂತ್ರ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳಾವುವು? (ಸೆಪ್ಟಂಬರ್–2020, ಏಪ್ರಿಲ್–2023) (ಸಾಧಾರಣ)
12. 1857ರ ಭಾರತದ ಪ್ರಥಮ ಸ್ವತಂತ್ರ ಸಂಗ್ರಾಮಕ್ಕೆ ಆಡಳಿತಾತ್ಮಕ ಕಾರಣಗಳಾವುವು? (ಸೆಪ್ಟಂಬರ್–2020) (ಕಠಿಣ)
13. 1857ರ ಭಾರತದ ಪ್ರಥಮ ಸ್ವತಂತ್ರ ಸಂಗ್ರಾಮಕ್ಕೆ ಸೈನಿಕ ಕಾರಣಗಳು ಯಾವುವು? (ಸುಲಭ)

IV. ಈ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

14. 1857ರ ದಂಗೆಯ ವಿಫಲತೆಗೆ ಕಾರಣಗಳೇನು?/ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು. ಸ್ಪಷ್ಟಿಕರಿಸಿ. (ಜೂನ್–2020, ಜೂನ್–2022, ಸೆಪ್ಟಂಬರ್–2022, ಏಪ್ರಿಲ್–2024, ಜೂನ್–2024, ಆಗಸ್ಟ್–2024, ಏಪ್ರಿಲ್–2025, ಜೂನ್–2025) (ಸುಲಭ)
15. 1857ರ ದಂಗೆಯ ಪರಿಣಾಮಗಳು ಯಾವುವು?/ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಭಾರತೀಯರ ಮೇಲೆ ಹೇಗೆ ಪ್ರಭಾವ ಬೀರಿತು? / ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಬ್ರಿಟಿಷ್ ಆಡಳಿತ ಮತ್ತು ಸ್ವತಂತ್ರ ಹೋರಾಟದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿತ್ತು. ಸ್ಪಷ್ಟೀಕರಿಸಿ. (ಏಪ್ರಿಲ್–2023) (ಸಾಧಾರಣ)
16. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಆರ್ಥಿಕ ಮತ್ತು ಸೈನಿಕ ಕಾರಣಗಳನ್ನು ವಿವರಿಸಿ.
17. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ರಾಜಕೀಯ ಮತ್ತು ಆಡಳಿತಾತ್ಮಕ ಕಾರಣಗಳನ್ನು ವಿವರಿಸಿ.

ಸ್ವಾತಂತ್ರ್ಯ ಹೋರಾಟ

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಸ್ಥಾಪಕರು (ಸುಲಭ)
A) ಮಹಾತ್ಮ ಗಾಂಧೀಜಿ B) ಎ. ಓ. ಹ್ಯೂಮ್ C) ಬಾಲ ಗಂಗಾಧರ ತಿಲಕ್ D) ಗೋಪಾಲಕೃಷ್ಣ ಗೋಖಲೆ

2. ಮರಾಠ ಪತ್ರಿಕೆಯನ್ನು ಆರಂಭಿಸಿದವರು (ಮಾ–2019, ಸೆ–2021) (ಸುಲಭ)
A) ಜವಾಹರಲಾಲ್ ನೆಹರು B) ರಾಸ್ ಬಿಹಾರಿ ಬೋಸ್ C) ಬಾಲ ಗಂಗಾಧರ ತಿಲಕ್ D) ಗೋಪಾಲಕೃಷ್ಣ ಗೋಖಲೆ

3. ಸ್ವರಾಜ್ ಪಕ್ಷ ಸ್ಥಾಪನೆಯಾದ ವರ್ಷ (ಸಾಧಾರಣ)
A) 1924 B) 1923 C) 1929 D) 1906

4. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು (ಸಾಧಾರಣ)
A) ಜವಾಹರಲಾಲ್ ನೆಹರು B) ಡಾ. ಬಿ.ಆರ್.ಅಂಬೇಡ್ಕರ್ C) ಲಾಲ ಲಜಪತ್ ರಾಯ್ D) ಸುಭಾಷ್ ಚಂದ್ರ ಬೋಸ್

5. ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು ಮಂಡಿಸಿದವರು (ಜೂನ್ 2022) (ಸಾಧಾರಣ)
A) ದಾದಾ ಬಾಯಿ ನವರೋಜಿ B) ಅರಬಿಂದೋ ಘೋಷ್ C) ಲಾಲ ಲಜಪತ್ ರಾಯ್ D) ಸುಭಾಷ್ ಚಂದ್ರ ಬೋಸ್

6. ಭಾರತದ ಪ್ರಥಮ ಪ್ರಧಾನಮಂತ್ರಿ (ಸುಲಭ)
A) ಜವಹರಲಾಲ್ ನೆಹರು B) ಡಾ॥ ಬಿ.ಆರ್.ಅಂಬೇಡ್ಕರ್ C) ಲಾಲ ಲಜಪತ್ ರಾಯ್ D) ಸುಭಾಷ್ ಚಂದ್ರ ಬೋಸ್

7. ಮಂದಗಾಮಿಗಳ ಗುಂಪಿಗೆ ಸೇರಿದವರು (ಸೆ–2021) (ಕಠಿಣ)
A) ಅರಂಬಿಂದ ಘೋಷ್ B) ಲಾಲಾ ಲಜಪತ್ ರಾಯ್ C) ಗೋಪಾಕೃಷ್ಣ ಗೊಖಲೆ D) ಬಾಲ ಗಂಗಾಧರ ತಿಲಕ್

8. 1905ರಲ್ಲಿ ಬಂಗಾಳವನ್ನು ವಿಭಜಿಸಲು ಕಾರಣ(ಮಾ–2015) (ಸಾಧಾರಣ)
A) ಹಿಂದೂ ಮುಸಲ್ಮಾನರನ್ನು ಬೇರ್ಪಡಿಸುವುದು. B) ಬ್ರಿಟಿಷರ ವಿರುದ್ಧ ಹೋರಾಟಗಳನ್ನು ದಮನಗೊಳಿಸುವುದು.
C) ಪಶ್ಚಿಮ ಬಂಗಾಳ ಭಾಗವನ್ನು ಅಭಿವೃದ್ಧಿಗೊಳಿಸುವುದು. D) ಜನರಿಗೆ ಮೂಲಸೌಕರ್ಯವನ್ನು ಒದಗಿಸುವುದು.

9. ಕ್ವಿಟ್ ಇಂಡಿಯಾ ಚಳುವಳಿಯು ಕಾಂಗ್ರೆಸ್ಸೇತರ ನಾಯಕರಿಗೆ ನಾಯಕತ್ವವನ್ನು ನೀಡಿತು. ಈ ಕೆಳಗಿನವರಲ್ಲಿ ಕ್ರಾಂಗ್ರೆಸ್ಸೇತರ ನಾಯಕನನ್ನು ಗುರುತಿಸಿ (ಸಾಧಾರಣ)
A) ಕಸ್ತೂರ ಬಾ ಗಾಂಧಿ B) ಡಾ ಬಿ.ಆರ್.ಅಂಬೇಡ್ಕರ್ C) ಜಯಪ್ರಕಾಶ ನಾರಾಯಣ್ D) ಮೌಲನಾ ಅಬ್ದುಲ್ ಕಲಾಂ ಅಜಾದ್

10. 1938ರ ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದವರು (ಸೆ–2020) (ಸುಲಭ)
A) ಸರ್ದಾರ್ ವಲ್ಲಭಬಾಯ್ ಪಟೇಲ್ B) ಡಾ ಬಿ.ಆರ್.ಅಂಬೇಡ್ಕರ್ C) ಬಾಲ ಗಂಗಾಧರ ತಿಲಕ್ D) ಸುಭಾಷ್ ಚಂದ್ರ ಬೋಸ್

11. ಗಾಂಧಿಜೀಯವರು ಚಂಪಾರಣ್ಯ ಚಳವಳಿಯನ್ನು ಪ್ರಾರಂಭಿಸಿದ್ದು (ಜು –2021) (ಸಾಧಾರಣ)
A) ನೀಲಿ ಬೆಳೆಗಾರರನ್ನು ಬೆಂಬಲಿಸಲು B) ಹತ್ತಿ ಬೆಳೆಗಾರರನ್ನು ಬೆಂಬಲಿಸಲು
C) ಈಚಲು ಬೆಳೆಗಾರರನ್ನು ಬೆಂಬಲಿಸಲು D) ಟೀ ಎಸ್ಟೇಟ್ ಕಾರ್ಮಿಕರನ್ನು ಬೆಂಬಲಿಸಲು

12. ಅಲಿ ಸಹೋದರರು ಮುನ್ನಡೆಸಿದ ಚಳವಳಿ (ಎ–2022) (ಸಾಧಾರಣ)
A) ಅಸಹಕಾರ B) ಖಿಲಾಫತ್ C) ಕಾನೂನು ಭಂಗ D) ಕ್ವಿಟ್ ಇಂಡಿಯಾ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

13. "ದೇಶೀಯ ಭಾಷಾ ಪತ್ರಿಕೆಗಳ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದವರು ಯಾರು? (ಕಠಿಣ)
14. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ವರ್ಷ ಯಾವುದು ? (ಸುಲಭ)
15. ಗೀತಾ ರಹಸ್ಯ ಕೃತಿಯನ್ನು ಬರೆದವರು ಯಾರು ? (ಸಾಧಾರಣ)
16. ಭಾರತದಲ್ಲಿದ್ದ ರಹಸ್ಯ ಸಂಘಟನೆಗಳು ಯಾವುವು? (ಸಾಧಾರಣ)
17. ಭಾರತದಲ್ಲಿ ಖಿಲಾಫತ್ ಚಳವಳಿಯ ನೇತೃತ್ವ ವಹಿಸಿದ್ದವರು ಯಾರು? (ಸುಲಭ)
18. ಲಾಹೋರ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರು ಯಾರು? (ಸಾಧಾರಣ)
19. ಕ್ವಿಟ್ ಇಂಡಿಯಾ ಚಳವಳಿ ಜರುಗಿದ ವರ್ಷ ಯಾವುದು? (ಸಾಧಾರಣ)
20. ಫಾರ್ವರ್ಡ್ ಬ್ಲಾಕ್ ಪಕ್ಷದ ಸ್ಥಾಪಕರು ಯಾರು? (ಸುಲಭ)
21. ಜನತಾ, ಮೂಕನಾಯಕ ಪತ್ರಿಕೆಗಳನ್ನು ಆರಂಭಿಸಿದವರು ಯಾರು? (ಸಾಧಾರಣ)
22. ಆಲಿಪ್ತ ನೀತಿಯ ರೂವಾರಿ ಯಾರು? (ಸುಲಭ)

23. ಭಾರತದ ಕೊನೆಯ ವೈಸ್ ರಾಯ್ ಯಾರು? (ಕಠಿಣ)
24. ಭಾರತ–ಪಾಕಿಸ್ತಾನ ರಾಷ್ಟ್ರಗಳ ಗಡಿಯನ್ನು ಗುರುತಿಸಿದ ಆಯೋಗ ಯಾವುದು? (ಸಾಧಾರಣ)
25. ಪ್ರತ್ಯೇಕ ಮುಸ್ಲಿಂ ರಾಷ್ಟ್ರಕ್ಕೆ ಬೇಡಿಕೆ ಇಟ್ಟವರು ಯಾರು? (ಸುಲಭ)
26. ಸ್ವರಾಜ್ಯವು ನನ್ನ ಜನ್ಮ ಸಿದ್ದ ಹಕ್ಕು, ಅದನ್ನು ಪಡೆದೇ ಪಡೆಯುತ್ತೇನೆ. ಎಂದು ಘೋಷಿಸಿದವರು ಯಾರು? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

27. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ತಿಳಿಸಿ. (ಎ–2017, 2021, ಸೆ–2020, ಮಾ–2022)(ಸಾಧಾರಣ) ಅಥವಾ ಮಂದಗಾಮಿಗಳು ಎಂದರೆಯಾರು? ಅವರ ಹೋರಾಟದ ವಿಧಾನವನ್ನು ತಿಳಿಸಿ.
28. ಸಂಪತ್ತಿನ ಸೋರುವಿಕೆ ಸಿದ್ದಾಂತವನ್ನು ವಿವರಿಸಿ /ದಾದಾಬಾಯಿ ನವರೋಜಿಯವರ ಸಂಪತ್ತಿನ ಸೋರುವಿಕೆ ಸಿದ್ದಾಂತವು ಭಾರತೀಯರನ್ನು ಹೇಗೆ ಜಾಗೃತಗೊಳಿಸಿತು. (ಸಾಧಾರಣ)
29. ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ./ "ತೀವ್ರವಾದಿಗಳು ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು." ಸಮರ್ಥಿಸಿ. (ಜೂ–2017) (ಸಾಧಾರಣ)
30. ಕ್ರಾಂತಿಕಾರಿಗಳ ಹೋರಾಟದ ಕ್ರಮವನ್ನು ವಿವರಿಸಿ (ಮಾ–2024) (ಸಾಧಾರಣ)
31. ಅಸಹಕಾರ ಚಳವಳಿಯನ್ನು ಕುರಿತು ಬರೆಯಿರಿ. (ಮಾ–2020,2021,2022) (ಸಾಧಾರಣ)
32. ಸವಿನಯ ಕಾನೂನು ಭಂಗ ಚಳವಳಿಯನ್ನು ವಿವರಿಸಿ. (ಸಾಧಾರಣ)
33. ಕ್ವಿಟ್ ಇಂಡಿಯಾ ಚಳವಳಿಯನ್ನು ವಿವರಿಸಿ ಅಥವಾ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳವಳಿಯನ್ನು ವಿವರಿಸಿ. (ಕಠಿಣ)
34. ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರ ಪ್ರತಿಭಟನೆಗಳನ್ನು ವಿವರಿಸಿ. / ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರ ಪ್ರತಿಭಟನೆಗಳು ಪ್ರಮುಖ ಪಾತ್ರ ವಹಿಸಿದವು. ಸಮರ್ಥಿಸಿ. (ಮಾ–2019, 2020) (ಸಾಧಾರಣ)
35. ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಬಂಡಾಯಗಳನ್ನು ವಿವರಿಸಿ. (ಜೂ–2022) (ಸಾಧಾರಣ)
36. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರಬೋಸ್ ರವರ ಪಾತ್ರವನ್ನು ವಿವರಿಸಿ./ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಶ್ ಚಂದ್ರ ಬೋಸ್‌ರವರ ಪಾತ್ರವು ಪ್ರಮುಖ ಮೈಲುಗಲ್ಲಾಗಿದೆ. ಸಮರ್ಥಿಸಿ. (ಮಾ–2015,2018,2021) (ಸುಲಭ)
37. ಡಾ. ಬಿ.ಆರ್. ಅಂಬೆಡ್ಕರ್ ರವರ ಹೋರಾಟವನ್ನು ವಿವರಿಸಿ./ . ಡಾ॥ ಬಿ. ಆರ್. ಅಂಬೇಡ್ಕರ್‌ರವರು ಒಬ್ಬ ಶ್ರೇಷ್ಠ ಸಮಾಜ ಸುಧಾರಕರು. ದೃಢೀಕರಿಸಿ. (ಏ–2016,2020,2022,2023,2024) (ಸಾಧಾರಣ)
38. ಭಾರತದ ಪ್ರಧಾನ ಮಂತ್ರಿಯಾಗಿ ಜವಹರ್‌ಲಾಲ್ ನೆಹರೂರವರ ಸಾಧನೆಗಳನ್ನು ವಿವರಿಸಿ. (ಜೂ–2016,2018,2021) (ಸುಲಭ)

ಸ್ವಾತಂತ್ರೋತ್ತರ ಭಾರತ

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳ ಉದಯಕ್ಕೆ ಕಾರಣವಾದ ವರದಿ (ಸಾಧಾರಣ)

A) ಮೆಕಾಲೆ ವರದಿ B) ಮೌಂಟ್ ಬ್ಯಾಟನ್ ವರದಿ C) ಪೀಲ್ ಸಮಿತಿ ವರದಿ D) ಚಾರ್ಲ್ಸ್ ವುಡ್ ವರದಿ

2. ಭಾರತದ ಸಂವಿಧಾನಕ್ಕೆ 42ನೇ ತಿದ್ದುಪಡಿ ಅನ್ವಯ ಸೇರಿಸಿದ ಎರಡು ಅಂಶಗಳೆಂದರೆ (ಮಾ– 2019) (ಕಠಿಣ)

A) ಸಮಾಜವಾದಿ–ಗಣರಾಜ್ಯ B) ಸಮಾಜವಾದಿ–ಸಾರ್ವಭೌಮ

C) ಸಮಾಜವಾದಿ–ಪ್ರಜಾಸತ್ತಾತ್ಮಕ D) ಜಾತ್ಯತೀತ–ಸಮಾಜವಾದಿ

3. ಭಾರತದ ಉಕ್ಕಿನ ಮನುಷ್ಯ /ಭಾರತದ ಪ್ರಥಮ ಗೃಹ ಮಂತ್ರಿ. (ಮಾ–2021) (ಸಾಧಾರಣ)

A) ಮಹಾತ್ಮ ಗಾಂಧಿ B) ಲಾಲ್ ಬಹದ್ದೂರ್ ಶಾಸ್ತ್ರಿ C) ಸರ್ದಾರ್ ವಲ್ಲಭಭಾಯಿ ಪಟೇಲ್ D) ಬಾಲ ಗಂಗಾಧರ ತಿಲಕ್

4. ಮೈಸೂರು ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿದ ವರ್ಷ (ಸುಲಭ)

A) 1963 B) 1983 C) 1953 D) 1973

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

5. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು? (ಸುಲಭ)
6. ಭಾರತದ ಸಂವಿಧಾನ ಜಾರಿಗೆ ಬಂದದ್ದು ಯಾವಾಗ? (ಸಾಧಾರಣ)
7. ಗೋವಾಗೆ ರಾಜ್ಯದ ಸ್ಥಾನಮಾನ ದೊರೆತ ವರ್ಷ ಯಾವುದು? (ಸಾಧಾರಣ)
8. ರಾಜ್ಯ ಪುನರ್ ವಿಂಗಡಣಾ ಆಯೋಗದ ಅಧ್ಯಕ್ಷರು ಯಾರು? (ಸಾಧಾರಣ)
9. ಭಾಷಾವಾರು ರಾಜ್ಯವಾಗಿ ರಚನೆಯಾದ ಪ್ರಥಮ ರಾಜ್ಯ ಯಾವುದು? (ಸುಲಭ)
10. ಪಾಂಡಿಚೇರಿಯ ಹೆಸರನ್ನು ಪುದುಚೇರಿ ಎಂದು ಯಾವ ವರ್ಷ ಮರು ನಾಮಕರಣ ಮಾಡಲಾಯಿತು? (ಕಠಿಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

11. ಭಾರತವು ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳು ಯಾವುವು? (ಜೂನ್ –2021) (ಸುಲಭ)
12. ಪಾಂಡಿಚೇರಿಯನ್ನು ಫ್ರೆಂಚರಿಂದ ಹೇಗೆ ವಿಮುಕ್ತಗೊಳಿಸಲಾಯಿತು.? (ಸಾಧಾರಣ)
13. ಹೈದರಾಬಾದ್ ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಹೇಗೆ ವಿಲೀನಗೊಳಿಸಲಾಯಿತು? (ಏ–2022) (ಸಾಧಾರಣ)
14. ದೇಶೀಯ ಸಂಸ್ಥಾನಗಳ ವಿಲೀನಿಕರಣದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ರವರ ಪಾತ್ರ ಮಹತ್ತರವಾದದ್ದು. ಸಮರ್ಥಿಸಿ. (ಕಠಿಣ)
15. ಜುನಾಗಡ್ ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ಹೇಗೆ ವಿಲೀನಗೊಳಿಸಲಾಯಿತು? (ಸಾಧಾರಣ)
16. ಗೋವಾ ಭಾರತ ಒಕ್ಕೂಟಕ್ಕೆ ಹೇಗೆ ಸೇರ್ಪಡೆಯಾಯಿತು? (2019, 2021, 2022) (ಸುಲಭ)

IV. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

17. ಭಾರತ ಒಕ್ಕೂಟಕ್ಕೆ ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನ ವಿಶಿಷ್ಟವಾಗಿದೆ. ಹೇಗೆ? (ವಾ–2023)

ಇತಿಹಾಸ, ಅಧ್ಯಾಯ– 20

ಮಹಾಯುದ್ಧಗಳು ಹಾಗೂ ಭಾರತದ ಪಾತ್ರ

I. ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ವಿಶ್ವದ ಯಾವುದೇ ಬಣಕ್ಕೆ ಸೇರದ ನೀತಿಯು (ಸಾಧಾರಣ)
   A) ನೀಲಿ ನೀರಿನ ನೀತಿ B) ಅಲಿಪ್ತ ನೀತಿ C) ವರ್ಣಬೇಧ ನೀತಿ D) ಮಾನವ ಹಕ್ಕುಗಳ ನೀತಿ
2. ಕದನ ಬಾಂಧವ್ಯ ತ್ರಯ ಮೈತ್ರಿಕೂಟ ರಚಿಸಿಕೊಂಡ ರಾಷ್ಟ್ರಗಳ ಸರಿಯಾದ ಗುಂಪು (ಕಠಿಣ)
   A) ಬ್ರಿಟನ್, ಫ್ರಾನ್ಸ್, ರಷ್ಯಾ B) ಇಟಲಿ, ಫ್ರಾನ್ಸ್, ರಷ್ಯಾ
   C) ಜರ್ಮನಿ, ಆಸ್ಟ್ರಿಯಾ, ಹಂಗೇರಿ, ಇಟಲಿ D) ಜರ್ಮನಿ, ಆಸ್ಟ್ರಿಯಾ, ಹಂಗೇರಿ, ಫ್ರಾನ್ಸ್
3. ಹಿರೋಷಿಮಾ ಮತ್ತು ನಾಗಸಾಕಿ ನಗರಗಳಿರುವುದು (ಸಾಧಾರಣ)
   A) ಅಮೇರಿಕಾ ಸಂಯುಕ್ತ ಸಂಸ್ಥಾನ B) ಜರ್ಮನಿ C) ಜಪಾನ್ D) ಪೋಲೆಂಡ್
4. ಮೊದಲನೆಯ ಮಹಾಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದ (ಸುಲಭ)
   A) ವರ್ಸೇಲ್ಸ್ ಒಪ್ಪಂದ B) ಜಿನೇವಾ ಒಪ್ಪಂದ C) ಪ್ಯಾರಿಸ್ ಒಪ್ಪಂದ D) ತಾಷ್ಕೆಂಟ್ ಒಪ್ಪಂದ
5. ಶೀತಲ ಸಮರ ಜರುಗಿದ ಎರಡು ರಾಷ್ಟ್ರಗಳ ಸರಿಯಾದ ಗುಂಪು (ಜೂನ್ –2019) (ಸಾಧಾರಣ)
   A) ಅಮೇರಿಕಾ ಸಂಯುಕ್ತ ಸಂಸ್ಥಾನ–ಚೀನಾ B) ಅಮೇರಿಕಾ ಸಂಯುಕ್ತ ಸಂಸ್ಥಾನ–ಜಪಾನ್
   C) ಚೀನಾ–ಸೋವಿಯತ್ ರಷ್ಯಾ D) ಅಮೇರಿಕಾ ಸಂಯುಕ್ತ ಸಂಸ್ಥಾನ–ಸೋವಿಯತ್ ರಷ್ಯಾ
6. ಇವುಗಳಲ್ಲಿ ಉಳಿದವುಗಳಿಗಿಂತ ಭಿನ್ನವಾಗಿರುವುದು (ಪ–3 2024) (ಕಠಿಣ)
   A) ಶತ್ರುಬಣ B) ಕದನ ಬಾಂದವ್ಯತ್ರಯ C) ಕದನ ಸೌಹಾರ್ದತ್ರಯ D) ಬೂದು ಅಂಗಿದಳ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

7. ಅಡಾಲ್ಫ್ ಹಿಟ್ಲರ್ ಬೂದು ಅಂಗಿ ದಳವನ್ನು ಏಕೆ ಸ್ಥಾಪಿಸಿದನು? (ಸಾಧಾರಣ)
8. ಗೊಬೆಲ್ಸ್ ಎಂಬ ವಿಶೇಷ ಮಂತ್ರಿಯನ್ನು ಹಿಟ್ಲರ್ ನೇಮಿಸಿದ ಉದ್ದೇಶವೇನು? (ಕಠಿಣ)
9. ಇಟಲಿಯ ಫ್ಯಾಸಿಸ್ಟ್ ಸರ್ವಾಧಿಕಾರಿಯನ್ನು ಹೆಸರಿಸಿ. (ಸುಲಭ)
10. ತೀನ್ ಮೂರ್ತಿ ಭವನ ಎಲ್ಲಿದೆ? (ಪ 1–2024) (ಸುಲಭ)
11. ರಾಷ್ಟ್ರಸಂಘವನ್ನು ಏಕೆ ಸ್ಥಾಪಿಸಲಾಯಿತು? (ಸಾಧಾರಣ)
12. ಹೋಲೋಕಾಸ್ಟ್ ಎಂದರೇನು? (ಸುಲಭ)
13. ಮೊದಲನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು? (ಪ1–2024) (ಸಾಧಾರಣ)
14. ರಷ್ಯಾದ ಕ್ರಾಂತಿ ಯಾವಾಗ ನಡೆಯಿತು? (ಸಾಧಾರಣ)
15. ನಾಜಿ ಪಕ್ಷದ ಸ್ಥಾಪಕ ಯಾರು? (ಸುಲಭ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

16. ಫ್ಯಾಸಿಸ್ಟ್‌ವಾದದ ಲಕ್ಷಣಗಳೇನು? (ಏಪ್ರಿಲ್– 2017,2019) (ಸುಲಭ)
17. 1930ರ ಮಹಾ ಆರ್ಥಿಕ ಕುಸಿತದ ಪರಿಣಾಮಗಳನ್ನು ತಿಳಿಸಿ. (ಕಠಿಣ)
18. ನಾಜಿವಾದದ ಸಾರಾಂಶವನ್ನು ತಿಳಿಸಿ. (ಜೂನ್–2019) (ಸಾಧಾರಣ)
19. ತೀನ್‌ಮೂರ್ತಿ ಭವನವನ್ನು ಏಕೆ ಮತ್ತು ಎಲ್ಲಿ ನಿರ್ಮಿಸಲಾಯಿತು? (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

20. ಮೊದಲನೆ ಮಹಾಯುದ್ಧದ ಕಾರಣಗಳು ಮತ್ತು ಪರಿಣಾಮಗಳನ್ನು ತಿಳಿಸಿ. (ಕಠಿಣ)
21. ಎರಡನೆ ಮಹಾಯುದ್ಧದ ಕಾರಣಗಳು ಮತ್ತು ಪರಿಣಾಮಗಳನ್ನು ತಿಳಿಸಿ. (ಪ–2, 2024) (ಕಠಿಣ)
22. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಭಾರತದ ಸಂಪನ್ಮೂಲಗಳನ್ನು ಬ್ರಿಟನ್ ಹೇಗೆ ಉಪಯೋಗಿಸಿಕೊಂಡಿತು? / ಭಾರತದ ಸಹಾಯವಿಲ್ಲದೆ ಎರಡನೆಯ ಮಹಾಯುದ್ದದಲ್ಲಿ ಬ್ರಿಟನ್ ಪ್ರಬಲ ರಾಷ್ಟ್ರವಾಗಿ ಯುದ್ಧ ಮಾಡಲು ಆಗುತ್ತಿರಲಿಲ್ಲ. ದೃಢೀಕರಿಸಿ. (ಕಠಿಣ)

ರಾಜ್ಯಶಾಸ್ತ್ರ, ಅಧ್ಯಾಯ– 6
ಸಾರ್ವಜನಿಕ ಆಡಳಿತ– ಒಂದು ಪರಿಚಯ

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಸಾರ್ವಜನಿಕ ಆಡಳಿತದ ಪಿತಾಮಹ (ಮಾ–2025) (ಸುಲಭ)
A) ವುಡ್ರೋ ವಿಲ್ಸನ್ B) ಫಿಫ್ ನರ್ C) ಲೂಥರ್ ಗುಲಿಕ್ D) ಅಲೆಗ್ಸಾಂಡರ್ ಹ್ಯಾಮಿಲ್ಟನ್.

2. ಸಾರ್ವಜನಿಕ ಆಡಳಿತ ಪದವನ್ನು ಮೊದಲ ಬಾರಿಗೆ ಬಳಸಿದವರು. (ಸುಲಭ)
A) ವುಡ್ರೋ ವಿಲ್ಸನ್ B) ಎಫ್. ಎಂ. ಮಾರ್ಕ್ಸ್ C) ಅಲೆಗ್ಸಾಂಡರ್ ಹ್ಯಾಮಿಲ್ಟನ್. D) ಲೂಥರ್ ಗುಲಿಕ್

3) ಪೋಸ್ಡ್ ಕಾರ್ಬ್ ಪದದ ಮೂಲಕ ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ಸೂಚಿಸಿದವರು (ಸಾಧಾರಣ)
A) ಎಲ್. ಡಿ. ವೈಟ್ B) ಲೂಥರ್ ಗುಲಿಕ್ C) ಹರ್ಬರ್ಟ್ ಎ, ಸೈಮನ್. D) ಓ. ಗ್ಲೆನ್ ಸ್ಟಾಲ್

4) ಸೂಕ್ತ ಹುದ್ದೆಗೆ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ. (ಸುಲಭ)
A) ಬಡ್ತಿ B) ಶಿಸ್ತುಕ್ರಮ C) ಪದೋನ್ನತಿ D) ನೇಮಕಾತಿ

5) ನೇಮಕಾತಿಯು ಆಡಳಿತದ ರಚನೆಯ ಅಡಿಗಲ್ಲಾಗಿರುತ್ತದೆ ಎಂದು ವ್ಯಾಖ್ಯಾನಿಸಿದವರು. (ಸಾಧಾರಣ)
A) ಲೂಥರ್ ಗುಲಿಕ್ B) ಓ ಗ್ಲೆನ್ ಸ್ಟಾಲ್ C) ಅಲೆಗ್ಸಾಂಡರ್ ಹ್ಯಾಮಿಲ್ಟನ್ D) ಎಫ್.ಎಂ. ಮಾರ್ಕ್ಸ್.

6) ಕೇಂದ್ರ ಲೋಕಸೇವಾ ಆಯೋಗ/ ಕರ್ನಾಟಕ ಲೋಕಸೇವಾ ಆಯೋಗದ ಸ್ಥಾಪನೆಯ ಕುರಿತು ತಿಳಿಸುವ ಸಂವಿಧಾನದ ವಿಧಿ.(ಸಾಧಾರಣ)
A) 315 ನೇ ವಿಧಿ B) 316 ನೇ ವಿಧಿ C) 320 ನೇ ವಿಧಿ D) 356 ನೇ ವಿಧಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

7. ಸಾರ್ವಜನಿಕ ಆಡಳಿತ ಏಂದರೇನು? (ಸುಲಭ)
8. ವುಡ್ರೋವಿಲ್ಸನ್ ರ ಪ್ರಕಾರ ಸಾರ್ವಜನಿಕ ಆಡಳಿತ ಎಂದರೇನು? (ಸಾಧಾರಣ)
9. ಫಿಫ್ ನರ್ ಪ್ರಕಾರ ಸಾರ್ವಜನಿಕ ಆಡಳಿತ ಎಂದರೇನು? (ಸಾಧಾರಣ)
10. ಲೂಥರ್ ಗುಲಿಕ್ ರ ಪ್ರಕಾರ ಸಾರ್ವಜನಿಕ ಆಡಳಿತ ಎಂದರೇನು? (ಸಾಧಾರಣ)
11. ಎಫ್,ಎಂ. ಮಾರ್ಕ್ಸ್ ಪ್ರಕಾರ ಸಾರ್ವಜನಿಕ ಆಡಳಿತ ಎಂದರೇನು? (ಕಠಿಣ)
12. ಸಾರ್ವಜನಿಕ ಆಡಳಿತದ ವ್ಯಾಪ್ತಿ ಕುರಿತ ಸಮಗ್ರ ದೃಷ್ಟಿಕೋನದ ಪ್ರತಿಪಾದಕರು ಯಾರು?(ಕಠಿಣ)
13 ಸಾರ್ವಜನಿಕ ಆಡಳಿತದ ವ್ಯಾಪ್ತಿ ಕುರಿತ ಸಂಕುಚಿತ ದೃಷ್ಟಿಕೋನದ ಪ್ರತಿಪಾದಕರು ಯಾರು?(ಕಠಿಣ)
14. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು/ಸದಸ್ಯರನ್ನು ಯಾರು ನೇಮಿಸುತ್ತಾರೆ/ ವಜಾ ಮಾಡುತ್ತಾರೆ? (ರಾಜ್ಯ–2025) (ಸುಲಭ)
15. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು/ಸದಸ್ಯರನ್ನು ಯಾವ ಅಂಶಗಳ ಆಧಾರದ ಮೇಲೆ ವಜಾ ಮಾಡಲಾಗುತ್ತದೆ? (ಸಾಧಾರಣ)
16. ಕೇಂದ್ರ ಲೋಕಸೇವಾ ಆಯೋಗದ ಕೇಂದ್ರ ಕಛೇರಿ ಎಲ್ಲಿದೆ? (ಸುಲಭ)
17. ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರನ್ನು ಯಾರು ನೇಮಿಸುತ್ತಾರೆ? (ಸುಲಭ)
18. ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದ ಕೇಂದ್ರ ಕಛೇರಿಯು ಎಲ್ಲಿದೆ? (ಸುಲಭ)
19. ಭಾರತ ಸಂವಿಧಾನದ ಎಷ್ಟನೇ ಅನುಸೂಚಿಯ ಪ್ರಕಾರ ಕಾನೂನು ಸುವ್ಯವಸ್ಥೆಯನ್ನು ರಾಜ್ಯ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ? (ಕಠಿಣ)
20. ಸಂವಿಧಾನದ ಯಾವ ವಿಧಿಯು ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳ ಬಗ್ಗೆ ತಿಳಿಸುತ್ತದೆ? (ಕಠಿಣ)
21. ಸಂವಿಧಾನದ ಯಾವ ವಿಧಿಯನ್ವಯ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಅಥವಾ ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಜಾರಿಗೊಳಿಸಬಹುದು? (ಕಠಿಣ)
22. ರಾಜ್ಯಗಳಲ್ಲಿ ಪೋಲೀಸ್ ಖಾತೆಯು ಯಾರ ಅಧೀನದಲ್ಲಿರುತ್ತದೆ? (ಸಾಧಾರಣ)
23. ರಾಜ್ಯ ಗೃಹ ಇಲಾಖೆಯ ಆಡಳಿತಾತ್ಮಕ ಮುಖ್ಯಸ್ಥರು ಯಾರು ಆಗಿರುತ್ತಾರೆ? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

24. ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯನ್ನು ತಿಳಿಸಿ./ಸಾರ್ವಜನಿಕ ಆಡಳಿತ ಪ್ರಸ್ತುತ ಅತ್ಯಗತ್ಯವಾಗಿದೆ. ಚರ್ಚಿಸಿ. (ಕಠಿಣ)
25. "ಸಾರ್ವಜನಿಕ ಆಡಳಿತವು ಸಾಮಾಜಿಕ ಭದ್ರತೆಯನ್ನು ಧೃಡಪಡಿಸುತ್ತದೆ" ಈ ಹೇಳಿಕೆಯನ್ನು ಸಮರ್ಥಿಸಿ. (ಕಠಿಣ)
26. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳು ಯಾವುವು? (ಸಾಧಾರಣ)
27. ಕರ್ನಾಟಕ ರಾಜ್ಯ ಲೋಕಸೇವಾ ಆಯೋಗದ ಕಾರ್ಯಗಳು ಯಾವುವು? (ಸಾಧಾರಣ)
28. ನಾಗರಿಕ ಸೇವಾ ಪರೀಕ್ಷೆಗಳ ಮೂರು ಹಂತಗಳು ಯಾವುವು? (ಸುಲಭ)
29. ಸಾರ್ವಜನಿಕ ಭದ್ರತೆ ಒದಗಿಸಲು ಕೇಂದ್ರ ಗೃಹ ಮಂತ್ರಾಲಯವು ಹೊಂದಿರುವ ಸಶಸ್ತ್ರ ಸೈನಿಕ ಪಡೆಗಳನ್ನು ಪಟ್ಟಿ ಮಾಡಿ.(2025)(ಸಾ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

30. "ಸಾರ್ವಜನಿಕ ಆಡಳಿತವು ವ್ಯಕ್ತಿಯ ಜನನದಿಂದ ಮರಣದವರೆಗೆ ಅಗತ್ಯವಾದ ಸೇವೆಗಳನ್ನು ಒದಗಿಸುತ್ತದೆ" ಸಮರ್ಥಿಸಿ. (ಕಠಿಣ)
31. ಲೂಥರ್ ಗುಲಿಕ್ ರ POSDCORB ದೃಷ್ಟಿಕೋನದ ಪ್ರಕಾರ ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ವಿವರಿಸಿ. (ಕಠಿಣ)
32. ಕಾನೂನು ಸುವ್ಯವಸ್ಥೆ ನಿರ್ವಹಣೆಯಲ್ಲಿ ರಾಜ್ಯದ ಪಾತ್ರ ಪ್ರಮುಖವಾದುದು. ದೃಢೀಕರಿಸಿ. (ಕಠಿಣ)
33. ಪ್ರತ್ಯಕ್ಷ ನೇಮಕಾತಿ ಹಾಗೂ ಪರೋಕ್ಷ ನೇಮಕಾತಿಯ ವ್ಯತ್ಯಾಸಗಳಾವುವು?

ರಾಜ್ಯಶಾಸ್ತ್ರ, ಅಧ್ಯಾಯ– 7

ಭಾರತಕ್ಕಿರುವ ಸವಾಲುಗಳು ಮತ್ತು ಅವುಗಳ ಪರಿಹಾರೋಪಾಯಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಮಾಹಿತಿ ಹಕ್ಕು ಕಾಯ್ದೆಯನ್ನು ಜಾರಿಗೆ ತಂದ ವರ್ಷ (ಸುಲಭ)
   A) 2010 B) 2008 C) 2018 D) 2005
2. ಭಾರತದ ಸರ್ವೋಚ್ಚ ನ್ಯಾಯಾಲಯದ ಮೊದಲ ಮಹಿಳಾ ನ್ಯಾಯಮೂರ್ತಿ(ಸಾಧಾರಣ)
   A) ಪ್ರತಿಭಾದೇವಿ ಸಿಂಗ್ ಪಾಟೀಲ B) ಫಾತಿಮಾ ಬೀವಿ C) ವಿ. ಎಸ್. ರಮಾದೇವಿ D) ಸರೋಜಿನಿ ನಾಯ್ಡು
3. 2011ರ ಜನಗಣತಿಯ ಪ್ರಕಾರ ಭಾರತದ ಸಾಕ್ಷರತೆಯ ಪ್ರಮಾಣ
   A) 66.04% B) 74.04% C) 76.04% D) 25.96%
4. ನಮ್ಮ ಸಂವಿಧಾನದ 21ಎ ವಿಧಿ ಸೂಚಿಸುವುದು,
   A) ಧಾರ್ಮಿಕ ಮೂಲಭೂತ ಹಕ್ಕು C) ಶೋಷಣೆಯ ವಿರುದ್ಧದ ಮೂಲಭೂತ ಹಕ್ಕು
   B) ಸಂವಿಧಾನಾತ್ಮಕ ಪರಿಹಾರದ ಮೂಲಭೂತ ಹಕ್ಕು D) ಶೈಕ್ಷಣಿಕ ಮೂಲಭೂತ ಹಕ್ಕು
5. ಡಾ. ಡಿ. ಎಂ. ನಂಜುಡಪ್ಪ ಸಮಿತಿ ರಚನೆಯಾದ ಉದ್ದೇಶ
   A) ಕೋಮುವಾದ ತಡೆಯಲು B) ಪ್ರಾದೇಶಿಕವಾದ ತಡೆಯಲು C) ಅನಕ್ಷರತೆ ತಡೆಯಲು D) ಭ್ರಷ್ಟಾಚಾರ ತಡೆಯಲು

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

6. ಉಪಪ್ರಾದೇಶಿಕವಾದ ಎಂದರೇನು? (ಪರೀಕ್ಷೆ–1, 2025) (ಸಾಧಾರಣ)
7. ಕಳ್ಳ ಸಾಗಾಣಿಕೆ ಎಂದರೇನು? (ಸಾಧಾರಣ)
8. ಲಿಂಗತ್ವ ಅಲ್ಪಸಂಖ್ಯಾತರು ಎಂದರೆ ಯಾರು? (ಸುಲಭ)
9. ಭ್ರಷ್ಟಾಚಾರ ತಡೆಯಲು ಸ್ಥಾಪಿತವಾದ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಸಂಸ್ಥೆಗಳು ಯಾವುವು? (ಕಠಿಣ)
10. ಪ್ರಾದೇಶಿಕವಾದ ಎಂದರೇನು? (ಸಾಧಾರಣ)
11. ಕೋಮುವಾದ ಎಂದರೇನು? (ಸಾಧಾರಣ)
12. ಭ್ರಷ್ಟಾಚಾರ ಎಂದರೇನು? (ಸಾಧಾರಣ)
13. ಬಡತನ ಎಂದರೇನು? (ಸಾಧಾರಣ)
14. ಲಾಭಕೋರತನ ಎಂದರೇನು? (ಸುಲಭ)
15. ಜನಸಂಖ್ಯಾ ಲಾಭಾಂಶ ಎಂದರೇನು? (ಕಠಿಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

16. "ಕಳ್ಳ ಸಾಗಾಣಿಕೆಯು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ". ಹೇಗೆ? ವಿವರಿಸಿ. (ಕಠಿಣ)
17. ಪ್ರಾದೇಶಿಕವಾದವು ರಾಷ್ಟ್ರದ ಏಕತೆಗೆ ಮಾರಕ. ಸಮರ್ಥಿಸಿ.

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

18. ಬಡತನವನ್ನು ಹೋಗಲಾಡಿಸಲು ಜಾರಿಗೆ ತಂದಿರುವ ಯೋಜನೆಗಳನ್ನು ಪಟ್ಟಿ ಮಾಡಿ. (ಸಾಧಾರಣ)
19. "ಲಾಭಕೋರತನದಿಂದ ಅನೇಕ ದುಷ್ಪರಿಣಾಮಗಳು ಉಂಟಾಗುತ್ತವೆ." ಸಮರ್ಥಿಸಿ.(ಕಠಿಣ)
20. ಭ್ರಷ್ಟಾಚಾರದ ಜಾಲದಲ್ಲಿ ಸೇರಿಕೊಂಡಿರುವ ಸಂಗತಿಗಳು ಯಾವುವು? (ಸುಲಭ)
21. ಭ್ರಷ್ಟಾಚಾರವು ಉಂಟು ಮಾಡುವ ದುಷ್ಪರಿಣಾಮಗಳನ್ನು ತಿಳಿಸಿ. (ಸಾಧಾರಣ) (ರಾ .ಪೂ 2020)
22. ಭ್ರಷ್ಟಾಚಾರ ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳನ್ನು ವಿಶ್ಲೇಷಿಸಿ (ಸಾಧಾರಣ)
23. ಆರ್ಥಿಕ ಅಸಮಾನತೆಯ ನಿವಾರಣೆಯ ಕ್ರಮಗಳನ್ನು ವಿವರಿಸಿ. (ಕಠಿಣ)
24. ಜನಸಂಖ್ಯಾ ಸ್ಫೋಟದಿಂದಾಗುವ ಸಮಸ್ಯೆಗಳಾವುವು? (ಸುಲಭ)
25. ಲಾಭಕೋರತನವನ್ನು ನಿಯಂತ್ರಿಸುವ ಕ್ರಮಗಳನ್ನು ತಿಳಿಸಿ. (ಕಠಿಣ)
26. ಕೋಮುವಾದವನ್ನು ನಿಯಂತ್ರಿಸಲು ನಿಮ್ಮ ಸಲಹೆಗಳೇನು?/ ಕೋಮುವಾದ ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳಾವುವು? (ಕಠಿಣ)
27. ಜನಸಂಖ್ಯಾಸ್ಫೋಟದಿಂದ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗಗಳು ಯಾವುವು? (ಸುಲಭ)
28. ಕಳ್ಳಸಾಗಾಣಿಕೆಯನ್ನು ನಿಯಂತ್ರಿಸಲು ನಿಮ್ಮ ಸಲಹೆಗಳೇನು? / ಕಳ್ಳಸಾಗಾಣಿಕೆಯನ್ನು ತಡೆಗಟ್ಟುವ ಕ್ರಮಗಳಾವುವು? (ಸಾಧಾರಣ)

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

29. ಇತ್ತೀಚೆಗೆ ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಸುಧಾರಣೆಯಾಗುತ್ತಿದೆ. ಚರ್ಚಿಸಿ./ ಭಾರತದಲ್ಲಿ ಲಿಂಗತಾರತಮ್ಯ ಹೋಗಲಾಡಿಸಲು / ಮಹಿಳೆಯರ ಸ್ಥಾನಮಾನ ಸುಧಾರಿಸಲು ಕೈಗೊಂಡ ಕ್ರಮಗಳು ಯಾವುವು? (ಸಾಧಾರಣ) (ಸೆಪ್ಟೆಂಬರ್–2019) (ಪರೀಕ್ಷೆ–2 ,2024)/
30. ಲಿಂಗತ್ವ ಅಲ್ಪ ಸಂಖ್ಯಾತರಿಗೆ ಆಗುವ ತಾರತಮ್ಯವನ್ನು ಹೋಗಲಾಡಿಸಲು ಕೈಗೊಂಡಿರುವ ಉಪಕ್ರಮಗಳು ಯಾವುವು? / ಭಾರತದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಸಬಲೀಕರಣಕ್ಕಾಗಿ ಕೈಗೊಂಡಿರುವ ಕ್ರಮಗಳು ಯಾವುವು? (ಕಠಿಣ) (ಪರೀಕ್ಷೆ–1, ಮಾರ್ಚ್/ ಏಪ್ರಿಲ್– 2025)
31. ಅನಕ್ಷರತೆಯನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳು ಯಾವುವು? (ಪರೀಕ್ಷೆ–1, ಮಾರ್ಚ್–2025) (ಸಾಧಾರಣ)
32. ಕೋಮುವಾದವು ಸಾಮಾಜಿಕ ಸಾಮರಸ್ಯವನ್ನು ಕಲುಷಿತಗೊಳಿಸುತ್ತದೆ. ಸಮರ್ಥಿಸಿ./ ದೇಶದ ಐಕ್ಯತೆಗೆ ಮಾರಕ. ಹೇಗೆ? (2024) (ಸಾ)

ರಾಜ್ಯಶಾಸ್ತ್ರ, ಅಧ್ಯಾಯ– 21

ಭಾರತದ ವಿದೇಶಾಂಗ ನೀತಿ ಮತ್ತು ಜಾಗತಿಕ ಸವಾಲುಗಳು

I.ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. "ಭಾರತದ ವಿದೇಶಾಂಗ ನೀತಿಯ ಪಿತಾಮಹ"/ ಶಿಲ್ಪಿ ಎಂದು ಇವರನ್ನು ಕರೆಯಲಾಗಿದೆ. (ಸುಲಭ)
   A) ಡಾ.ಬಿ.ಆರ್. ಅಂಬೇಡ್ಕರ್ B) ಜವಾಹರಲಾಲ್ ನೆಹರು C) ಎಂ.ಎಸ್. ಸ್ವಾಮಿನಾಥನ್. D) ಸರ್ ಎಂ. ವಿಶ್ವೇಶ್ವರಯ್ಯ.
2. ವಿಶ್ವ ಸಂಸ್ಥೆಯು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಮಾಡಿದ ದಿನ. (ಸುಲಭ) (2016, 2018, 2019, 2020, 2021, 2024)
   A) 1950, ಡಿಸೆಂಬರ್ 10 B) 1948, ಮಾರ್ಚ್ 15 C) 1948, ಡಿಸೆಂಬರ್ 10 D) 1945, ಡಿಸೆಂಬರ್ 10
3. "ತೃತೀಯ ಜಗತ್ತು" ಎಂಬ ಪದವನ್ನು ಮೊದಲ ಬಾರಿಗೆ ಬಳಸಿದವರು. (ಸಾಧಾರಣ)
   A) ಫ್ರಾಂಕ್ಲಿನ್ ಡಿ.ರೂಸ್ ವೆಲ್ಟ್ B) ಜವಾಹರ್ ಲಾಲ್ ನೆಹರು C) ಜೋಸೆಫ್ ಸ್ಟಾಲಿನ್ D) ಆಲ್ಫ್ರೆಡ್ ಸಾವಿ
4 ಅಮೆರಿಕ ಮತ್ತು ರಷ್ಯಾ ನೇತೃತ್ವದ ಬಣಗಳಿಗೆ ಸೇರದೆ ಭಾರತ ತಟಸ್ಥವಾಗಿ ಉಳಿದ ನೀತಿಯನ್ನು ಹೀಗೆನ್ನುವರು, (ಕಠಿಣ) (2022, 2025)
   A) ವಿದೇಶಾಂಗ ನೀತಿ B) ನಿಶ್ಯಸ್ತ್ರೀಕರಣ ನೀತಿ C) ಅಲಿಪ್ತನೀತಿ D) ವರ್ಣಭೇದನೀತಿ
5. ಅಲಿಪ್ತ ನೀತಿಯನ್ನು ತನ್ನ ವಿದೇಶಾಂಗ ನೀತಿಯ ಮೂಲ ತತ್ವವನ್ನಾಗಿ ಮಾಡಿಕೊಂಡ ದೇಶ. (ಸಾಧಾರಣ) (ಜೂನ್– 2022)
   A) ಅಮೆರಿಕಾ B) ರಷ್ಯಾ C) ಚೀನಾ D) ಭಾರತ
6. ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನ. (ಸುಲಭ) (ಜೂನ್– 2020/ಜೂನ್–2023)
   A) ಡಿಸೆಂಬರ್ 10 B) ಮಾರ್ಚ್15 C) ಜೂನ್ 6 D) ಜುಲೈ 11
7. 1789 ರ ಫ್ರಾನ್ಸ್ ಮಹಾಕ್ರಾಂತಿಯ ಪ್ರಮುಖ ಉದ್ದೇಶ. (ಕಠಿಣ) (ಸೆಪ್ಟಂಬರ್– 2020)
   A) ವಿಶ್ವಸಂಸ್ಥೆಯ ಸ್ಥಾಪನೆ B) ಮಾನವ ಹಕ್ಕುಗಳ ಸಂರಕ್ಷಣೆ C) ವಿದೇಶಿ ಆಕ್ರಮಣ ತಡೆಯುವುದು. D) ರಾಷ್ಟ್ರ ಸಂಘದ ಸ್ಥಾಪನೆ.
8. ಭಾರತ ನಿಶ್ಯಸ್ತ್ರೀಕರಣವನ್ನು ಉತ್ತೇಜಿಸುತ್ತದೆ. ಏಕೆಂದರೆ (ಕಠಿಣ) (ಮಾರ್ಚ್–2020)
   A) ಭಾರತ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿದೆ. B) ಭಾರತ ಅತಿದೊಡ್ಡ ಮಿಲಿಟರಿಯನ್ನು ಹೊಂದಿದೆ.
   C) ಭಾರತ ಶಾಂತಿಪ್ರಿಯ ರಾಷ್ಟ್ರ. D) ಭಾರತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ.
9. 1954 ರಲ್ಲಿ ಭಾರತದೊಂದಿದೆ ಪಂಚಶೀಲ ತತ್ವಗಳಿಗೆ / ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರ. (ಸಾಧಾರಣ) (ಸೆಪ್ಟೆಂಬರ್–2021)
   A) ಚೀನಾ B) ಇಂಡೋನೇಷಿಯಾ C) ಪಾಕಿಸ್ತಾನ D) ಶ್ರೀಲಂಕಾ.

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

10. ವಿದೇಶಾಂಗ ನೀತಿಯನ್ನು ಅರ್ಥೈಸಿ. (ಸಾಧಾರಣ)
11. ನಿಶ್ಯಸ್ತ್ರೀಕರಣ ಎಂದರೇನು? (ಸಾಧಾರಣ) (ಏಪ್ರಿಲ್– 2019, ಪ–1–2024, ಪ–2–2024)
12. ಮಾನವ ಹಕ್ಕುಗಳು ಎಂದರೇನು? (ಸುಲಭ)
13. ಭಯೋತ್ಪಾದಕತೆ ಎಂದರೇನು? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

14. ಭಾರತದ ವಿದೇಶಾಂಗ ನೀತಿಯನ್ನು ನಿರ್ಧರಿಸುವ ಸಾಮಾನ್ಯ ನಿರ್ಧಾರಕ ಅಂಶಗಳನ್ನು ಪಟ್ಟಿಮಾಡಿ. (ಸಾಧಾರಣ)
15. ಭಾರತದ ವಿದೇಶಾಂಗ ನೀತಿಯ ವಿಕಾಸದ ಹಂತಗಳನ್ನು ಬರೆಯಿರಿ. (ಕಠಿಣ)
16. ಜಾಗತಿಕವಾಗಿ ಮಾನವ ಹಕ್ಕುಗಳ ರಕ್ಷಣೆಗಾಗಿ ಅನೇಕ ಹೋರಾಟಗಳು ನಡೆದಿವೆ. ಸಮರ್ಥಿಸಿ. (ಕಠಿಣ) (ಜೂನ್ – 2019)
17. ನಿಶ್ಯಸ್ತ್ರೀಕರಣ ಸಾಧನೆಗಾಗಿ ಏರ್ಪಟ್ಟಿರುವ ಜಾಗತಿಕ ಒಪ್ಪಂದಗಳು ಯಾವುವು? (ಸಾಧಾರಣ)
18. ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಪ್ರಮುಖ ಸಮಸ್ಯೆಗಳು ಯಾವುವು? (ಸಾಧಾರಣ) (ಜೂನ್–2022)
19. ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟ/ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಪ್ರಮುಖ ಲಕ್ಷಣಗಳೇನು? (ಕಠಿಣ) (ಜೂನ್– 2023)
20. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ. (ಸುಲಭ) (ಏಪ್ರಿಲ್– 2015,2017,ಜೂ–2017,ಜೂ–2018)
21. ಆರ್ಥಿಕ ಅಸಮಾನತೆ ನಿವಾರಣೆಗೆ ಭಾರತ ಕೈಗೊಂಡ ಕ್ರಮಗಳನ್ನು ಚರ್ಚಿಸಿ.

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

22. ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳು ಯಾವುವು? (ಸುಲಭ)
23. ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಭಾರತ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ. (ಸಾಧಾರಣ) (ಜೂ–2016,ಏ–2018,ಏ–2022)
24. "ಶಸ್ತ್ರಾಸ್ತ್ರ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ" ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ದುಷ್ಪರಿಣಾಮಗಳಾವುವು? (ಕಠಿಣ) (ಮಾ–2020)
25. ಭಯೋತ್ಪಾದನೆಯ ಸವಾಲನ್ನು ಎದುರಿಸಲು ಭಾರತವು ಕೈಗೊಂಡಿರುವ ಕ್ರಮಗಳಾವುವು? (ಸಾಧಾರಣ) (2023, 2024)

ರಾಜ್ಯಶಾಸ್ತ್ರ, ಅಧ್ಯಾಯ– 22
ಜಾಗತಿಕ ಸಂಸ್ಥೆಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ವಿಶ್ವಸಂಸ್ಥೆ ಸ್ಥಾಪನೆಯಾದ ವರ್ಷ. (ಸುಲಭ) (ಜೂ– 2017)
   A) 1950 B) 1945 C) 1919 D) 1948
2. ವಿಶ್ವಸಂಸ್ಥೆ ಎಂಬ ಪದವನ್ನು ಚಾಲ್ತಿಗೆ ತಂದವರು. (ಸಾಧಾರಣ) (ಜೂ–2016)
   A) ಫ್ರಾಂಕ್ಲಿನ್ ಡಿ. ರೂಸ್ ವೆಲ್ಟ್ B) ವಿನ್ಸ್ಟನ್ ಚರ್ಚಿಲ್ C) ಜೋಸೆಫ್ ಸ್ಟಾಲಿನ್ D) ಆಲ್ಫ್ರೆಡ್ ಸಾವಿ
3. ವಿಶ್ವಸಂಸ್ಥೆಯ ಮುಖ್ಯ ಕಛೇರಿ ಇರುವ ನಗರ. (ಸುಲಭ) (K–2017, ಜೂ–2018,ಸೆ–2021)
   A) ದಿಹೇಗ್ B) ಜಿನೇವಾ C) ವಾಷಿಂಗ್ಟನ್ D) ನ್ಯೂಯಾರ್ಕ್
4 ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ, (ಸಾಧಾರಣ)
   A) ಸಾಮಾನ್ಯಸಭೆ B) ಸಚಿವಾಲಯ C) ಭದ್ರತಾಮಂಡಳಿ D) ದತ್ತಿಸಮಿತಿ
5. ಅಂತರರಾಷ್ಟ್ರೀಯ ನ್ಯಾಯಾಲಯದ ಕೇಂದ್ರ ಕಛೇರಿ ಇರುವ ನಗರ, (ಸುಲಭ) (K–2015)
   A) ದಿ ಹೇಗ್ B) ಜಿನೇವಾ C) ವಾಷಿಂಗ್ಟನ್ D) ನ್ಯೂಯಾರ್ಕ್
6. ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾದ ವರ್ಷ, (ಸುಲಭ)
   A) 1945 B) 1948 C) 1950 D) 1965
7. 1965 ರಲ್ಲಿ ತನ್ನ ಕಾರ್ಯಕ್ಕಾಗಿ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ವಿಶ್ವಸಂಸ್ಥೆ ಆಶ್ರಯದ ಸಂಸ್ಥೆ,(ಕಠಿಣ)
   A) ಯುನೆಸ್ಕೋ B) ವಿಶ್ವಆರೋಗ್ಯಸಂಸ್ಥೆ C) ವಿಶ್ವವ್ಯಾಪಾರ ಸಂಘಟನೆ D) ಯುನಿಸೆಫ್
8. "ಸಾರ್ಕ್" ನ ಕೇಂದ್ರ ಕಛೇರಿ ಇರುವ ನಗರ, (ಸುಲಭ)
   A) ದೆಹಲಿ B) ಜಿನೇವಾ C) ಕಠ್ಮಂಡು D) ನ್ಯೂಯಾರ್ಕ್
9. ಜಾಗತಿಕ ಸಂಸತ್ತು ಎಂದೇ ಪ್ರಸಿದ್ಧಿಯಾಗಿರುವ ವಿಶ್ವಸಂಸ್ಥೆಯ ಅಂಗಸಂಸ್ಥೆ.(ಸುಲಭ) (ಜೂ –2016)
   A) ಸಚಿವಾಲಯ B) ಭದ್ರತಾಸಮಿತಿ C) ಸಾಮಾನ್ಯಸಭೆ D) ದತ್ತಿಸಮಿತಿ
10. ವಿಶ್ವಸಂಸ್ಥೆಯ ಪ್ರತಿಸದಸ್ಯ ರಾಷ್ಟ್ರವು ಸಾಮಾನ್ಯ ಸಭೆಗೆ ಕಳುಹಿಸಬೇಕಾದ ಪ್ರತಿನಿಧಿಗಳ ಸಂಖ್ಯೆ (ಸಾಧಾರಣ) (ಸೆ – 2021)
   A) 2 B) 3 C) 4 D) 5
11. ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ಕಚೇರಿ ಇರುವುದು. (ಸಾಧಾರಣ) (ಪ2–2024)
   A) ನ್ಯೂಯಾರ್ಕ್ B) ಪ್ಯಾರಿಸ್ C) ರೋಮ್ D) ಜಿನೇವಾ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

12. ದತ್ತಿ ಸಮಿತಿಯ ಆಡಳಿತಕ್ಕೊಳಪಟ್ಟು ಸ್ವತಂತ್ರಗೊಂಡ ಕೊನೆಯ ಪ್ರದೇಶ ಯಾವುದು?(ಕಠಿಣ)
13. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ? (ಸುಲಭ) (ಜೂ– 2019)
14. ದ್ವಿತೀಯ ಮಹಾಯುದ್ಧದ ಬಳಿಕ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಸ್ಥಾಪನೆಯಾದ ಸಂಸ್ಥೆ ಯಾವುದು? (ಸಾಧಾರಣ) (ಜು–2018)
15. ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು ಎಂದು ಯಾವ ಸಂಸ್ಥೆಯನ್ನು ಕರೆಯಲಾಗಿದೆ? (ಸಾಧಾರಣ)
16. ಕಾಮನ್ ವೆಲ್ತ್ ರಾಷ್ಟ್ರಗಳ ಸಂಘದಲ್ಲಿಎಷ್ಟು ಸದಸ್ಯ ರಾಷ್ಟ್ರಗಳಿವೆ? (ಸುಲಭ)
17. "ಸಾರ್ಕ್" ಸಂಸ್ಥೆ ಯಾವ ವರ್ಷ ಸ್ಥಾಪನೆಯಾಯಿತು? (ಸುಲಭ)
18. ಐರೋಪ್ಯ ಒಕ್ಕೂಟದ ಕೇಂದ್ರ ಕಛೇರಿ ಎಲ್ಲಿದೆ? (ಸಾಧಾರಣ)
19. ಆಫ್ರಿಕನ್ ಒಕ್ಕೂಟ ಸಂಸ್ಥೆ ಯಾವ ವರ್ಷ ಸ್ಥಾಪನೆಯಾಯಿತು? (ಸಾಧಾರಣ)
20. ಯುನಿಸೆಫ್ ಮಕ್ಕಳ ಅಭಿವೃದ್ಧಿಗೆ ಹೇಗೆ ಶ್ರಮಿಸುತ್ತಿದೆ? (ಸಾಧಾರಣ) (ಜೂ–2018)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

21. ವಿಶ್ವಸಂಸ್ಥೆ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ ವಿಶ್ವದ ಪ್ರಮುಖ ನಾಯಕರು ಯಾರು?(ಸುಲಭ)
22. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿರುವ ಖಾಯಂ ಸದಸ್ಯ ರಾಷ್ಟ್ರಗಳಾವುವು? (ಸುಲಭ) (ಜೂ–2015,ಪ3–2024)
23. 'ವಿಶ್ವ ಆರೋಗ್ಯ ಕಾಪಾಡುವಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪಾತ್ರ ಮಹತ್ವದ್ದಾಗಿದೆ." ಹೇಗೆ? (ಸಾಧಾರಣ)
24. ಆಹಾರ ಮತ್ತು ಕೃಷಿ ಸಂಸ್ಥೆಯ ಉದ್ದೇಶಗಳೇನು? (ಸಾಧಾರಣ) (ಸೆ–2020,K–2018)
25. ವಿಶ್ವದ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಐ.ಬಿ.ಆರ್.ಡಿ. ಯ (ವಿಶ್ವ ಬ್ಯಾಂಕ್) ಪಾತ್ರ ಮಹತ್ವದ್ದು, ಚರ್ಚಿಸಿ. (ಕಠಿಣ)

26. ಐರೋಪ್ಯ ಒಕ್ಕೂಟದ ಮುಖ್ಯ ಅಂಗಸಂಸ್ಥೆಗಳಾವುವು?(ಕಠಿಣ)

27. ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಮ್.ಎಫ್. ನ ಪಾತ್ರ ಪ್ರಮುಖವಾಗಿದೆ. ಹೇಗೆ? (ಸಾಧಾರಣ) (2016, 2023)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

28. ವಿಶ್ವಸಂಸ್ಥೆಯ ಅಂಗಸಂಸ್ಥೆಗಳಾವುವು? (ಸುಲಭ)

29. ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳನ್ನು ಪಟ್ಟಿ ಮಾಡಿ. (ಸಾಧಾರಣ) (ಏ–2019)

30. ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ಕಾರ್ಯಗಳಾವುವು? (ಸಾಧಾರಣ)

31. ಯುನೆಸ್ಕೋದ ಕಾರ್ಯಗಳಾವುವು? (ಸಾಧಾರಣ) (ಜೂ–2023, ಪ1–2025)

32. ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳಾವುವು?

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

33. ಸಾಮಾನ್ಯ ಸಭೆಯ ರಚನೆ ಮತ್ತು ಕಾರ್ಯಗಳನ್ನು ಬರೆಯಿರಿ. (ಸಾಧಾರಣ)

34. ಭದ್ರತಾ ಮಂಡಳಿಯ ರಚನೆ ಮತ್ತು ಕಾರ್ಯಗಳನ್ನು ಬರೆಯಿರಿ. (ಸಾಧಾರಣ) (ಏ– 2019, ಪ1–2024, ಜೂ–2020, ಸೆ–2020)

35. ವಿಶ್ವಸಂಸ್ಥೆಯ ಸಾಧನೆಗಳನ್ನು ಪಟ್ಟಿ ಮಾಡಿ. / ಜಾಗತಿಕ ಶಾಂತಿ ಸ್ಥಾಪನೆ ಹಾಗೂ ಸಮಸ್ಯೆಗಳ ನಿವಾರಣೆಯಲ್ಲಿ ವಿಶ್ವಸಂಸ್ಥೆಯ ಸಾಧನೆಯು ಮಹತ್ವವಾದದ್ದು. ಸಮರ್ಥಿಸಿ. (ಕಠಿಣ)(ಜೂ–2019, ಪ1–2025)

ಸಮಾಜಶಾಸ್ತ್ರ, ಅಧ್ಯಾಯ– 8

ಸಾಮಾಜಿಕ ಸ್ಥರವಿನ್ಯಾಸ

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಅಸ್ಪೃಶ್ಯತೆಯ ಆಚರಣೆಯನ್ನು ನಿಷೇಧಿಸಿದ ಸಂವಿಧಾನದ ವಿಧಿ, (ಜೂ–2015, ಸೆ–2021) (ಸುಲಭ)
A) 24ನೇ ವಿಧಿ B) 42ನೇ ವಿಧಿ C) 17ನೇ ವಿಧಿ D) 30ನೇ ವಿಧಿ

2. 'ಮಾನವ ಕುಲ ತಾನೊಂದೆ ವಲಂ' ಈ ವಾಕ್ಯವನ್ನು ಹೇಳಿದವರು (ಎ–2015, ಎ–2017, ಎ–2023, ಮೇ–2025) (ಸುಲಭ)
A) ಪಂಪ B) ಜನ್ನ C) ರನ್ನ D) ಅಂಬೇಡ್ಕರ್

3. 'ಅಸ್ಪೃಶ್ಯತೆಯನ್ನು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' ಎಂದು ಹೇಳಿದವರು (ರಾ ಪೊ–2016, ಜೂನ್–2023) (ಸುಲಭ)
A) ಅಂಬೇಡ್ಕರ್ B) ಜ್ಯೋತಿಭಾ ಫುಲೆ C) ಮಹಾತ್ಮ ಗಾಂಧೀಜಿ D) ವಿವೇಕಾನಂದ

4. ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂದು ಮಾರ್ಪಾಡುಗೊಳಿಸಿದ ವರ್ಷ (ಕಠಿಣ)
A) 1989 B) 1976 C) 1955 D) 1950

5. ಅಸ್ಪೃಶ್ಯತೆ ಆಚರಣೆ ಶಿಕ್ಷಾರ್ಹ ಅಪರಾಧ ಎಂದು ತಿಳಿಸುವ ಕಾಯಿದೆ (ಕಠಿಣ)
A) ಗ್ರಾಹಕ ಹಕ್ಕುಗಳ ಸಂರಕ್ಷಣಾ ಕಾಯಿದೆ.. B) ಅಸ್ಪೃಶ್ಯತೆ ಅಪರಾಧಗಳ ಕಾಯಿದೆ.
C) ಬಾಲಕಾರ್ಮಿಕ ನಿರ್ಮೂಲನಾ ಕಾಯಿದೆ. D) ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯಿದೆ.

6. ಭಾರತದಲ್ಲಿ ಸ್ತರವಿನ್ಯಾಸ ವ್ಯವಸ್ಥೆಯನ್ನು ಈ ಕೆಳಕಂಡದ್ದರಲ್ಲಿ ಗುರುತಿಸಬಹುದು (ಸುಲಭ)
A) ವರ್ಣಬೇಧ ನೀತಿ B) ಗುಲಾಮಗಿರಿ C) ಜಾತಿ ಪದ್ಧತಿ D) ಮೇಲಿನ ಯಾವುದೂ ಅಲ್ಲ

7. 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು ಜಾರಿಗೆ ತರಲಾದ ವರ್ಷ (ಸೆ–2021) (ಸುಲಭ)
A) 1976 B) 1955 C) 1989 D) 1996

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

8. ಸಾಮಾಜಿಕ ಸ್ತರವಿನ್ಯಾಸ ಎಂದರೇನು? (ರಾ ಪೂ–2019, ಜೂನ್–2016, ಪ 1–2024) (ಸುಲಭ)

9. ಪೂರ್ವಾಗ್ರಹ ಎಂದರೇನು? (ಮಾ–2024) (ಸಾಧಾರಣ)

10. ಅಸ್ಪೃಶ್ಯತೆ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದ ಶಾಸನ ಯಾವುದು? (ಕಠಿಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

11. ಪೂರ್ವಾಗ್ರಹಕ್ಕೆ ಕಾರಣಗಳೇನು? (ಕಠಿಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

12. ಸಾಮಾಜಿಕ ಸ್ತರವಿನ್ಯಾಸವು ಕಾಲದಿಂದ ಕಾಲಕ್ಕೆ ಹಾಗೂ ದೇಶದಿಂದ ದೇಶಕ್ಕೆ ಭಿನ್ನವಾಗಿದೆ. ಚರ್ಚಿಸಿ. (K–2023,) (ಸಾಧಾರಣ)

13. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು? / ಸಾಮಾಜಿಕ ಸ್ತರವಿನ್ಯಾಸ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳನ್ನು ತಿಳಿಸಿ./ಭಾರತವು ಅಸ್ಪೃಶ್ಯತೆಯ ನಿವಾರಣೆಗೆ ಕಾನೂನಾತ್ಮಕವಾಗಿ ಹೇಗೆ ಶ್ರಮಿಸುತ್ತಿದೆ?/ ಭಾರತದಲ್ಲಿ ಅಸ್ಪೃಶ್ಯರ ಹಕ್ಕುಗಳನ್ನು ಶಾಸನಾತ್ಮಕವಾಗಿ ಹೇಗೆ ಸಂರಕ್ಷಿಸಿದೆ? /ಭಾರತದಲ್ಲಿ ಅಸ್ಪೃಶ್ಯತೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಸಮರ್ಥಿಸಿ. (ಏಪ್ರಿಲ್–2015, ರಾ.ಪೂ.–2016, ಏಪ್ರಿಲ್ –2016, ಏಪ್ರಿಲ್ – 2017, ಜೂನ್–2017, ರಾ.ಪೂ.–2018 ಏಪ್ರಿಲ್–2018, ಜೂನ್–2018, ಏಪ್ರಿಲ್–2019, ಜೂನ್–2019, ಮಾ–2021, ಸೆಪ್ಟೆಂಬರ್– 2020, ಮಾದರಿ–2022, ರಾ.ಪೂ.–2022, ಏಪ್ರಿಲ್–2022, ಜೂನ್–2022, ಮಾದರಿ–2023, ರಾ.ಮ–2024, ಪ 3–2024) **(ಸಾಧಾರಣ)**

14. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು. ಚರ್ಚಿಸಿ. (ಸಾಧಾರಣ)

ಸಮಾಜಶಾಸ್ತ್ರ, ಅಧ್ಯಾಯ- 9

ದುಡಿಮೆ ಮತ್ತು ಆರ್ಥಿಕ ಜೀವನ

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಸಂಘಟಿತ ಕೆಲಸಗಾರರಿಗೆ ಉದಾಹರಣೆ (ಸುಲಭ)
   A) ತರಕಾರಿ ಮಾರಾಟಗಾರರು B) ಕೂಲಿ ಕಾರ್ಮಿಕರು C) ಮನೆ ಕೆಲಸಗಾರರು D) ಶಿಕ್ಷಕರು
2. ಅಸಂಘಟಿತ ವಲಯದ ದುಡಿಮೆಗಾರ (ರಾ ಪೂ–2020) (ಸುಲಭ)
   A) ವೈದ್ಯರು B) ಕೃಷಿ ಕಾರ್ಮಿಕರು C) ವಿಮಾ ಕಂಪನಿ ಕಾರ್ಮಿಕರು D) ಸೈನಿಕರು
3. ಆಧುನಿಕ ಕಾಲದಲ್ಲಿ ವರ್ಗ ವ್ಯವಸ್ಥೆಗೆ ಕಾರಣ (ಕಠಿಣ)
   A) ಕೈಗಾರಿಕೀಕರಣ B) ವಸಹಾತು ಶಾಹಿತ್ವ C) ಸಾಮ್ರಾಜ್ಯಶಾಹಿತ್ವ D) ಜಾಗತೀಕರಣ
4. ಕೂಲಿ ರಹಿತ ದುಡಿಮೆಗೆ ಉತ್ತಮ ಉದಾಹರಣೆ (ಮಾದರಿ–2023) (ಸುಲಭ)
   A) ಜೀತದಾಳು B) ಕೃಷಿ ಕಾರ್ಮಿಕ C) ಗೃಹಿಣಿ D) ಕೈತೋಟಗಾರ
5. ಸಂಭಾವನೆ ರಹಿತ ದುಡಿಮೆಗೆ ಒಂದು ಉತ್ತಮ ಉದಾಹರಣೆ (ಸುಲಭ)
   A) ಬೀದಿ ಬದಿಯ ವ್ಯಾಪಾರ B) ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವುದು
   C) ಕೈಗಾರಿಕೆಗಳಲ್ಲಿ ದುಡಿಮೆ D) ಶಾಲೆಗಳಲ್ಲಿ ಶಿಕ್ಷಕರ ದುಡಿಮೆ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

6. ದುಡಿಮೆ ಎಂದರೇನು? (ಸುಲಭ)
7. ಶ್ರಮ ವಿಭಜನೆ ಎಂದರೇನು? (ರಾ ಪೂ–2024) (ಸುಲಭ)
8. ಸಮಾನ ವೇತನ ಕಾಯ್ದೆಯನ್ನು ಯಾವಾಗ ಜಾರಿಗೆ ತರಲಾಗಿದೆ? (ಸಾಧಾರಣ)
9. ಸಮಾನ ವೇತನ ಕಾಯ್ದೆಯನ್ನು ಏಕೆ ಜಾರಿಗೆ ತರಲಾಗಿದೆ? (ಸಾಧಾರಣ)
10. ವಿಶೇಷ ಪರಿಣಿತಿ ಎಂದರೇನು? (ಸುಲಭ)
11. ಕೂಲಿ ಸಹಿತ ದುಡಿಮೆ ಎಂದರೇನು? (ಸುಲಭ)
12. ಕೂಲಿ ರಹಿತ ದುಡಿಮೆ ಎಂದರೇನು? (ಸುಲಭ)
13. ನಿರುದ್ಯೋಗ ಎಂದರೇನು? (ಮಾ–2021) (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

14. ಕೂಲಿ ಸಹಿತ ಕೂಲಿ ರಹಿತ ದುಡಿಮೆಯ ವ್ಯತ್ಯಾಸ ತಿಳಿಸಿ. (ಪ 1–2024) (ಸಾಧಾರಣ)
15. ನಿರುದ್ಯೋಗಕ್ಕೆ ಕಾರಣಗಳೇನು ? (ರಾ ಪೂ–2019) (ಸಾಧಾರಣ)
16. ನಿರುದ್ಯೋಗವು ಒಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ ಹೇಗೆ ? / ನಿರುದ್ಯೋಗವು ಸಮಾಜದ ಮೇಲೆ ಕೆಟ್ಟ ಪರಿಣಾಮನ್ನು ಬೀರಿದೆ ಹೇಗೆ? / ನಿರುದ್ಯೋಗದಿಂದಾಗುವ ಪರಿಣಾಮಗಳಾವುವು? (ಜೂನ್–2018) (ಕಠಿಣ)
17. ನಿರುದ್ಯೋಗ ನಿವಾರಣೆಗೆ ಸರ್ಕಾರದ ಕ್ರಮಗಳೇನು ? / ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಹೇಗೆ ಪರಿಹರಿಸಬಹುದು? (ಎಪ್ರಿಲ್–2016, ರಾ.ಪೂ–2017, ಜೂನ್– 2017, ಎಪ್ರಿಲ್– 2017, ರಾ.ಪೂ– 2018, ಎಪ್ರಿಲ್–2018, ಮಾ–1–2021, ಮಾದರಿ– 2023, ಜೂನ್–2023, ರಾ.ಪೂ–2024, ಪ –2 –2024, ಪ –3 –2024) (ಸಾಧಾರಣ)
18. ಸಂಘಟಿತ ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು? / ಸಂಘಟಿತ ಕೆಲಸಗಾರರು ಅಸಂಘಟಿತ ಕೆಲಸಗಾರರಿಗಿಂತ ಭಿನ್ನ ಹೇಗೆ? (ಎಪ್ರಿಲ್–2015, ಜೂನ್–2015, ರಾ.ಪೂ–2016, ಜೂನ್–2020, ಮಾ–2 2020, ರಾ.ಪೂ–2022, ರಾ.ಪೂ. 2023) (ಸುಲಭ)
19. ಅಸಂಘಟಿತ ಕೆಲಸಗಾರರು ಎದುರಿಸುತ್ತಿರುವ ಸವಾಲುಗಳೇನು ? (ಜೂನ್–2016, ಮಾ –2 2019, ರಾ.ಪೂ–2019, ಜೂನ್–2019, ಎಪ್ರಿಲ್–2022, ಜೂನ್–2022, ಎಪ್ರಿಲ್– 2023) (ಸಾಧಾರಣ)
20. ಸಂಘಟಿತ ವಲಯದ ದುಡಿಮೆಯ ಲಕ್ಷಣಗಳನ್ನು ವಿವರಿಸಿ. (ಎಪ್ರಿಲ್–2023, ಮೇ–2025) (ಸಾಧಾರಣ)
21. ದುಡಿಮೆಯಲ್ಲಿನ ತಾರತಮ್ಯತೆಯ ಸ್ವರೂಪವನ್ನು ವಿವರಿಸಿ . (ಮಾರ್ಚ್–2019) (ಸಾಧಾರಣ)

ಸಮಾಜಶಾಸ್ತ್ರ, ಅಧ್ಯಾಯ- 23
ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಮೌನ ಕಣಿವೆ ಆಂದೋಲನ ಪ್ರಾರಂಭವಾಗಿದ್ದು. (ಜೂನ್–2019) (ಸುಲಭ)
   A) ತಮಿಳುನಾಡು B) ಕರ್ನಾಟಕ C) ಕೇರಳ D) ಮಹಾರಾಷ್ಟ್ರ
2. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದಲ್ಲಿ ನಡೆದ ಪರಿಸರ ಚಳವಳಿ.
   A) ಚಿಪ್ಕೋ ಚಳವಳಿ B) ಅಪ್ಪಿಕೋ ಚಳವಳಿ C) ಮೌನ ಕಣಿವೆ ಆಂದೋಲನ D) ಕೈಗಾ ಅಣುಸ್ಥಾವರ ವಿರೋಧಿ ಚಳವಳಿ
3. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದವರು. (ಸೆಪ್ಟಂಬರ್–2020, ಜೂನ್–2024) (ಸುಲಭ)
   A) ಮೇಧಾ ಪಾಟ್ಕರ್ B) ಡಾ॥ ಶಿವರಾಮ ಕಾರಂತ C) ಸುಂದರ್ ಲಾಲ್ ಬಹುಗುಣ D) ಡಾ. ಬಿ ಆರ್ ಅಂಬೇಡ್ಕರ್
4. ಡಾ ಶಿವರಾಮ ಕಾರಂತರು ವಿರೋಧಿಸಿದ ಪರಿಸರ ಚಳುವಳಿ (ಸಾಧಾರಣ)
   A) ಮೌನ ಕಣಿವೆ ಆಂದೋಲನ B) ಕೈಗಾ ಅಣುಸ್ಥಾವರ ವಿರೋಧಿ ಚಳವಳಿ C) ಚಿಪ್ಕೋ ಚಳವಳಿ D) ಅಪ್ಪಿಕೋ ಚಳವಳಿ
5. ಕರ್ನಾಟಕ ರಾಜ್ಯ ರೈತ ಸಂಘದ ಸ್ಥಾಪಕರು. (ಸುಲಭ)
   A) ಪ್ರೊ. ಎಂ. ಡಿ. ನಂಜುಂಡಸ್ವಾಮಿ B) ಡಾ॥ ಶಿವರಾಮ ಕಾರಂತ C) ಡಿ. ದೇವರಾಜ ಅರಸು D) ಬಾಬಾ ಅಮ್ಟೆ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

6. ಸಾಮೂಹಿಕ ವರ್ತನೆ ಎಂದರೇನು? (ಸುಲಭ)
7. ಜನಮಂದೆ ಎಂದರೇನು? (ಜೂನ್–2022) (ಸುಲಭ)
8. ದೊಂಬಿ ಎಂದರೇನು? (ಸಾಧಾರಣ)
9. ಕಾರ್ಮಿಕ ಚಳುವಳಿ ಎಂದರೇನು? (ಸಾಧಾರಣ)
10. ಅಪ್ಪಿಕೋ ಚಳವಳಿಯ ನೇತೃತ್ವ ವಹಿಸಿದ್ದವರು ಯಾರು? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

11. ದೊಂಬಿಗೆ ಕಾರಣಗಳಾವುವು? (ಸಾಧಾರಣ)
12. ದೊಂಬಿಗಳನ್ನು ಹೇಗೆ ನಿಯಂತ್ರಿಸಬಹುದು? (ಏಪ್ರಿಲ್–2024, ರಾ ಪೂ–2022) (ಸಾಧಾರಣ)
13. ಚಿಪ್ಕೋ ಚಳವಳಿಯನ್ನು ಕುರಿತು ಬರೆಯಿರಿ. (ಸುಲಭ)
14. ಕರ್ನಾಟಕದ ಅಪ್ಪಿಕೋ ಚಳವಳಿಯನ್ನು ಕುರಿತು ವಿವರಿಸಿ. (ಸುಲಭ)
15. ಪರಿಸರ ಚಳವಳಿಗಳಲ್ಲಿ ನರ್ಮದಾ ಬಚಾವೋ ಆಂದೋಲನ ವಿಭಿನ್ನವಾಗಿದೆ. ಚರ್ಚಿಸಿ. (ಕಠಿಣ)
16. ಮೌನ ಕಣಿವೆ ಆಂದೋಲನವನ್ನು ಕುರಿತು ವಿವರಿಸಿ. (ಸಾಧಾರಣ)
17. ಕೈಗಾ ಅಣುಸ್ಥಾವರ ವಿರೋಧಿ ಚಳವಳಿ ಕುರಿತು ವಿವರಿಸಿ. (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

18. ಜನಮಂದೆಯ ಸ್ವರೂಪವನ್ನು ತಿಳಿಸಿ. (ಸಾಧಾರಣ)
19. ದೊಂಬಿಯ ಸ್ವರೂಪವನ್ನು / ಲಕ್ಷಣಗಳನ್ನು ತಿಳಿಸಿ. / ಅನಿಯಂತ್ರಿತ ದೊಂಬಿಗಳು ವಿನಾಶಕ್ಕೆ ಕಾರಣವಾಗಬಹುದು. ಹೇಗೆ? (ಏಪ್ರಿಲ್–2023, ಜೂನ್–2025) (ಸಾಧಾರಣ)
20. ಭಾರತದಲ್ಲಿ ಕೈಗೊಂಡ ಪ್ರಮುಖ ಪರಿಸರ ಚಳವಳಿಗಳನ್ನು ಪಟ್ಟಿ ಮಾಡಿ. (ಸೆಪ್ಟಂಬರ್–22) (ಸಾಧಾರಣ)

ಸಮಾಜಶಾಸ್ತ್ರ, ಅಧ್ಯಾಯ– 24

ಸಾಮಾಜಿಕ ಸವಾಲುಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಮಕ್ಕಳ ಸಹಾಯವಾಣಿ ಸಂಖ್ಯೆ (ಸೆಪ್ಟಂಬರ್–2020, ಏಪ್ರಿಲ್–2024,) (ಸಾಧಾರಣ)
   A) 1081 B) 1098 C) 1033 D) 1086

2. ಸಂವಿಧಾನದ 24 ನೇ ವಿಧಿ ಪ್ರಕಾರ (ಜೂನ್–2025) (ಕಠಿಣ)
   A) ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ. B) ಅಸ್ಪೃಶ್ಯತೆ ಆಚರಣೆ ಶಿಕ್ಷಾರ್ಹ ಅಪರಾಧ
   C) ವರದಕ್ಷಿಣೆ ಶಿಕ್ಷಾರ್ಹ ಅಪರಾಧ D) 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು.

3. ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಗೆ ಬಂದಿದ್ದು. (ಕಠಿಣ)
   A) 1960 B) 1984 C) 1961 D) 1985

4. ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯಿದೆ ಜಾರಿಗೆ ಬಂದ ವರ್ಷ. (ಕಠಿಣ)
   A) 1994 B) 1985 C) 2006 D) 2019

5. 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ಕಲ್ಪಿಸಿದ ಕಾಯ್ದೆ (ಆಗಸ್ಟ್–2024) (ಸಾಧಾರಣ)
   A) ಶಿಕ್ಷಣ ಹಕ್ಕು ಕಾಯ್ದೆ–2009 B) ಬಾಲ ಕಾರ್ಮಿಕ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿ–1987
   C) ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012 D) ಬಾಲಶ್ರಮ ನಿರ್ಮೂಲನೆ ಮತ್ತು ಪುನರ್ವಸತೀಕರಣ ಕಾಯ್ದೆ–2006

6. ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಲಾದ ವರ್ಷ(ಏಪ್ರಿಲ್–2023) (ಸಾಧಾರಣ)
   A) 1988 B) 1994 C) 1986 D) 2006

7. ಕರ್ನಾಟಕದಲ್ಲಿ ಸರ್ವ ಶಿಕ್ಷಣ ಅಭಿಯಾನದ ಮೂಲಕ ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆದು ದಾಖಲಿಸಿಕೊಂಡ ಕಾರ್ಯಕ್ರಮ, (ಜೂನ್–2023) (ಕಠಿಣ)
   A) ಬಾ ಮರಳಿ ಶಾಲೆಗೆ B) ಕೂಲಿಯಿಂದ ಶಾಲೆಗೆ C) ಕಲಿ–ನಲಿ D) ನಲಿ–ಕಲಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

8. ಬಾಲಕಾರ್ಮಿಕತನ ಎಂದರೇನು? (ಸುಲಭ)
9. ಬಾಲ್ಯ ವಿವಾಹ ಎಂದರೇನು? (ಸುಲಭ)
10. ಹೆಣ್ಣು ಭ್ರೂಣ ಹತ್ಯೆ ಎಂದರೇನು? (ಜೂನ್–2020, ಜೂನ್–2021, ಜೂನ್–2023,ಏಪ್ರಿಲ್–2025) (ಸುಲಭ)
11. ಹೆಣ್ಣು ಶಿಶು ಹತ್ಯೆ ಎಂದರೇನು? (ಸುಲಭ)
12. ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ(1994)ಯನ್ನು ಏಕೆ ಜಾರಿಗೆ ತರಲಾಗಿದೆ? (ಕಠಿಣ)
13. ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು? (ಸಾಧಾರಣ)
14. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಯಲು ಜಾರಿಯಾದ ಕಾಯ್ದೆ ಯಾವುದು? (ಸಾಧಾರಣ)
15. ಪೋಕ್ಸೊ ಕಾಯ್ದೆಯನ್ನು ಯಾವಾಗ ಜಾರಿಗೆ ತರಲಾಯಿತು? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

16. ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು? (ಸುಲಭ)
17. ಬಾಲಕಾರ್ಮಿಕ ಸಮಸ್ಯೆಯ ದುಷ್ಪರಿಣಾಮಗಳೇನು? (ಏಪ್ರಿಲ್–2025) (ಸಾಧಾರಣ)
18. ಹೆಣ್ಣು ಭ್ರೂಣ ಹತ್ಯೆಗೆ ಕಾರಣಗಳಾವುವು? (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

19. ಬಾಲ ಕಾರ್ಮಿಕತನವನ್ನು ನಿರ್ಮೂಲನೆ ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳಾವುವು? (ಕಠಿಣ)
20. ಬಾಲ್ಯ ವಿವಾಹಕ್ಕೆ ಕಾರಣಗಳಾವುವು? (ಸಾಧಾರಣ)
21. ಬಾಲ್ಯ ವಿವಾಹದ ದುಷ್ಪರಿಣಾಮಗಳಾವುವು? (ಜೂನ್–2025) (ಸಾಧಾರಣ)
22. ಬಾಲ್ಯವಿವಾಹವನ್ನು ನಾವು ಹೇಗೆ ತಡೆಗಟ್ಟಬಹುದು? (ಏಪ್ರಿಲ್–2025) (ಕಠಿಣ)
23. ಬಾಲ್ಯವಿವಾಹವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? (ಕಠಿಣ)
24. ವರದಕ್ಷಿಣೆ ದುಷ್ಪರಿಣಾಮಗಳಾವುವು? (ಸಾಧಾರಣ)
25. ವರದಕ್ಷಿಣೆ ಸಮಸ್ಯೆಗೆ ಪರಿಹಾರ ಕ್ರಮಗಳಾವುವು? ವರದಕ್ಷಿಣೆಯ ಪಿಡುಗನ್ನು ಹೇಗೆ ನಿವಾರಿಸಬಹುದು? (ಆಗಸ್ಟ್–2024) (ಸಾಧಾರಣ)

ಭೂಗೋಳಶಾಸ್ತ್ರ, ಅಧ್ಯಾಯ– 10

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಪೂರ್ವ ಕರಾವಳಿ ಮೈದಾನವು (ರಾ.ಪೂ –2020) (ಸುಲಭ)

A) ಉದ್ದವಾಗಿದೆ B) ಅಗಲವಾಗಿದೆ C) ಕಡಿದಾಗಿದೆ D) ಕಿರಿದಾಗಿದೆ.

2. ಲಡಾಖ್ ಪ್ರಸ್ಥಭೂಮಿಯು ಕಂಡು ಬರುವುದು (ರಾ. ಪೂ –2023) (ಸುಲಭ)

A) ಮಧ್ಯ ಹಿಮಾಲಯದಲ್ಲಿ B) ಮಹಾ ಹಿಮಾಲಯದಲ್ಲಿ C) ಶಿವಾಲಿಕ್ ಬೆಟ್ಟಗಳಲ್ಲಿ D) ಪರ್ಯಾಯ ಪ್ರಸ್ಥಭೂಮಿಯಲ್ಲಿ

3. ಭಾರತದ ಅತ್ಯುನ್ನತ ಪರ್ವತ ಶಿಖರ (ಜೂನ್–2019) (ಸುಲಭ)

A) ಗಾಡ್ವಿನ್ ಆಸ್ಟಿನ್ / ಕೆ2 B) ಮೌಂಟ್ ಎವರೆಸ್ಟ್ C) ಅನೈಮುಡಿ D) ಗುರುಶಿಖರ

4. ಭಾರತದ ಭೌಗೋಳಿಕ ವಿಭಾಗಗಳಲ್ಲಿ ಅತ್ಯಂತ ದೊಡ್ಡದಾಗಿರುವುದು (ಸುಲಭ)

A) ಉತ್ತರದ ಮಹಾ ಮೈದಾನ B) ಹಿಮಾಲಯ ಪರ್ವತಗಳು C) ಕರಾವಳಿ ಮೈದಾನ ಮತ್ತು ದ್ವೀಪಗಳು D) ಪರ್ಯಾಯ ಪ್ರಸ್ಥಭೂಮಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

5. ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ? (ಮಾರ್ಚ್/ಏಪ್ರಿಲ್– 2022) (ಸಾಧಾರಣ)
6. ಉತ್ತರ ಭಾರತದ ಮೈದಾನವನ್ನು ಸಂಚಯನ ಮೈದಾನವೆಂದು ಏಕೆ ಕರೆಯುತ್ತಾರೆ? (ಮಾದರಿ– 2022–23) (ಕಠಿಣ)
7. ಹಿಮಾಚಲ/ ಮಧ್ಯ ಹಿಮಾಲಯದ ಗಿರಿಧಾಮಗಳನ್ನು ಹೆಸರಿಸಿ. (ರಾ.ಪೂ –2022) (ಸಾಧಾರಣ)
8. ಡೂನ್ ಗಳೆಂದರೇನು? (ಸಾಧಾರಣ)
9. ಭೂ ಇತಿಹಾಸದ ಪ್ರಕಾರ ಭಾರತದ ಅತೀ ಪುರಾತನ ಭೂಭಾಗ ಯಾವುದು? (ಸಾಧಾರಣ)
10. ಮಹಾ ಹಿಮಾಲಯವನ್ನು ಹಿಮಾದ್ರಿ ಎಂದು ಕರೆಯುತ್ತಾರೆ. ಯಾಕೆ? (ಸಾಧಾರಣ)
11. ದಕ್ಷಿಣ ಭಾರತದಲ್ಲಿಯೇ ಅತ್ಯುನ್ನತ ಶಿಖರ ಯಾವುದು? (ಸಾಧಾರಣ)
12. ಭಾರತದ ದಕ್ಷಿಣ ತುದಿಯನ್ನು ಯಾವ ಹೆಸರಿನಿಂದ ಕರೆಯುತ್ತಾರೆ? (ಸಾಧಾರಣ)
13. ಭಾರತದ ಆದರ್ಶ ಕಾಲಮಾನವು ಯಾವ ರೇಖಾಂಶವನ್ನು ಆಧರಿಸಿದೆ? (ಸಾಧಾರಣ)
14. ಪಶ್ಚಿಮ ಘಟ್ಟಗಳನ್ನು ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಯಾವ ಹೆಸರಿನಿಂದ ಕರೆಯುವರು? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

15. ಭಾರತದ ಪ್ರಾಕೃತಿಕ ವಿಭಾಗಗಳಾವುವು? (ಸಾಧಾರಣ)

16. ಪರ್ಯಾಯ ಪ್ರಸ್ಥಭೂಮಿಯು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೇಗೆ? (ಮಾದರಿ–2021–22) (ಕಠಿಣ)

17. ಪೂರ್ವ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳಾವುವು? (ಸಾಧಾರಣ)

18. ಹಿಮಾಲಯ ಪರ್ವತಗಳು ಭಾರತೀಯರಿಗೆ ಅತ್ಯಂತ ಉಪಯುಕ್ತವಾಗಿವೆ ಹೇಗೆ? / ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ. ಸಮರ್ಥಿಸಿ. (ಕಠಿಣ) (ರಾ.ಪೂ– 2020, ಜೂನ್ –2023)

IV. 19. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿ. (ಸಾಧಾರಣ)

A) ಇಂದಿರಾ ಕೋಲ್. (ರಾ.ಪೂ –2020,ಜೂನ್– 2025)

B) ನೀಲಗಿರಿ ಬೆಟ್ಟ (ಮಾದರಿ–1–2021–22)

D) 82^0 30^1 ಪೂರ್ವ ರೇಖಾಂಶ (ಜೂನ್–2022, ಏಪ್ರಿಲ್– 2023, ಮಾರ್ಚ್/ಏಪ್ರಿಲ್–2025, ಜೂನ್ –2025)

E) ಕರ್ಕಾಟಕ ಸಂಕ್ರಾಂತಿ ವೃತ್ತ. 23^0 30^1 ಉತ್ತರ ಅಕ್ಷಾಂಶ (ಏಪ್ರಿಲ್– 2022, ಜೂನ್–2024, ಆಗಸ್ಟ್ –2024)

F) ಇಂದಿರಾ ಪಾಯಿಂಟ್

G) ಪಾಕ್ ಜಲಸಂಧಿ

20. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ. (ಸಾಧಾರಣ)

A) ವಿಂಧ್ಯ ಪರ್ವತ ಶ್ರೇಣಿ. (ರಾ.ಪೂ –2020) B) ಅರಾವಳಿ ಪರ್ವತಗಳು.

C) ಕೊಂಕಣ ತೀರ. (ಮಾರ್ಚ್/ಏಪ್ರಿಲ್ – 2024) D) ಕೋರಮಂಡಲ ತೀರ.(ರಾ.ಪೂ –2025)

E) ಕೆ2 / ಗಾಡ್ವಿನ್ ಆಸ್ಟಿನ್. F) ಮಲಬಾರ್ ತೀರ. (ಮಾದರಿ 2–2021–22)

G) ಉತ್ಕಲ ತೀರ

ಭೂಗೋಳಶಾಸ್ತ್ರ, ಅಧ್ಯಾಯ– 11

ಭಾರತದ ಋತುಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಪಶ್ಚಿಮ ಘಟ್ಟಗಳ ಪೂರ್ವ ಭಾಗವು ಪಶ್ಚಿಮ ಭಾಗದಷ್ಟು ಮಳೆ ಪಡೆಯುವುದಿಲ್ಲ. ಏಕೆಂದರೆ
   A) ಅವು ದಕ್ಷಿಣ ಭಾಗದಲ್ಲಿದೆ B) ಮಳೆ ನೆರಳಿನ ಪ್ರದೇಶದಲ್ಲಿವೆ C) ಹೆಚ್ಚು ಹಿಮಪಾತವಾಗುತ್ತದೆ D) ಅಲ್ಲಿ ಹೆಚ್ಚು ದಟ್ಟ ಅರಣ್ಯವಿದೆ
2. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಆವರ್ತ ಮಾರುತಗಳು ಬಂಗಾಳ ಕೊಲ್ಲಿಯಲ್ಲಿ ನಿರ್ಮಿತಗೊಳ್ಳಲು ಕಾರಣ
   A) ಭೂಮಿ ಮತ್ತು ಸಾಗರಗಳ ನಡುವಿನ ಉಷ್ಣಾಂಶ ಮತ್ತು ಒತ್ತಡಗಳಲ್ಲಿನ ವ್ಯತ್ಯಾಸ
   B) ಉತ್ತರಾರ್ಧಗೋಳದ ಮೇಲೆ ಸೂರ್ಯನ ಲಂಬ ಕಿರಣಗಳು ಬಿದ್ದು ಉಷ್ಣಾಂಶ ಹೆಚ್ಚಾಗುತ್ತದೆ
   C) ಈ ಪ್ರದೇಶಗಳು ಸಮುದ್ರಮಟ್ಟದಿಂದ ಅತಿ ಎತ್ತರದಲ್ಲಿರುವುದರಿಂದ
   D) ಉತ್ತರ ಭಾರತವು ಸಮುದ್ರದಿಂದ ಬಹು ದೂರದಲ್ಲಿರುವುದರಿಂದ
3. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್, ಮೇ ತಿಂಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಉಂಟಾಗುವ ಮಳೆ,
   A) ಆಂಡೀಸ್ B) ಕಾಲ ಬೈಸಾಕಿ C) ಕಾಫಿ ತುಂತುರು D) ಮಾವಿನ ಹೂಯ್ಲು
4. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್, ಮೇ ತಿಂಗಳಲ್ಲಿ ಉತ್ತರ ಪ್ರದೇಶದಲ್ಲಿ ಉಂಟಾಗುವ ಮಳೆ,
   A) ಆಂಡೀಸ್ B) ಕಾಲ ಬೈಸಾಕಿ C) ಕಾಫಿ ತುಂತುರು D) ಮಾವಿನ ಹೂಯ್ಲು
5. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್, ಮೇ ತಿಂಗಳಲ್ಲಿ ಕೇರಳದಲ್ಲಿ ಉಂಟಾಗುವ ಮಳೆ,
   A) ಆಂಡೀಸ್ B) ಕಾಲ ಬೈಸಾಕಿ C) ಕಾಫಿ ತುಂತುರು D) ಮಾವಿನ ಹೂಯ್ಲು
6. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್, ಮೇ ತಿಂಗಳಲ್ಲಿ ಕರ್ನಾಟಕದಲ್ಲಿ ಉಂಟಾಗುವ ಮಳೆ,
   A) ಆಂಡೀಸ್ B) ಕಾಲ ಬೈಸಾಕಿ C) ಕಾಫಿ ತುಂತುರು D) ಮಾವಿನ ಹೂಯ್ಲು

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

7. ಬೇಸಿಗೆಯಲ್ಲಿ ಉತ್ತರ ಭಾರತದಲ್ಲಿ ಉಷ್ಣಾಂಶ ಅಧಿಕವಾಗಿರಲು ಕಾರಣವೇನು? (ಸಾಧಾರಣ)
8. ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಪರಿಸರಣ ಮಳೆಯಾಗಲು ಕಾರಣವೇನು? (ಏಪ್ರಿಲ್–2023) (ಸಾಧಾರಣ)
9. ಬೇಸಿಗೆಯಲ್ಲಿ ಭಾರತದಲ್ಲಿ ತಂಪಾಗಿರುವ ಪ್ರದೇಶಗಳಶವುವು? (ಸಾಧಾರಣ)
10. ನೈಋತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳಾವುವು? (ಜೂನ್–2015) (ಸುಲಭ)
11. ನೈಋತ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ಮಳೆ ಪಡೆಯದ ರಾಜ್ಯ ಯಾವುದು? (ಸಾಧಾರಣ)
12. ಭಾರತದಲ್ಲಿ ಅತ್ಯಂತ ಕಡಿಮೆ ಮಳೆ ಪಡೆಯುವ ಅವಧಿ ಯಾವುದು? (ಸಾಧಾರಣ)
13. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗವು ಹೆಚ್ಚು ಮಳೆಯನ್ನು ಪಡೆಯುತ್ತದೆ ಏಕೆ ? (ಸಾಧಾರಣ)
14. ಭಾರತದಲ್ಲಿ ಅತೀ ಹೆಚ್ಚು ಉಷ್ಣಾಂಶ ದಾಖಲಾಗಿರುವ ಸ್ಥಳ ಯಾವುದು? (ಸಾಧಾರಣ)
15. ಭಾರತದಲ್ಲಿ / ಪ್ರಪಂಚದಲ್ಲಿಯೇ ಅತೀ ಹೆಚ್ಚು ಮಳೆ ಪಡೆಯುವ ಪ್ರದೇಶ ಯಾವುದು? (ಸಾಧಾರಣ)
16. ಭಾರತದಲ್ಲಿ ಅತೀ ಕಡಿಮೆ ಮಳೆ ಪಡೆಯುವ ಪ್ರದೇಶ ಯಾವುದು? (ಜೂನ್–2023) (ಸಾಧಾರಣ)
17. ನಿರ್ಗಮನ ಮಾನ್ಸೂನ್ ಮಾರುತಗಳ ಕಾಲದಲ್ಲಿ ಅರಬ್ಬೀ ಸಮುದ್ರ ಮತ್ತು ಬಂಗಾಳ ಕೊಲ್ಲಿಯಲ್ಲಿ ಆವರ್ತ ಮಾರುತಗಳು ಉಂಟಾಗಲು ಕಾರಣವೇನು? (ಸಾಧಾರಣ)
18. ಬೇಸಿಗೆಯಲ್ಲಿ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಉಷ್ಣಾಂಶ ಕಡಿಮೆ ಇರಲು ಕಾರಣವೇನು ? (ಏಪ್ರಿಲ್–2016) (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

19. ಭಾರತದ ವಾರ್ಷಿಕ ವಾಯುಗುಣದ ನಾಲ್ಕು ಋತುಮಾನಗಳು ಯಾವುವು? (ಏಪ್ರಿಲ್–2022) (ಸಾಧಾರಣ)
20. ಭಾರತದ ವಾಯುಗುಣದ ಮೇಲೆ ಹೆಚ್ಚು ಪ್ರಭಾವ ಬೀರುವ ಅಂಶಗಳು ಯಾವುವು? (ಜೂನ್–2018) (ಕಠಿಣ)
21. ಅಕ್ಟೋಬರ್ ತಿಂಗಳ ಆರಂಭದಲ್ಲಿ ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗಲು ಕಾರಣಗಳೇನು? (ಕಠಿಣ)
22. ಭಾರತದಲ್ಲಿ ಅಧಿಕ ಮಳೆ ಬೀಳುವ ಪ್ರದೇಶಗಳು ಯಾವುವು? (ಸಾಧಾರಣ)
23. "ಭಾರತದ ವ್ಯವಸಾಯವು ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ." ಈ ಹೇಳಿಕೆಯನ್ನು ಸಮರ್ಥಿಸಿ. (ಏಪ್ರಿಲ್–2015, 2017, 2018, ಜೂನ್–2017) (ಸಾಧಾರಣ)

ಭೂಗೋಳಶಾಸ್ತ್ರ, ಅಧ್ಯಾಯ– 12

ಭಾರತದ ಮಣ್ಣುಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿರುವ ಮಣ್ಣು (ಪ1–2024) (ಸುಲಭ)
   A) ಕಪ್ಪು ಮಣ್ಣು B) ಕೆಂಪು ಮಣ್ಣು C) ಮೆಕ್ಕಲು ಮಣ್ಣು D) ಮರುಭೂಮಿ ಮಣ್ಣು
2. ಭಾರತದಲ್ಲಿ ಅತಿ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವ ಮಣ್ಣು (ಸುಲಭ)
   A) ಪರ್ವತ ಮಣ್ಣು B) ಕಪ್ಪು ಮಣ್ಣು C) ಮೆಕ್ಕಲು ಮಣ್ಣು D) ಕೆಂಪು ಮಣ್ಣು
3. ರೆಗೂರ್ ಮಣ್ಣು ಎಂದು ಕರೆಯಲ್ಪಡುವ ಮಣ್ಣು (ಏ–2018) (ಸಾಧಾರಣ)
   A) ಕಪ್ಪು ಮಣ್ಣು B) ಮರುಭೂಮಿ ಮಣ್ಣು C) ಜಂಬಿಟ್ಟಿಗೆ ಮಣ್ಣು D) ಮೆಕ್ಕಲು ಮಣ್ಣು
4. ಒಣ ಬೇಸಾಯಕ್ಕೆ ಸೂಕ್ತವಾದ ಮಣ್ಣು (ಸುಲಭ)
   A) ಕೆಂಪು ಮಣ್ಣು B) ಕಪ್ಪು ಮಣ್ಣು C) ಮೆಕ್ಕಲು ಮಣ್ಣು D) ಮರುಭೂಮಿ ಮಣ್ಣು
5. ರಾಗಿ, ಹೊಗೆಸೊಪ್ಪು, ಎಣ್ಣೆಕಾಳುಗಳು ಬೆಳೆಯಲು ಸೂಕ್ತವಾದ ಮಣ್ಣು, (ಸುಲಭ)
   A) ಕೆಂಪು ಮಣ್ಣು B) ಪರ್ವತ ಮಣ್ಣು C) ಕಪ್ಪು ಮಣ್ಣು D) ಮೆಕ್ಕಲು ಮಣ್ಣು
6. ಸಾರಜನಕ ಮತ್ತು ಲವಣಗಳ ಕೊರತೆ ಈ ಮಣ್ಣಿನಲ್ಲಿ ಕಂಡುಬರುತ್ತದೆ(ಸಾಧಾರಣ)
   A) ಕಪ್ಪು ಮಣ್ಣು B) ಜಂಬಿಟ್ಟಿಗೆ ಮಣ್ಣು C) ಕೆಂಪು ಮಣ್ಣು D) ರೆಗೂರ್ ಮಣ್ಣು
7. ರಾಜಸ್ಥಾನದಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣು, (ಏ–2018) (ಸುಲಭ)
   A) ಮರುಭೂಮಿ ಮಣ್ಣು B) ಕೆಂಪು ಮಣ್ಣು C) ಕಪ್ಪು ಮಣ್ಣು D) ಪರ್ವತ ಮಣ್ಣು
8. ಕೊಳೆತ ಜೈವಿಕಾಂಶ ಹೆಚ್ಚಾಗಿ ಕಂಡು ಬರುವ ಮಣ್ಣು (ಸುಲಭ)
   A) ಪರ್ವತ ಮಣ್ಣು B) ಕೆಂಪು ಮಣ್ಣು C)ಕಪ್ಪು ಮಣ್ಣು D)ಜಂಬಿಟ್ಟಿಗೆ ಮಣ್ಣು
9. 200 ಸೆಂ.ಮೀ.ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಕಂಡು ಬರುವ ಮಣ್ಣು (ಸಾಧಾರಣ)
   A) ಕೆಂಪು ಮಣ್ಣು B) ಕಪ್ಪು ಮಣ್ಣು C) ಮರುಭೂಮಿ ಮಣ್ಣು D) ಜಂಬಿಟ್ಟಿಗೆ ಮಣ್ಣು
10. ಡೆಕ್ಕನ್ ಟ್ರಾಪ್ ಪ್ರದೇಶದಲ್ಲಿ ಕಂಡು ಬರುವ ಮಣ್ಣು (ಜೂ–2016) (ಸಾಧಾರಣ)
   A) ಕಪ್ಪು ಮಣ್ಣು B) ಜಂಬಿಟ್ಟಿಗೆ ಮಣ್ಣು C) ಕೆಂಪು ಮಣ್ಣು D) ಮರುಭೂಮಿ ಮಣ್ಣು

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

11. ಕಪ್ಪು ಮಣ್ಣನ್ನು 'ಕಪ್ಪು ಹತ್ತಿ ಮಣ್ಣು' ಎಂದು ಕರೆಯುತ್ತಾರೆ. ಏಕೆ? (ಏ–2019)
12. ಕಪ್ಪು ಮಣ್ಣು ಹೆಚ್ಚು ದಿನ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಏಕೆ? (ಜು–2021)
13. ಮರುಭೂಮಿ ಮಣ್ಣಿನಲ್ಲಿ ನೀರು ನಿಲ್ಲದೆ ತೀವ್ರವಾಗಿ ಬಸಿದುಹೋಗುತ್ತದೆ ಮತ್ತು ಬೇಗ ಆರ್ದ್ರತೆ ಕಡಿಮೆಯಾಗುತ್ತದೆ. ಏಕೆ? (ಸಾಧಾರಣ)
14. ಮರುಭೂಮಿ ಮಣ್ಣು ಕೃಷಿಗೆ ಯೋಗ್ಯವಲ್ಲ, ಏಕೆ? (ಸಾಧಾರಣ)
15. ಭಾರತದ ಪಶ್ಚಿಮ ಘಟ್ಟಗಳಲ್ಲಿ ಲ್ಯಾಟರೈಟ್ ಮಣ್ಣು ಹೆಚ್ಚಾಗಿ ಕಂಡು ಬರುತ್ತದೆ. ಏಕೆ? (ಸಾಧಾರಣ)
16. ಮಣ್ಣಿನ ಸವೆತ ಎಂದರೇನು? (ಸಾಧಾರಣ)
17. ಮಣ್ಣಿನ ಸಂರಕ್ಷಣೆ ಎಂದರೇನು? (ಸಾಧಾರಣ)
18. ಇತ್ತೀಚೆಗೆ ನಮ್ಮ ಜಲಾಶಯಗಳ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಏಕೆ? (ಜೂ–2016) (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

19. ಮಣ್ಣಿನ ಸವೆತದ ಮುಖ್ಯ ಕರ್ತೃಗಳಾವುವು? (ಸಾಧಾರಣ)
20. ಮಣ್ಣಿನ ಸವೆತಕ್ಕೆ ಕಾರಣಗಳೇನು? (ಜೂ–2015, ಜೂ–2018, ಜೂ–2022, ಜೂ–2020, ಏ–2022, ಪ 2–2024) (ಸಾಧಾರಣ)
21. ಪರ್ವತ ಮಣ್ಣಿನ ಲಕ್ಷಣಗಳನ್ನು ತಿಳಿಸಿ. (ಸಾಧಾರಣ)
22. ಕೆಂಪು ಮಣ್ಣನ್ನು ಕುರಿತು ಬರೆಯಿರಿ. / ಕೆಂಪು ಮಣ್ಣಿನ ಲಕ್ಷಣಗಳನ್ನು ತಿಳಿಸಿ. (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

23. ಮಣ್ಣಿನ ಸವೆತವು ಹಲವು ದುಷ್ಪರಿಣಾಮಗಳನ್ನು ಉಂಟು ಮಾಡುತ್ತದೆ. ಹೇಗೆ? / ಸಮರ್ಥಿಸಿ. (ಏ–2017, ಜೂ–2017, ಮಾ–2020, ಏ–2023, ಪ3–2024) (ಸಾಧಾರಣ)
24. ಕಪ್ಪುಮಣ್ಣು, ಜಂಬಟ್ಟಿಗೆ ಮಣ್ಣಿಗಿಂತ ಹೇಗೆ ಭಿನ್ನವಾಗಿದೆ? (ಕಠಿಣ)
25. ಭಾರತದಲ್ಲಿ ಕಂಡುಬರುವ ಪ್ರಮುಖ ಮಣ್ಣಿನ ವಿಧಗಳಾವುವು? (ಸಾಧಾರಣ)
26. ಮರುಭೂಮಿ ಮಣ್ಣು, ಮೆಕ್ಕಲು ಮಣ್ಣಿಗಿಂತ ಹೇಗೆ ಭಿನ್ನವಾಗಿದೆ? (ಸಾಧಾರಣ)

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ

27. ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟಬಹುದು? (ಏ–2015, ಏ–2016, ಮಾ–2021, ಜೂ–2023, ಪ 1–2025) (ಸಾಧಾರಣ)

ಭೂಗೋಳಶಾಸ್ತ್ರ, ಅಧ್ಯಾಯ- 13

ಭಾರತದ ಅರಣ್ಯ ಸಂಪತ್ತು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಸುಂದರಬನ್ ಅರಣ್ಯವು ಇಲ್ಲಿ ಕಂಡು ಬರುತ್ತದೆ (ಏ–2019, ಏ–2022) (ಸುಲಭ)
A) ನರ್ಮದಾ ನದಿ ಮುಖಜ ಭೂಮಿ B) ಗಂಗಾ ನದಿ ಮುಖಜಭೂಮಿ
C) ಸಿಂಧೂ ನದಿ ಮುಖಜಭೂಮಿ D) ಗೋದಾವರಿ ನದಿ ಮುಖಜಭೂಮಿ

2. ಭಾರತದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿರುವ ಅರಣ್ಯ ಇದಾಗಿದೆ, (ಸುಲಭ)
A) ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು B) ನಿತ್ಯ ಹರಿದ್ವರ್ಣದ ಅರಣ್ಯಗಳು
C) ಮ್ಯಾಂಗ್ರೋವ್ ಅರಣ್ಯಗಳು D) ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು

3. ಹಿಮಾಲಯ ಪರ್ವತಗಳಲ್ಲಿ ವಿವಿಧ ಬಗೆಯ ಅರಣ್ಯಗಳು ಕಂಡು ಬರುತ್ತವೆ. ಏಕೆಂದರೆ, (ಸುಲಭ)
A) ಮಣ್ಣಿನ ಸ್ವರೂಪ B) ಹೆಚ್ಚಿನ ಮಳೆ
C) ಹೆಚ್ಚು ಉಷ್ಣಾಂಶ ಮತ್ತು ತೇವಾಂಶ D) ಹೆಚ್ಚಿನ ಎತ್ತರ ಹಾಗೂ ವೈವಿಧ್ಯಮಯ ವಾಯುಗುಣ

4. ಸಸ್ಯವರ್ಗಗಳು ಆಳವಾದ ಬೇರುಗಳನ್ನು ಹೊಂದಿದ್ದು ಕುರುಚಲು ಜಾತಿಗೆ ಸೇರಿರುವ ಅರಣ್ಯಗಳು ಇದಾಗಿದೆ.(ಸಾಧಾರಣ)
A) ಮರುಭೂಮಿ ಅರಣ್ಯಗಳು B) ಮ್ಯಾಂಗ್ರೋವ್ ಅರಣ್ಯಗಳು C)ನಿತ್ಯ ಹರಿದ್ವರ್ಣದ ಅರಣ್ಯಗಳು D) ಅಲ್ಫೈನ್ ಅರಣ್ಯಗಳು

5. ಭಾರತದಲ್ಲಿ ಅತಿ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ರಾಜ್ಯ (ಏ–2019) (ಸುಲಭ)
A) ಹರಿಯಾಣ B) ಕರ್ನಾಟಕ C) ಮಹಾರಾಷ್ಟ್ರ D) ಮಧ್ಯಪ್ರದೇಶ

6. ಭಾರತದಲ್ಲಿ ಅತಿ ಕಡಿಮೆ ಅರಣ್ಯ ಪ್ರದೇಶ ಹೊಂದಿರುವ ರಾಜ್ಯ (ಸುಲಭ)
B) ಹರಿಯಾಣ C) ಬಿಹಾರ D) ಕೇರಳ D) ಮಧ್ಯಪ್ರದೇಶ

7. ನದಿಮುಖಜ ಭೂಮಿಗಳು ಮತ್ತು ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಕಂಡು ಬರುವ ಅರಣ್ಯಗಳ ವಿಧ (ಸುಲಭ)
A) ಮರುಭೂಮಿ ಅರಣ್ಯಗಳು B) ಆಲ್ಫೈನ್ ಅರಣ್ಯಗಳು
C) ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು D) ಮ್ಯಾಂಗ್ರೋವ್ ಅರಣ್ಯಗಳು

8. ಭಾರತದ ಪ್ರಥಮ ಜೀವಿಗೋಳ ಮೀಸಲು ಪ್ರದೇಶ (ಸುಲಭ)
A) ಸುಂದರಬನ್ B) ಮಾನಸ್ C) ನೀಲಗಿರಿ D) ನಂದಾದೇವಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

9. ಗಂಗಾ ನದಿ ಮುಖಜ ಭೂಮಿಯಲ್ಲಿರುವ ಮ್ಯಾಂಗ್ರೋವ್ ಅರಣ್ಯಗಳನ್ನು ಸುಂದರಬನ್ ಎಂದು ಏಕೆ ಕರೆಯುತ್ತಾರೆ? (2023) (ಸಾ)
10. ಸ್ವಾಭಾವಿಕ ಸಸ್ಯವರ್ಗ ಅಥವಾ ಅರಣ್ಯಗಳು ಎಂದರೇನು? (ಸಾಧಾರಣ)
11. ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳಿಗೆ ಈ ಹೆಸರು ಬರಲು ಕಾರಣವೇನು? (ಜೂನ್–2020, ಜೂನ್–2022) (ಸಾಧಾರಣ)
12. ಅರಣ್ಯ ಸಂರಕ್ಷಣೆ ಎಂದರೇನು? (ಸಾಧಾರಣ)
13. ಭಾರತದಲ್ಲಿ ವನ್ಯ ಜೀವಿಧಾಮಗಳನ್ನು ಏಕೆ ನಿರ್ಮಿಸಲಾಗಿದೆ? (ಕಠಿಣ)
14. ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಯಾವುದು? (ಸುಲಭ)
15. ಭಾರತದಲ್ಲಿ ಜೀವಿಗೋಳ ಮೀಸಲು ಪ್ರದೇಶಗಳನ್ನು ಏಕೆ ಸಂರಕ್ಷಿಸಲಾಗುತ್ತಿದೆ? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

16. ಹಿಮಾಲಯದ ಅಲ್ಫೈನ್ ಅರಣ್ಯಗಳಲ್ಲಿ ಕಂಡು ಬರುವ ಮರಗಳಾವುವು? (ಏ–2018) (ಸಾಧಾರಣ)
17. ಭಾರತದಲ್ಲಿ ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳ ಲಕ್ಷಣಗಳನ್ನು ತಿಳಿಸಿ. (ಏ–2017) (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

18. ನಿತ್ಯ ಹರಿದ್ವರ್ಣದ ಅರಣ್ಯಗಳು, ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳಿಗಿಂತ ಹೇಗೆ ಭಿನ್ನವಾಗಿವೆ? (ಏ–2016) (ಕಠಿಣ)
19. ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಪ್ರದೇಶಗಳು ಕಡಿಮೆಯಾಗುತ್ತಿವೆ. ಏಕೆ?/ ಅರಣ್ಯನಾಶಕ್ಕೆ ಕಾರಣಗಳೇನು? ಅರಣ್ಯ ಸಂರಕ್ಷಣೆ ಅತ್ಯಂತ ಮುಖ್ಯವಾಗಿದೆ. ಏಕೆ? (ಸೆ–2020) (ಕಠಿಣ)
20. ಭಾರತದಲ್ಲಿ ಕಂಡು ಬರುವ ಅರಣ್ಯಗಳ ಪ್ರಕಾರಗಳು ಯಾವುವು? (ಜೂನ್–2016) (ಸಾಧಾರಣ)
21. ಭಾರತದ ಪ್ರಮುಖ ವನ್ಯಜೀವಿ ಧಾಮಗಳನ್ನು ಪಟ್ಟಿ ಮಾಡಿ. (ಸಾಧಾರಣ)
22. ಭಾರತದ ಪ್ರಮುಖ ರಾಷ್ಟ್ರೀಯ ಉದ್ಯಾನವನಗಳನ್ನು ಪಟ್ಟಿ ಮಾಡಿ. (ಸಾಧಾರಣ)

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

23. ಅರಣ್ಯಗಳು ಮಾನವ ಮತ್ತು ಪರಿಸರಕ್ಕೆ ಬಹಳಷ್ಟು ಉಪಯುಕ್ತ ಸಂಪನ್ಮೂಲವಾಗಿವೆ. ಸಮರ್ಥಿಸಿ./ ಅರಣ್ಯಗಳ ಮಹತ್ವ/ ಉಪಯೋಗಗಳನ್ನು ತಿಳಿಸಿ. (ಪ 1–2025) (ಕಠಿಣ)
24. ಅರಣ್ಯಗಳನ್ನು ನಾವು ಹೇಗೆ ಸಂರಕ್ಷಿಸಬಹುದು. / ಅರಣ್ಯಗಳ ಸಂರಕ್ಷಣಾ ವಿಧಾನಗಳಾವುವು? (ಜೂ–2015, ಜೂ–2017, ಮಾ–2019, ಮಾ–2020, ಜೂ–2023, ಪ 2–2024, ಪ 3–2024) (ಸಾಧಾರಣ)

ಭೂಗೋಳಶಾಸ್ತ್ರ, ಅಧ್ಯಾಯ- 14

ಭಾರತದ ಜಲಸಂಪನ್ಮೂಲಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1) ಪ್ರಪಂಚದಲ್ಲಿ ಅತಿ ಹೆಚ್ಚು ನೀರಾವರಿ ಕ್ಷೇತ್ರವನ್ನು ಹೊಂದಿದ ದೇಶ (ಸುಲಭ)

A) ರಷ್ಯಾ B) ಚೀನಾ C) ಭಾರತ D) ಅಮೇರಿಕಾ

2) ಭಾರತದಲ್ಲಿ ಅತಿ ಹೆಚ್ಚು ಕೆರೆ ನೀರಾವರಿಯನ್ನು ಅನುಸರಿಸುವ ರಾಜ್ಯ (ಸುಲಭ)

A) ತಮಿಳುನಾಡು B) ಕರ್ನಾಟಕ C) ಬಿಹಾರ D) ಆಂಧ್ರ ಪ್ರದೇಶ

3) ಸ್ವತಂತ್ರ ಭಾರತದ ಮೊದಲ ವಿವಿಧೋದ್ದೇಶ ನದಿ ಕಣಿವೆ ಯೋಜನೆ (ಸುಲಭ)

A) ಭಾಕ್ರಾ ನಂಗಲ್ ಯೋಜನೆ B) ದಾಮೋದರ ನದಿಕಣಿವೆ ಯೋಜನೆ C) ಕೋಸಿ ಯೋಜನೆ D) ಹಿರಾಕುಡ್ ಯೋಜನೆ

4) ಮಹಾನದಿಗೆ ಅಡ್ಡಲಾಗಿ ನಿಮಿಸಲಾದ ಆಣೆಕಟ್ಟು (ಸಾಧಾರಣ)

A) ಹಿರಾಕುಡ್ ಅಣೆಕಟ್ಟು B) ಭಾಕ್ರಾ ನಂಗಲ್ ಅಣೆಕಟ್ಟು C) ತೆಹ್ರಿ ಅಣೆಕಟ್ಟು D) ನಾಗಾರ್ಜುನ ಸಾಗರ ಅಣೆಕಟ್ಟು

5) "ಬಿಹಾರದ ಕಣ್ಣೀರಿನ ನದಿ" ಎಂದು ಕರೆಯಲ್ಪಡುವ ನದಿ (ಸುಲಭ)

A) ಸಟ್ಲೇಜ್ ನದಿ B) ಕೋಸಿ ನದಿ C) ಕೃಷ್ಣಾ ನದಿ D) ಮಹಾನದಿ

6) ನಾಗಾರ್ಜುನ ಸಾಗರ ಅಣೆಕಟ್ಟನ್ನು ಈ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. (ಸಾಧಾರಣ)

A) ದಾಮೋದರ ನದಿ B) ಕೃಷ್ಣಾ ನದಿ C) ಕೋಸಿ ನದಿ D) ತುಂಗಭದ್ರಾ ನದಿ

7. ದಾಮೋದರ ನದಿ ಕಣಿವೆ ಯೋಜನೆಯ ನಿರ್ಮಾಣದಿಂದಾಗಿರುವ ಪರಿಣಾಮ (ಏ–2019) (ಸಾಧಾರಣ)

A) ದಾಮೋದರ ನದಿಯು ಬಂಗಾಳದ ದುಃಖದ ನದಿಯಾಗಿ ಉಳಿದಿಲ್ಲ B) ಭೂಕುಸಿತಗಳು ಹೆಚ್ಚಾಗಿವೆ

C) ಬಲಿಷ್ಠ ಭೂಕಂಪನಗಳನ್ನು ಉಂಟು ಮಾಡಿವೆ D) ಪ್ರಮುಖ ಕೈಗಾರಿಕಾ ಪ್ರದೇಶಗಳು ಮುಳುಗಡೆಯಾಗಿವೆ

8. ಒಡಿಶಾದ ಪ್ರಮುಖ ವಿವಿಧೋದ್ದೇಶ ನದಿ ಕಣಿವೆ ಯೋಜನೆ (ಜು–2021) (ಸುಲಭ)

A) ಹಿರಾಕುಡ್ B) ಭಾಕ್ರಾ ನಂಗಲ್ C) ಪಂಪ ಸಾಗರ D) ನಾಗಾರ್ಜುನ ಸಾಗರ

9. ಸಟ್ಲೇಜ್ ನದಿಗೆ ಅಡ್ಡಲಾಗಿ ನಿರ್ಮಿಸಿದ ವಿವಿಧೋದ್ದೇಶ ನದಿ ಕಣಿವೆ ಯೋಜನೆ (ಜೂ–2023) (ಸುಲಭ)

A) ಭಾಕ್ರಾ ನಂಗಲ್ B) ಹಿರಾಕುಡ್ C) ಪಂಪ ಸಾಗರ D) ನಾಗಾರ್ಜುನ ಸಾಗರ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

10. ನೀರಾವರಿ ಎಂದರೇನು? (ಸಾಧಾರಣ)

11. ಭಾರತದ ಅತಿ ಎತ್ತರವಾದ ಆಣೆಕಟ್ಟು ಯಾವುದು? (ಸುಲಭ)

12. ಭಾರತ ಮತ್ತು ನೇಪಾಳ ದೇಶಗಳ ಜಂಟಿ ಯೋಜನೆ ಯಾವುದು? (ಸುಲಭ)

13. ಮಳೆಕೊಯ್ಲು ಎಂದರೇನು? (ಮಾ– 2024) (ಸಾಧಾರಣ)

14. ಅಂತರ್ಜಲ ಮಟ್ಟವು ಹೇಗೆ ಮರುಪೂರಣಗೊಳ್ಳುವುದು? (ಸಾಧಾರಣ)

15. ದಾಮೋದರ ನದಿಯನ್ನು ಬಂಗಾಳದ ಕಣ್ಣೀರಿನ ನದಿ ಎಂದು ಏಕೆ ಕರೆಯುತ್ತಾರೆ? (ಸಾಧಾರಣ)

16) ರಾಷ್ಟ್ರೀಯ ವಿದ್ಯುತ್ ಜಾಲ ಎಂದರೇನು?. (ಏ–2018) (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

17) ನೀರಾವರಿಯ ವಿಧಗಳು ಯಾವುವು? (ಸಾಧಾರಣ)

18) ಬಾವಿ ನೀರಾವರಿಯು ಅತಿ ಪ್ರಮುಖವಾದ ನೀರಾವರಿ ಪದ್ಧತಿಯಾಗಿದೆ. ಏಕೆ? (ಕಠಿಣ)

19) ಸರ್ವಕಾಲಿಕ ಕಾಲುವೆ ಮತ್ತು ಪ್ರವಾಹ ಕಾಲುವೆಗಳ ನಡುವಿನ ವ್ಯತ್ಯಾಸಗಳಾವುವು? (ಕಠಿಣ)

20) ಮಳೆ ನೀರು ಸಂಗ್ರಹಣೆ/ ಮಳೆಕೊಯ್ಲು ಇಂದು ಕಡ್ಡಾಯವಾಗಿದೆ. ಏಕೆ? (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

21) ಮಳೆ ನೀರು ಸಂಗ್ರಹಣೆ ಮಾಡುವ ವಿಧಾನಗಳಾವವು? (ಸಾಧಾರಣ)

22) ಭಾರತದಲ್ಲಿ ನೀರಾವರಿ ಅವಶ್ಯಕ. ಏಕೆ? (ಮಾ–2019) (ಕಠಿಣ)

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

23) ವಿವಿಧೋದ್ಧೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳಾವುವು? (ಸಾಧಾರಣ)

VI. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಪ್ರಮುಖ ವಿವಿದೋದ್ದೇಶ ನದಿ ಕಣಿವೆ ಯೋಜನೆಗಳನ್ನು ಗುರುತಿಸಿ.

A) ಭಾಕ್ರಾ ನಂಗಲ್ (ಜೂ–2021) B) ಕೋಸಿ (ಏ–2016,2017) C) ನರ್ಮದಾ (ಏ–2016,ಜೂ–2020)

D) ಹಿರಾಕುಡ್ (ಪ–2–2024, ಪ–3 2024) E) ದಾಮೋದರ (ಜೂ–2015,2023) F) ಕೃಷ್ಣಾ ಮೇಲ್ದಂಡೆ ಯೋಜನೆ

G) ತುಂಗಭದ್ರಾ (ಮಾ–2021,ಏ–2022) H) ನಾಗಾರ್ಜುನ ಸಾಗರ (ಏ–2015, 2018)

ಭೂಗೋಳಶಾಸ್ತ್ರ, ಅಧ್ಯಾಯ– 25

ಭಾರತದ ಭೂ ಬಳಕೆ ಹಾಗೂ ಕೃಷಿ

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಯಾವುದೇ ಒಂದು ಪ್ರದೇಶದಲ್ಲಿ ಜನರು ಶಾಶ್ವತವಾಗಿ ನೆಲೆಸಿ ಬೇಸಾಯ ಮಾಡುವುದನ್ನು ಹೀಗೆಂದು ಕರೆಯುತ್ತಾರೆ. (ಸಾಧಾರಣ)
   A) ಸಾಂದ್ರ ಬೇಸಾಯ B) ಸ್ಥಿರ ಬೇಸಾಯ C) ವಾಣಿಜ್ಯ ಬೇಸಾಯ D) ಸ್ಥಳಾಂತರ ಬೇಸಾಯ
2. ಭಾರತದಲ್ಲಿ ಅತಿ ಹೆಚ್ಚು ಭತ್ತ ಬೆಳೆಯುವ ರಾಜ್ಯ (ಸುಲಭ)
   A) ಬಿಹಾರ B) ಉತ್ತರ ಪ್ರದೇಶ C) ಪಶ್ಚಿಮ ಬಂಗಾಳ D) ಕರ್ನಾಟಕ
3. ಗೋಧಿಯ ಕಣಜ ಎಂದು ಕರೆಯಲ್ಪಡುವ ರಾಜ್ಯ (ಸುಲಭ)
   A) ಪಂಜಾಬ್ B) ಗುಜರಾತ C) ತಮಿಳುನಾಡು D) ಮಧ್ಯಪ್ರದೇಶ
4. ಇಂದು ಈ ಬೇಸಾಯವನ್ನು ನಿಷೇಧಿಸಲಾಗಿದೆ (ಸಾಧಾರಣ)
   A) ಸಾಂದ್ರ ಬೇಸಾಯ B) ವಾಣಿಜ್ಯ ಬೇಸಾಯ C) ಸ್ಥಳಾಂತರ ಬೇಸಾಯ D) ಮಿಶ್ರ ಬೇಸಾಯ
5. ವ್ಯಾಪಾರದ ಉದ್ದೇಶಕ್ಕಾಗಿ ಕೈಗೊಳ್ಳುವ ಬೇಸಾಯ (ಸಾಧಾರಣ) (ಸೆ–2021)
   A) ಜೀವನಾಧಾರ ಬೇಸಾಯ B) ವಾಣಿಜ್ಯ ಬೇಸಾಯ C) ವರ್ಗಾವಣೆ ಬೇಸಾಯ D) ಸ್ಥಿರ ಬೇಸಾಯ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

6. ಭೂಬಳಕೆ ಎಂದರೇನು? (ಸುಲಭ)
7. ಸುವರ್ಣ ಕ್ರಾಂತಿ ಎಂದರೇನು? (ಸಾಧಾರಣ)
8. ಹಿಂದೆ ಬೇಸಾಯಕ್ಕೆ ಬಳಸಲಾಗುತ್ತಿದ್ದ ಕೆಲವು ಭಾಗಗಳು ಇಂದು ಅನುಪಯುಕ್ತವಾಗಿ ಪರಿಣಮಿಸಿವೆ. ಏಕೆ? (ಸಾಧಾರಣ)
9. ಕರ್ನಾಟಕದ ಪ್ರಮುಖ ಹೊಗೆ ಸೊಪ್ಪು ಮಾರುಕಟ್ಟೆ ಕೇಂದ್ರ ಯಾವುದು? (ಸುಲಭ)
10 ಫ್ಲೋರಿ ಕಲ್ಚರ್ ಎಂದರೇನು? (ಸಾಧಾರಣ)
11. ಚಳಿಗಾಲದಲ್ಲಿ ಮಳೆ ಪಡೆಯುವ ಪ್ರದೇಶಗಳ ಮುಖ್ಯ ಸಾಗುವಳಿಯ ಅವಧಿ ಯಾವುದು? (ಸಾಧಾರಣ)
12. ಭತ್ತದ ಬೆಳೆಗೆ ಸಮತಟ್ಟಾದ ಭೂಮಿ ಬೇಕಾಗುತ್ತದೆ. ಏಕೆ? (ಸಾಧಾರಣ)
13. ಸಾಂದ್ರ ಬೇಸಾಯ ಎಂದರೇನು? (ಸಾಧಾರಣ) (ಮಾ–2019,2024)
14. ಜೀವನಾಧಾರ ಬೇಸಾಯ ಎಂದರೇನು? (ಸಾಧಾರಣ) (ಜೂ–2016)
15. ಮಿಶ್ರ ಬೇಸಾಯ ಎಂದರೇನು? (ಸಾಧಾರಣ) (ಜೂ–2015)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

16. ಭಾರತದಲ್ಲಿರುವ ಬೆಳೆ ಋತುಗಳು ಯಾವುವು? (ಸಾಧಾರಣ)
17. ಹತ್ತಿ ಬೆಳೆಯಲು ಅವಶ್ಯಕವಿರುವ ಭೌಗೋಳಿಕ ಅಂಶಗಳಾವುವು? (ಸುಲಭ)
18. ಭಾರತದಲ್ಲಿ ತೋಟಗಾರಿಕೆಗೆ ಹೆಚ್ಚು ಪೂರಕವಾಗಿರುವ ಭೌಗೋಳಿಕ ಅಂಶಗಳಾವುವು? (ಕಠಿಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

19. ಭೂ ಬಳಕೆಯ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ. ಸಮರ್ಥಿಸಿ. (ಕಠಿಣ)
20. ಭಾರತದಲ್ಲಿ ಭೂ ಬಳಕೆಯ ಪ್ರಕಾರಗಳಾವುವು? (ಸಾಧಾರಣ)
21. ಭಾರತದಲ್ಲಿ ಕಂಡು ಬರುವ ವ್ಯವಸಾಯದ ಪ್ರಮುಖ ವಿಧಗಳಾವುವು? (ಸಾಧಾರಣ)

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ

22. ವ್ಯವಸಾಯದ ಪ್ರಾಮುಖ್ಯತೆಯನ್ನು ತಿಳಿಸಿ. (ಸಾಧಾರಣ)
23. ಭಾರತದಲ್ಲಿ ಬೆಳೆಗಳ ಮಾದರಿಯನ್ನು ನಿರ್ಧರಿಸುವ ಅಂಶಗಳಾವುವು? (ಕಠಿಣ)

ಭೂಗೋಳಶಾಸ್ತ್ರ, ಅಧ್ಯಾಯ– 26

ಭಾರತದ ಖನಿಜ ಹಾಗೂ ಶಕ್ತಿ ಸಂಪನ್ಮೂಲಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಅರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಭಾರತದ ಅತೀ ದೊಡ್ಡ ತೈಲ ನಿಕ್ಷೇಪ (ಸುಲಭ)
   A) ದಿಗ್ಬಾಯ್ B) ಅಂಕಲೇಶ್ವರ C) ಬಾಂಬೆ ಹೈ D) ನಹರ್ ಕಟಿಯಾ
2. 'ದ್ರವರೂಪದ ಚಿನ್ನ' ಎಂದು ಕರೆಯಲ್ಪಡುವುದು (ಸುಲಭ)
   A) ಕಲ್ಲಿದ್ದಲು B) ಅಭ್ರಕ C) ಪೆಟ್ರೋಲಿಯಂ D) ಅಣು ವಿದ್ಯುತ್
3. ಪೆಟ್ರೋಲಿಯಂ ಅನ್ನು ದ್ರವರೂಪದ ಚಿನ್ನ ಎನ್ನುವರು. ಏಕೆಂದರೆ, (ಜೂನ್ 2015, 2017, 2019) (ಸಾಧಾರಣ)
   A) ಇದು ಬಹುಪಯೋಗಿ ಶಕ್ತಿ ಸಂಪನ್ಮೂಲವಾಗಿದೆ B) ಹೆಚ್ಚು ರಫ್ತು ಮಾಡಲ್ಪಡುತ್ತದೆ
   C) ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ ಬಳಕೆಯಾಗುತ್ತದೆ D) ಹೆಚ್ಚು ಕಠಿಣತೆ ಇರುವ ಸಂಪನ್ಮೂಲವಾಗಿದೆ
4. ಇವುಗಳಲ್ಲಿ ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಿಗೆ ಒಂದು ಉತ್ತಮ ಉದಾಹರಣೆ (ಸುಲಭ)
   A) ಪೆಟ್ರೋಲಿಯಂ B) ಸೌರಶಕ್ತಿ C) ಭೂ ಅಂತರಾಳದ ಶಕ್ತಿ D) ಪವನ ಶಕ್ತಿ
5. ಇದನ್ನು ಕಾಗೆ ಬಂಗಾರ ಎಂದು ಕರೆಯುವರು, (ಸುಲಭ)
   A) ಅಭ್ರಕ B) ಬಾಕ್ಸೈಟ್ C) ಚಿನ್ನ D) ಮ್ಯಾಂಗನೀಸ್
6. ಕರ್ನಾಟಕದಲ್ಲಿರುವ ತುಮಕೂರು ಜಿಲ್ಲೆಯ ಪ್ರಮುಖ ಸೌರ ವಿದ್ಯುತ್ ಸ್ಥಾವರ,
   A) ಕೊರಟಗೆರೆ B) ಮಧುಗಿರಿ C) ಪಾವಗಡ D) ಕುಣಿಗಲ್

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

7. ಪರಮಾಣು ವಿದ್ಯುತ್ ರಿಯಾಕ್ಟರ್‌ಗಳಲ್ಲಿ ಮಾಡರೇಟರ್ ಕಾರ್ಯಕ್ಕೆ ಬಳಸುವ ಪರಮಾಣು ಖನಿಜ ಯಾವುದು? (ಸಾಧಾರಣ)
8. ಇಂದು ಅಭ್ರಕದ ರಫ್ತು ಕಡಿಮೆಯಾಗಿದೆ. ಏಕೆ? (ಸಾಧಾರಣ)
9. ಅಲ್ಯೂಮಿನಿಯಂನ್ನು 20ನೇ ಶತಮಾನದ ಅದ್ಭುತ ಲೋಹ ಎಂದು ಕರೆಯಲು ಕಾರಣವೇನು? (ಸಾಧಾರಣ)
10. ಅಂತರರಾಷ್ಟ್ರೀಯ ಮೌಲ್ಯ ನಿರ್ಧರಿಸುವಲ್ಲಿ ನಿರ್ಧಾರಕ ಮಾಧ್ಯಮವಾಗಿ ಬಳಸಲ್ಪಡುವ ಲೋಹ ಯಾವುದು? (ಸುಲಭ)
11. ಭಾರತದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುವ ಗಣಿ ಯಾವುದು? (ಸುಲಭ)
12. ಭಾರತದಲ್ಲಿ ಪೆಟ್ರೋಲಿಯಂನ್ನು ಮೊದಲು ಎಲ್ಲಿ ಪತ್ತೆ ಮಾಡಲಾಯಿತು? (ಸಾಧಾರಣ)
13. ಗ್ಲೋಬಲ್ ವಾರ್ಮಿಂಗ್ ಅಥವಾ ಜಾಗತಿಕ ತಾಪಮಾನ ಏರಿಕೆ ಎಂದರೇನು? (ಸಾಧಾರಣ)
14. ಕಲ್ಲಿದ್ದಲನ್ನು ಕಪ್ಪು ವಜ್ರ ಎಂದು ಕರೆಯುತ್ತಾರೆ. ಏಕೆ? (ಸಾಧಾರಣ)
15. ಭಾರತದಲ್ಲಿ ಮೊದಲ ಸೌರವಿದ್ಯುತ್ ಉತ್ಪಾದನಾ ಕೇಂದ್ರವನ್ನು ಎಲ್ಲಿ ಸ್ಥಾಪಿಸಲಾಗಿದೆ? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

16. ಕಲ್ಲಿದ್ದಲಿನ ಉಪಯೋಗಗಳನ್ನು ತಿಳಿಸಿ. (ಸಾಧಾರಣ)
17. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆ ಅವಶ್ಯಕವಾಗಿದೆ. ಸಮರ್ಥಿಸಿ. / ಸಾಂಪ್ರದಾಯಿಕ ಶಕ್ತಿ ಮೂಲಗಳ ಬಳಕೆಯನ್ನು ಮಿತಗೊಳಿಸುವುದು ಇಂದು ಅಗತ್ಯವಾಗಿದೆ. ಸಮರ್ಥಿಸಿ (ಏಪ್ರಿಲ್–2016) (ಕಠಿಣ)
18. ಮ್ಯಾಂಗನೀಸ್ ಅದಿರಿನ ವಿಧಗಳಾವುವು? (ಸಾಧಾರಣ)
19. ಮ್ಯಾಂಗನೀಸ್ ಅದಿರು ಬಹುಪಯೋಗಿ ಗುಣಗಳನ್ನು ಹೊಂದಿದೆ. ದೃಢೀಕರಿಸಿ. (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

20. ಅಭ್ರಕದ ಉಪಯೋಗಗಳನ್ನು ತಿಳಿಸಿ. (ಸಾಧಾರಣ)
21. ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಯಾವ ಪರಿಹಾರೋಪಾಯಗಳನ್ನು ಸೂಚಿಸುವಿರಿ? (ಏಪ್ರಿಲ್–2018) (ಕಠಿಣ)

ಭೂಗೋಳಶಾಸ್ತ್ರ, ಅಧ್ಯಾಯ– 27

ಭಾರತದ ಸಾರಿಗೆ ಹಾಗೂ ಸಂಪರ್ಕ

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಅರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಭಾರತದ ಹೆಬ್ಬಾಗಿಲು' ಎಂದು ಕರೆಯಲ್ಪಡುವ ಬಂದರು (ಜುಲೈ–2021) (ಸುಲಭ)

A) ಕೋಲ್ಕತ್ತಾ B) ನವ ಮಂಗಳೂರು C) ಗೋವಾ D) ಮುಂಬೈ

2. ಭಾರತದ ಚಹದ ಬಂದರು (ಪ–2 2024) (ಸುಲಭ)

A) ಮುಂಬೈ B) ನವ ಮಂಗಳೂರು C) ಮರ್ಮ ಗೋವಾ D) ಕೋಲ್ಕತ್ತಾ

3. ಭಾರತದ ಅತಿ ಉದ್ದವಾದ ರಾಷ್ಟ್ರೀಯ ಹೆದ್ದಾರಿ (ಸುಲಭ)

A) ರಾಷ್ಟ್ರೀಯ ಹೆದ್ದಾರಿ 44 B) ರಾಷ್ಟ್ರೀಯ ಹೆದ್ದಾರಿ 37 C) ರಾಷ್ಟ್ರೀಯ ಹೆದ್ದಾರಿ 47 D) ರಾಷ್ಟ್ರೀಯ ಹೆದ್ದಾರಿ 54

4. ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರ ಸ್ಥಾಪನೆಯಾದ ವರ್ಷ (ಸುಲಭ)

A) 1988 B) 1947 C) 1995 D) 1965

5. ಈ ಕೆಳಕಂಡವುಗಳಲ್ಲಿ ಭಾರತದ ನೈಸರ್ಗಿಕ ಬಂದರು (ಸುಲಭ)

A) ಚೆನ್ನೈ B) ಮುಂಬೈ C) ಮರ್ಮಗೋವಾ D) ವಿಶಾಖಪಟ್ಟಣಂ

6. ಮಾರ್ಗಸೂಚಿ ಅಥವಾ ಪಾತ್ ಫೈಂಡರ್ ಎಂದು ಕರೆಯಲ್ಪಡುವ ವ್ಯವಸ್ಥೆ (ಸಾಧಾರಣ)

A) ಜಿ.ಪಿ.ಎಸ್ B) ಜಿ.ಐ.ಎಸ್ C) ಆರ್ಕ್ ಇನ್ಫೋ D) ಆರ್.ಎಸ್.ಟಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

7. ಭಾರತದ ಪ್ರಾದೇಶಿಕ ಮತ್ತು ಸ್ವತಂತ್ರ ಜಿ.ಪಿ.ಎಸ್ ವ್ಯವಸ್ಥೆಯ ಹೆಸರೇನು? (ಸಾಧಾರಣ)
8. ಸಾರಿಗೆ ಎಂದರೇನು? (ಸಾಧಾರಣ)
9. ಜಗತ್ತಿನ ಅತಿ ಎತ್ತರದ ರಸ್ತೆ ಮಾರ್ಗವನ್ನು ಎಲ್ಲಿ ನಿರ್ಮಿಸಿದೆ? (ಸಾಧಾರಣ)
10. ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಯಾವ ವರ್ಷ ಸ್ಥಾಪನೆಯಾಯಿತು? (ಸಾಧಾರಣ)
11. ದೂರ ಸಂವೇದಿ ತಂತ್ರಜ್ಞಾನ ಎಂದರೇನು? (ಸಾಧಾರಣ)
12. ಭಾರತ ಸರ್ಕಾರವು ನವ ಶೇವಾ ಬಂದರನ್ನು ನಿರ್ಮಿಸಲು ಕಾರಣವೇನು? (ಸಾಧಾರಣ)
13. ಸಮೂಹ ಮಾಧ್ಯಮ ಎಂದರೇನು? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

14. ಸಾರಿಗೆಯ ವಿಧಗಳನ್ನು ಹೆಸರಿಸಿ. (ಸಾಧಾರಣ)
15. ರಸ್ತೆ ಸಾರಿಗೆಯ ವಿಧಗಳಾವುವು? (ಸಾಧಾರಣ)
16. ರೈಲು ಸಾರಿಗೆಯ ಪ್ರಾಮುಖ್ಯತೆಯನ್ನು ತಿಳಿಸಿ. (ಸಾಧಾರಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

17. ಭಾರತದಲ್ಲಿ ರಸ್ತೆಗಳ ಪ್ರಾಮುಖ್ಯತೆಯನ್ನು ತಿಳಿಸಿ. (ಕಠಿಣ)
18. ಭಾರತದ ರಸ್ತೆ ಸಾರಿಗೆಯ ತೊಡಕುಗಳಾವುವು/ ಸಮಸ್ಯೆಗಳಾವುವು? (ಜೂನ್–2018, 2018) (ಸಾಧಾರಣ)
19. ಪೂರ್ವ ಕರಾವಳಿಯ ಬಂದರುಗಳನ್ನು ಪಟ್ಟಿ ಮಾಡಿ. (ಸಾಧಾರಣ)
20. ಪಶ್ಚಿಮ ಕರಾವಳಿಯ ಬಂದರುಗಳನ್ನು ಪಟ್ಟಿ ಮಾಡಿ. (ಸಾಧಾರಣ)
21. ಸಂಪರ್ಕದ ಪ್ರಾಮುಖ್ಯತೆಯನ್ನು ತಿಳಿಸಿ. (ಏಪ್ರಿಲ್–2016)
22. ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿ. ಐ. ಎಸ್)ಯ ಉಪಯೋಗಗಳನ್ನು ತಿಳಿಸಿ. (ಕಠಿಣ)
23. ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ (ಜಿ.ಪಿ.ಎಸ್) ಬಹುಪಯೋಗಿ ತಂತ್ರಜ್ಞಾನವಾಗಿದೆ. ಸಮರ್ಥಿಸಿ. (ಕಠಿಣ)
24. ದೂರ ಸಂವೇದಿ ತಂತ್ರಜ್ಞಾನದ ಅನೇಕ ಉಪಯೋಗಗಳನ್ನು ಹೊಂದಿದೆ. ದೃಢೀಕರಿಸಿ. (ಕಠಿಣ)

V. 25. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಭಾರತದ ಪ್ರಮುಖ ಬಂದರುಗಳನ್ನು ಗುರುತಿಸಿ (ಸಾಧಾರಣ)

26. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಭಾರತದ ಪ್ರಮುಖ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಗುರುತಿಸಿ (ಸಾಧಾರಣ)

(* ಪರೀಕ್ಷೆಗೆ ನಕ್ಷೆ ಪ್ರಶ್ನೆ ಕೇಳುವಾಗ ಆಯ್ದ ಸ್ಥಳಗಳನ್ನು ಕೇಳುವುದು.)**

ಭೂಗೋಳಶಾಸ್ತ್ರ, ಅಧ್ಯಾಯ- 28

ಭಾರತದ ಪ್ರಮುಖ ಕೈಗಾರಿಕೆಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಭಾರತದ ಪ್ರಥಮ ಉಕ್ಕಿನ ಕೈಗಾರಿಕೆಯು ಸ್ಥಾಪನೆಗೊಂಡಿದ್ದು (ಸುಲಭ)

A) ಸೆರಾಂಪುರ B) ಸೇಲಂ C) ಭದ್ರಾವತಿ D) ಕುಲ್ಟಿ

2. ಭಾರತದ ಮ್ಯಾಂಚೆಸ್ಟರ್/ ಕಾಟನೋಪೊಲಿಸ್ ಎಂದು ಕರೆಯಲ್ಪಡುವ ಸ್ಥಳ, (ಸೆಪ್ಟೆಂಬರ್–2021) (ಸುಲಭ)

A) ದಾವಣಗೆರೆ B) ಮುಂಬೈ C) ಕೊಯಮತ್ತೂರು D) ಸೇಲಂ

3. ಭಾರತದ ಸಿಲಿಕಾನ್ ಕಣಿವೆ (ಜೂನ್–2017,2023) (ಸುಲಭ)

A) ಬೆಂಗಳೂರು B) ದೆಹಲಿ C) ಮೈಸೂರು D) ಹೈದರಾಬಾದ್

4. ಇಸ್ರೋ ಸ್ಥಾಪನೆಯಾದ ವರ್ಷ (ಸಾಧಾರಣ)

A) 1961 B) 1976 C) 1969 D) 1950

5. ಚಂದ್ರನ ದಕ್ಷಿಣ ಧ್ರುವದ ಬಳಿ ಬಾಹ್ಯಾಕಾಶ ನೌಕೆಯನ್ನು ಇಳಿಸಿದ ಮೊದಲ ದೇಶ (ಸುಲಭ)

A) ಅಮೇರಿಕಾ B) ಚೀನಾ C) ಜಪಾನ್ D) ಭಾರತ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

6. ಕೈಗಾರಿಕಾ ವಲಯ ಎಂದರೇನು? (ಜೂನ್ – 2015) (ಸಾಧಾರಣ)
7. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎಂದು ಕರೆಯುತ್ತಾರೆ. ಏಕೆ? (ಸಾಧಾರಣ)
8. ಜವಳಿ ಕೈಗಾರಿಕೆ ಎಂದರೇನು? (ಸಾಧಾರಣ)
9. ಮಹಾರಾಷ್ಟ್ರದ ಮುಂಬೈಯನ್ನು ಭಾರತದ ಮ್ಯಾಂಚೆಸ್ಟರ್/ ಕಾಟನೋಪೊಲಿಸ್ ಎಂದು ಕರೆಯಲು ಕಾರಣವೇನು? (ಜೂನ್–2018) (ಸಾ)
10. ಭಾರತದ ಮೊದಲ ಕಾಗದದ ಕೈಗಾರಿಕೆ ಎಲ್ಲಿ ಸ್ಥಾಪನೆಗೊಂಡಿತು? (ಸಾಧಾರಣ)
11. ಪ್ರಸ್ತುತ ಅತಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಕೈಗಾರಿಕಾ ಕ್ಷೇತ್ರ ಯಾವುದು? (ಸಾಧಾರಣ)
12. ಜ್ಞಾನಾಧಾರಿತ ಕೈಗಾರಿಕೆಗೆ ಈ ಹೆಸರು ಬರಲು ಕಾರಣವೇನು? (ಸಾಧಾರಣ)
13. ಭಾರತ ಸರ್ಕಾರವು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ಗಳನ್ನು ಏಕೆ ಸ್ಥಾಪಿಸಿತು? (ಕಠಿಣ)
14. ಭಾರತದ ಸಿಲಿಕಾನ್ ಕಣಿವೆ ಎಂದು ಬೆಂಗಳೂರನ್ನು ಕರೆಯುತ್ತಾರೆ. ಏಕೆ? (ಕಠಿಣ)
15. ಇಸ್ರೋದ ಮುಖ್ಯ ಕಛೇರಿ ಎಲ್ಲಿದೆ? (ಸಾಧಾರಣ)
16. ಇಸ್ರೋದ ಮೊದಲ ಅಧ್ಯಕ್ಷರು ಯಾರು? (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

17. ಇಸ್ರೋದ ಪ್ರಮುಖ ಸಾಧನೆಗಳನ್ನು ತಿಳಿಸಿ (ಸಾಧಾರಣ)
18. ಕಾಗದ ಕೈಗಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳು ಯಾವುವು? (ಸಾಧಾರಣ)
19. ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಕೈಗಾರಿಕೆಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಸ್ಪಷ್ಟೀಕರಿಸಿ. (ಮಾರ್ಚ್–2020) (ಕಠಿಣ)
20. ಜೈವಿಕ ತಂತ್ರಜ್ಞಾನದಿಂದ ಕೃಷಿ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯೇ ಜರುಗಲು ಪ್ರಾರಂಭಿಸಿತು. ಈ ಹೇಳಿಕೆಯನ್ನು ಸಮರ್ಥಿಸಿ. (ಕಠಿಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

21. ಭಾರತದಲ್ಲಿ ಕೈಗಾರಿಕೆಗಳು ಕೆಲವೇ ಪ್ರದೇಶಗಳಲ್ಲಿ ಮಾತ್ರ ಸ್ಥಾನೀಕರಣಗೊಂಡಿವೆ. ಏಕೆ? / ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ. ದೃಢೀಕರಿಸಿ.(ಸಾಧಾರಣ) (2015, 2016, 2016, 2017, 2022, 2022, 2024)
22. ಭಾರತದಲ್ಲಿರುವ ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಹೆಸರಿಸಿ (ಸಾಧಾರಣ)
23. ಭಾರತದ ಪ್ರಧಾನ ಕೈಗಾರಿಕಾ ವಲಯಗಳು ಯಾವುವು? (ಏಪ್ರಿಲ್–2017, 2024) (ಸಾಧಾರಣ)
24. ಭಾರತದಲ್ಲಿ ಉನ್ನತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳನ್ನು ವಿವರಿಸಿ. (ಕಠಿಣ)

V. 25. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ (ಸಾಧಾರಣ)

A) ಭದ್ರಾವತಿ (ಜೂನ್–2023, ಏಪ್ರಿಲ್–2018) B) ದುರ್ಗಾಪುರ C) ಸೂರತ್ D) ದಾವಣಗೆರೆ

E) ಬೊಕಾರೋ F) ಬರ್ನಪುರ್ (ಮಾದರಿ–1 2025) G) ಸೇಲಂ (State 2024)

ಭೂಗೋಳಶಾಸ್ತ್ರ, ಅಧ್ಯಾಯ– 29

ಭಾರತದ ನೈಸರ್ಗಿಕ ವಿಕೋಪಗಳು

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಇತ್ತೀಚೆಗೆ ಅರಬ್ಬೀ ಸಮುದ್ರದಲ್ಲಿಯೂ ಚಂಡಮಾರುತಗಳು ಉಂಟಾಗಲು ಕಾರಣ (ಸಾಧಾರಣ)
   A) ಅಣೆಕಟ್ಟುಗಳಿಂದ B) ನದಿಗಳ ಪಾತ್ರ ಬದಲಾವಣೆಯಿಂದ C) ಗಣಿಗಾರಿಕೆಯಿಂದ D) ಜಾಗತಿಕ ತಾಪಮಾನ ಹೆಚ್ಚಳದಿಂದ
2. ಪ್ರವಾಹಕ್ಕೆ ಮುನ್ನೆಚ್ಚರಿಕಾ ಕ್ರಮ (ಸೆಪ್ಟೆಂಬರ್–2021) (ಸುಲಭ)
   A) ಉತ್ತಮ ಗುಣಮಟ್ಟದ ಕಟ್ಟಡ ಸಾಮಗ್ರಿಗಳನ್ನು ಬಳಸುವುದು B) ಎತ್ತರದ ಕಟ್ಟಡಗಳನ್ನು ನಿಷೇಧಿಸುವುದು
   C) ಅತಿಯಾದ ಗಣಿಗಾರಿಕೆಯನ್ನು ನಿರ್ಬಂಧಿಸುವುದು D) ಅರಣ್ಯೀಕರಣ
3. ನದಿಯ ಇಕ್ಕೆಲಗಳಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸಬೇಕು. ಏಕೆಂದರೆ (ಸುಲಭ)
   A) ಕಡಲಕೊರೆತ ತಪ್ಪಿಸಲು B) ಪ್ರವಾಹ ನಿಯಂತ್ರಿಸಲು C) ಭೂಕಂಪ ತಪ್ಪಿಸಲು D) ಭೂಕುಸಿತ ತಪ್ಪಿಸಲು
4. ಕಡಲಕೊರೆತವನ್ನು ನಿಯಂತ್ರಿಸಲು ಬೆಳೆಯುವ ಅರಣ್ಯದ ವಿಧ (ಸೆಪ್ಟೆಂಬರ್–2021) (ಸುಲಭ)
   A) ಮಾನ್ಸೂನ್ ಮಾದರಿ ಅರಣ್ಯ B) ನಿತ್ಯ ಹರಿದ್ವರ್ಣದ ಅರಣ್ಯ C) ಹಿಮಾಲಯದ ಅಲ್ಪೈನ್ ಅರಣ್ಯ D) ಮ್ಯಾಂಗ್ರೋವ್ ಅರಣ್ಯ
5. ಈ ಕೆಳಕಂಡ ರಾಜ್ಯಗಳಲ್ಲಿ ಕಡಲಕೊರೆತವು ಅತಿ ಹೆಚ್ಚಾಗಿ ಕಂಡುಬರುವ ರಾಜ್ಯ (ಏಪ್ರಿಲ್–2016) (ಸುಲಭ)
   A) ತಮಿಳುನಾಡು B) ಆಂಧ್ರ ಪ್ರದೇಶ C) ಕೇರಳ D) ಒಡಿಶಾ
6. ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸಬೇಕು. ಏಕೆಂದರೆ (ಸುಲಭ)
   A) ಪ್ರವಾಹ ನಿಯಂತ್ರಸಲು B) ಚಂಡಮಾರುತ ನಿಯಂತ್ರಿಸಲು C) ಭೂಕುಸಿತ ತಪ್ಪಿಸಲು D) ಭೂಕಂಪ ತಪ್ಪಿಸಲು

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

7. ಚಂಡಮಾರುತಗಳು ಉಂಟಾಗಲು ಪ್ರಮುಖ ಕಾರಣವೇನು? (ಸಾಧಾರಣ)
8. ಪ್ರವಾಹಗಳು ಎಂದರೇನು? (ಸಾಧಾರಣ)
9. ಗಣಿಗಾರಿಕೆಯ ಪ್ರದೇಶದಲ್ಲಿ ಭೂಕುಸಿತಗಳು ಸಾಮಾನ್ಯ. ಏಕೆ? (ಏಪ್ರಿಲ್–2016) (ಸಾಧಾರಣ)
10. ಭೂಕುಸಿತ ಅಥವಾ ಭೂಪಾತ ಎಂದರೇನು? (ಸಾಧಾರಣ)
11. ಕಡಲಕೊರೆತ ಅಥವಾ ತೀರ ಪ್ರದೇಶದ ಕೊರೆತ ಎಂದರೇನು? (ಸಾಧಾರಣ)
12. ಭೂಕಂಪ ಎಂದರೇನು? (ಸಾಧಾರಣ)
13. ನೈಸರ್ಗಿಕ ವಿಕೋಪಗಳು ಎಂದರೇನು? (ಸಾಧಾರಣ)
14. ಪಶ್ಚಿಮ ಕರಾವಳಿ ತೀರದಲ್ಲಿ ಕಡಲ ಕೊರೆತ ಹೆಚ್ಚು. ಏಕೆ? (ಏಪ್ರಿಲ್–2017) (ಸಾಧಾರಣ)
15. ಕಡಲ ತೀರದುದ್ದಕ್ಕೂ ಮ್ಯಾಂಗ್ರೋವ್ ಅರಣ್ಯಗಳನ್ನು ಏಕೆ ಬಳಸಬೇಕು? (ಸಾಧಾರಣ) (ಏಪ್ರಿಲ್–2017, 2018)
16. ಚಂಡಮಾರುತಗಳಿಂದ ಹೆಚ್ಚು ಹಾನಿಗೊಳಗಾಗುವ ಭಾರತದ ರಾಜ್ಯಗಳು ಯಾವುವು? (ಏಪ್ರಿಲ್–2018) (ಸಾಧಾರಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

17. ಪ್ರವಾಹ ನಿಯಂತ್ರಣ ಕ್ರಮಗಳನ್ನು ತಿಳಿಸಿ. (ಸಾಧಾರಣ)
18. ಭೂಕುಸಿತದಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸಿ. (ಸಾಧಾರಣ)
19. ಕಡಲಕೊರೆತದಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸಿ. (ಸಾಧಾರಣ)
22. ಕಡಲ ಕೊರೆತದ ನಿರ್ವಹಣಾ ಕ್ರಮಗಳು ಯಾವುವು? (ಜೂನ್ –2017) (ಕಠಿಣ)
23. ಭೂಕಂಪಕ್ಕೆ ಕಾರಣಗಳನ್ನು ಪಟ್ಟಿ ಮಾಡಿ. (ಕಠಿಣ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

24. ಚಂಡಮಾರುತದಿಂದಾಗುವ ಪರಿಣಾಮಗಳಾವುವು?/'ಚಂಡಮಾರುತಗಳು ವಿಧ್ವಂಸಕಾರಿಗಳು' ದೃಢೀಕರಿಸಿ. (2022,2024) (ಸಾಧಾರಣ)
25. ಆವರ್ತಮಾರುತಗಳನ್ನು (ಚಂಡಮಾರುತ) ಎದುರಿಸಲು ಕೈಗೊಳ್ಳಬಹುದಾದ ಕ್ರಮಗಳು ಯಾವುವು? (ಕಠಿಣ)
26. ಪ್ರವಾಹಗಳು ಉಂಟಾಗಲು ಕಾರಣಗಳೇನು? (ಜೂನ್–2016, 2019) (ಸಾಧಾರಣ)
27. ಭೂ ಕುಸಿತಕ್ಕೆ ಕಾರಣಗಳು ಯಾವುವು? (ಜೂನ್–2015) (ಸಾಧಾರಣ)
28. ಭೂಕಂಪದಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸಿ. ಭೂಕಂಪಗಳು ಹೇಗೆ ವಿನಾಶಕಾರಿಗಳಾಗಿವೆ? (ಸಾಧಾರಣ) (ಜೂನ್–2025)
29. ಭೂಕಂಪದ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸಿ./ ಭೂಕಂಪಗಳಿಂದಾಗುವ ಪರಿಣಾಮಗಳನ್ನು ಹೇಗೆ ಮಿತಗೊಳಿಸಬಹುದು? (2023)(ಸಾ)
30. ಪ್ರವಾಹದಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸಿ. (ಏಪ್ರಿಲ್, ಜೂನ್–2022) (ಸಾಧಾರಣ)

V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

31. ನೈಸರ್ಗಿಕ ವಿಕೋಪಗಳು ಯಾವುವು? (ಏಪ್ರಿಲ್–2015) (ಸಾಧಾರಣ)
32. ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಯಾವ ಪರಿಹಾರೋಪಾಯಗಳನ್ನು ಕೈಗೊಳ್ಳಬೇಕು? (ಸಾಧಾರಣ)

II. **33. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.** (ಸಾಧಾರಣ)

ಎ. ಕೊಯ್ನಾ (ಏಪ್ರಿಲ್–2023) ಬಿ. ಲಾತೂರ್ ಸಿ. ಕನ್ಯಾಕುಮಾರಿ

ಅರ್ಥಶಾಸ್ತ್ರ, ಅಧ್ಯಾಯ– 15

ಅರ್ಥವ್ಯವಸ್ಥೆ ಮತ್ತು ಸರಕಾರ

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಉತ್ತರವನ್ನು ಬರೆಯಿರಿ.

1. ಭಾರತದ ಹಸಿರು ಕ್ರಾಂತಿಯ ಪಿತಾಮಹ, (ಸುಲಭ) (ಜೂನ್–2016, ರಾ.ಪೂ–2023, ಪರೀಕ್ಷೆ 1–2024)

A) ಡಾ. ನಾರ್ಮನ್ ಬೋರ್ಲಾಗ್ B) ವರ್ಗೀಸ್ ಕುರಿಯನ್ C) ಡಾ. ಎಂ. ಎಸ್. ಸ್ವಾಮಿನಾಥನ್ D) ಸರ್. ಎಂ. ವಿಶ್ವೇಶ್ವರಯ್ಯ

2. ನೀತಿ ಆಯೋಗದ ನೇತೃತ್ವವನ್ನು ಪ್ರಧಾನ ಮಂತ್ರಿಗಳು ವಹಿಸಿಕೊಂಡಿದ್ದರೆ, ಅದರ ದಿನವಹಿ ಆಡಳಿತವನ್ನು ನೋಡಿಕೊಳ್ಳುವವರು (ಸಾಧಾರಣ) (ಏಪ್ರಿಲ್–2023)

A) ರಾಷ್ಟ್ರಪತಿಗಳು B) ಕಾರ್ಯದರ್ಶಿಗಳು C) ಉಪಪ್ರಧಾನಿಗಳು D) ಉಪಾಧ್ಯಕ್ಷರು

3. ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಮುಖ್ಯತೆ ನೀಡಲಾದ ಅಂಶ, (ಸಾಧಾರಣ)

A) ಕೃಷಿ B) ಎಲ್ಲರನ್ನೂ ಒಳಗೊಂಡ ಬೆಳವಣಿಗೆ C) ಶಿಕ್ಷಣ D) ಕೈಗಾರಿಕೆ

4. ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವ ಸಂಸ್ಥೆ ಯಾವುದು? (ಕಠಿಣ) (ಜೂನ್–16)

A) ರಾಷ್ಟ್ರೀಯ ಅಭಿವೃದ್ಧಿ ಮಂಡಳಿ B) ಯೋಜನಾ ಆಯೋಗ C) ನೀತಿ ಆಯೋಗ D) ಪ್ರಧಾನಮಂತ್ರಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

5. ಆರ್ಥಿಕ ಸ್ಥಿರತೆ ಎಂದರೇನು? (ಸಾಧಾರಣ)
6. ಸಾಮಾಜಿಕ ನ್ಯಾಯ ಎಂದರೇನು? (ಕಠಿಣ)
7. ಆರ್ಥಿಕ ಯೋಜನೆ ಎಂದರೇನು? (ಸಾಧಾರಣ)
8. ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನವರನ್ನು 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಎಂದು ಏಕೆ ಕರೆಯಲಾಗುತ್ತಿದೆ? (ಸಾಧಾರಣ) (ಜೂನ್–2018)
9. ಹಸಿರುಕ್ರಾಂತಿ ಎಂದರೇನು? (ಸುಲಭ)
10. 'ಸುಗ್ಗಿ ನಂತರದ ತಂತ್ರಜ್ಞಾನ' ಎಂದರೇನು? (ಸಾಧಾರಣ) (ಜೂನ್–2017, ರಾ.ಪೂ–2017)
11. 'ಎರಡನೇ ಹಸಿರು ಕ್ರಾಂತಿ' ಅಥವಾ 'ಸದಾ ಹಸಿರು ಕ್ರಾಂತಿ' ಎಂದರೇನು? (ಕಠಿಣ)

III. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ,

12. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ಬರೆಯಿರಿ. (ಸಾಧಾರಣ) (ಜೂನ್–2018, 2023, 2024, ರಾ.ಪೂ–2016, 2018)
13. ನೀತಿ ಆಯೋಗದ ಧ್ಯೇಯಗಳು ಯಾವುವು? (ಸಾಧಾರಣ)
14. ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ಪಟ್ಟಿ ಮಾಡಿರಿ. / ಪಂಚವಾರ್ಷಿಕ ಯೋಜನೆಗಳ ಜಾರಿಯಿಂದ ದೇಶ ಅಭಿವೃದ್ಧಿಯತ್ತ ಸಾಗುತ್ತಿದೆ. ಸಮರ್ಥಿಸಿ. (ಸಾಧಾರಣ) (ಪರೀಕ್ಷೆ–2–2024)
15. ಹಸಿರುಕ್ರಾಂತಿಗೆ ಪ್ರೇರಣೆಯಾದ ಅಂಶಗಳಾವುವು? (ಸಾಧಾರಣ) (ಏಪ್ರಿಲ್–2023, ಪರೀಕ್ಷೆ–1–2024, ಮಾದರಿ–2023, 2024)

ಅರ್ಥಶಾಸ್ತ್ರ, ಅಧ್ಯಾಯ– 16

ಗ್ರಾಮೀಣಾಭಿವೃದ್ಧಿ

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಉತ್ತರವಾಗಿ ಬರೆಯಿರಿ.

1. ರಾಷ್ಟ್ರೀಯ ಆದಾಯಕ್ಕೆ ಪ್ರಾಥಮಿಕ ವಲಯದ ಕೊಡುಗೆಯು, (ಸುಲಭ)

A) ಹೆಚ್ಚಳವಾಗುತ್ತಿದೆ B) ಕ್ರಮೇಣ ಕಡಿಮೆ ಆಗುತ್ತಿದೆ C) ಸಮವಾಗಿದೆ D) ಹೆಚ್ಚು ಕಡಿಮೆ ಆಗುತ್ತಿದೆ

2. 'ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು. (ಸುಲಭ) (ಏಪ್ರಿಲ್– 2015, ಏಪ್ರಿಲ್– 2017, ಏಪ್ರಿಲ್–2018, ಸಪ್ಟೆಂಬರ್–2021, ಮಾರ್ಚ್–2021, ಜುಲೈ–2022)

A) ಮಹಾತ್ಮ ಗಾಂಧಿ B) ಸರ್ ಎಂ ವಿಶ್ವೇಶ್ವರಯ್ಯ C) ಜವಾಹರ್ ಲಾಲ್ ನೆಹರು D) ಡಾ॥ ಬಿ.ಆರ್ ಅಂಬೇಡ್ಕರ್

3. ಸಂವಿಧಾನದ ಎಷ್ಟನೆಯ ತಿದ್ದುಪಡಿಯ ಮೂಲಕ ಏಕರೂಪದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ (ಸುಲಭ) (ಸಪ್ಟೆಂಬರ್– 2021, ಏಪ್ರಿಲ್– 2019, ಮಾದರಿ– 2019, ಏಪ್ರಿಲ್– 2019)

A) 42 ನೇ B) 46ನೇ C) 73ನೇ D) 74ನೇ

4. ಪಂಚಾಯತ್ ರಾಜ್ ಸಂಸ್ಥೆಗಳು ಈ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ (ಸಾಧಾರಣ)

A) ಸಮಾಜವಾದಿ B) ಪ್ರಜಾಪ್ರಭುತ್ವ C) ನಿರಂಕುಶಪ್ರಭುತ್ವ D) ರಾಜಪ್ರಭುತ್ವ

5. ಗ್ರಾಮಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಈ ಯೋಜನೆ ಸಹಕಾರಿ (ಕಠಿಣ) (ಮಾದರಿ –2024)

A) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ B) ಸ್ವರ್ಣ ಜಯಂತಿ ಗ್ರಾಮ ಸ್ವ–ರೋಜ್ ಗಾರ್ ಯೋಜನೆ.
C) ಸುವರ್ಣ ಗ್ರಾಮೋದಯ ಯೋಜನೆ. D) ಇಂದಿರಾ ಆವಾಸ್ ಯೋಜನೆ

6. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಿ, ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಇವುಗಳನ್ನು ಅಸ್ತಿತ್ವಕ್ಕೆ ತರಲಾಗಿದೆ, (ಸಾ)

A) ಮಹಿಳಾ ಸ್ವಸಹಾಯ ಸಂಘ (ಸ್ತ್ರೀಶಕ್ತಿ ಸಂಘ) B) ಸುಕನ್ಯಾ ಸಮೃದ್ಧಿ C) ಸ್ತ್ರೀ ಸಮೃದ್ಧಿ D) ಸ್ತ್ರೀ ಅಭ್ಯುದಯ

7. ಗ್ರಾಮ ಸ್ವರಾಜ್ಯದ ಕಲ್ಪನೆ ನೀಡಿದವರು (ಸಾಧಾರಣ) (ಜುಲೈ –2021)

A) ಜವಾಹರ್ ಲಾಲ್ ನೆಹರು. B) ಬಾಲ ಗಂಗಾಧರ್ ತಿಲಕ್ C) ಸರ್ದಾರ್ ವಲ್ಲಭಭಾಯಿ ಪಟೇಲ್ D) ಮಹಾತ್ಮ ಗಾಂಧೀಜಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

8. ಗ್ರಾಮೀಣಾಭಿವೃದ್ಧಿಯ ಅರ್ಥವನ್ನು ತಿಳಿಸಿ. (ಸಾಧಾರಣ) (ಮಾದರಿ 3–2025)

9. ಗ್ರಾಮಸ್ವರಾಜ್ಯ ಎಂದರೇನು? (ಸಾಧಾರಣ) (ಜುಲೈ– 2021)

10. ಅಧಿಕಾರ ವಿಕೇಂದ್ರೀಕರಣ ಎಂದರೇನು? (ಸುಲಭ) (ಪರೀಕ್ಷೆ 2– 2024, ರಾಪೂ–2022, ಮಾದರಿ– 2022)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ

11. ಪಂಚಾಯತ್ ರಾಜ್ ವ್ಯವಸ್ಥೆಯ ಮೂರು ಹಂತದ ಸಂಸ್ಥೆಗಳು ಯಾವುವು? (ಸಾಧಾರಣ)

12. ವಸತಿ ಯೋಜನೆಗಳನ್ನು ಹೆಸರಿಸಿ. (ಸುಲಭ)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ

13. ಗ್ರಾಮೀಣ ಪ್ರದೇಶದ ಆರ್ಥಿಕ ಸ್ಥಿತಿಯನ್ನು ವಿವರಿಸಿ. (ಸಾಧಾರಣ)

14. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ತಿಳಿಸಿ. (ಸಾಧಾರಣ) (ಏಪ್ರಿಲ್– 2015, ಏಪ್ರಿಲ್– 2016, ಏಪ್ರಿಲ್ –2018, ಪರೀಕ್ಷೆ 3– 2024, ರಾಪೂ–2016, 2017 ,2018, ಮಾದರಿ 1– 2021)

15. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ತಿಳಿಸಿ. / ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಹೇಗೆ ಸಹಾಯಕವಾಗಿದೆ?/ ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ದೃಢೀಕರಿಸಿ. (ಸುಲಭ) (ಜೂನ್– 2017, 2018, 2023. ಪರೀಕ್ಷೆ 2– 2024, ರಾಪೂ –2022, 2023,2024, ಮಾದರಿ 1,2–2020)

16. ಮಹಿಳೆಯರ ಬಲವರ್ಧನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ವಿವರಿಸಿ. (ಸುಲಭ) (ಜೂನ್–2020, ಏಪ್ರಿಲ್–2023, ಮಾದರಿ–2–2021)

17. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ./ ಅಧಿಕಾರ ವಿಕೇಂದ್ರೀಕರಣ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯಗತ್ಯವಾಗಿದೆ. ಏಕೆ?/ (ಸಾಧಾರಣ) (ಏಪ್ರಿಲ್ –2017, ಮಾದರಿ– 2021, 2023.)

ಅರ್ಥಶಾಸ್ತ್ರ, ಅಧ್ಯಾಯ– 17

ಸಾರ್ವಜನಿಕ ಹಣಕಾಸು ಹಾಗೂ ಆಯ–ವ್ಯಯ

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಉತ್ತರವಾಗಿ ಬರೆಯಿರಿ.

1. ಭಾರತದಲ್ಲಿ ಹಣಕಾಸು ವರ್ಷವು ಮುಕ್ತಾಯವಾಗುವುದು, (ಸಾಧಾರಣ) (ಜೂನ್– 2017, ಪರೀಕ್ಷೆ 2– 2024, ರಾಪೂ– 2018)

A) ಏಪ್ರಿಲ್ 1 B) ಜನವರಿ 1 C) ಮಾರ್ಚ್ 31 D) ಡಿಸೆಂಬರ್ 31

2. ಕೇಂದ್ರ ಸರ್ಕಾರದ ಆಯವ್ಯಯವನ್ನು ಮಂಡಿಸುವವರು. (ಸಾಧಾರಣ) (ಏಪ್ರಿಲ್– 2018, ಏಪ್ರಿಲ್– 2016)

A) ರಾಷ್ಟ್ರಾಧ್ಯಕ್ಷರು B) ಪ್ರಧಾನ ಮಂತ್ರಿ C) ರಾಜ್ಯ ಹಣಕಾಸು ಸಚಿವರು D) ಕೇಂದ್ರ ಹಣಕಾಸು ಸಚಿವರು.

3. ಅಭಿವೃದ್ಧಿ ಹೊಂದುತ್ತಿರುವ ಸರ್ಕಾರಗಳು ಸಾಮಾನ್ಯವಾಗಿ ಈ ರೀತಿಯ ಆಯವ್ಯಯವನ್ನು ಮಂಡಿಸುತ್ತವೆ. (ಕಠಿಣ) (ಜೂನ್– 2023)

A) ಉಳಿತಾಯ B) ಸಮತೋಲಿತ C) ಕೊರತೆಯ D) ಅಭಿವೃದ್ಧಿಯ

4. ಇದು ಪ್ರತ್ಯಕ್ಷ ತೆರಿಗೆಗೆ ಉದಾಹರಣೆಯಾಗಿದೆ (ಸಾಧಾರಣ) (ಮಾದರಿ 1– 2025)

A) ಆಮದು ರಫ್ತು ತೆರಿಗೆ B) ಸರಕು ಮತ್ತು ಸೇವಾ ತೆರಿಗೆ C) ಕಂಪನಿ ತೆರಿಗೆ D) ಮೇಲಿನ ಯಾವುದೂ ಅಲ್ಲ

5. ಭಾರತದಲ್ಲಿ ಕಡ್ಡಾಯವಾಗಿ ಈ ದಿನಾಂಕಕ್ಕೆ ಮೊದಲೇ ಆಯವ್ಯಯಕ್ಕೆ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. (ಕಠಿಣ) (ಮಾದರಿ 4– 2025)

A) ಏಪ್ರಿಲ್ 1 B) ಜನವರಿ 1 C) ಮಾರ್ಚ್ 31 D) ಡಿಸೆಂಬರ್ 31

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ,

6. ವೈಯಕ್ತಿಕ ಹಣಕಾಸು ಎಂದರೇನು? (ಸುಲಭ)
7. ಸಾರ್ವಜನಿಕ ಹಣಕಾಸು ಎಂದರೇನು? (ಸಾಧಾರಣ)
8. ಆಯ–ವ್ಯಯ (ಮುಂಗಡ ಪತ್ರ) ಎಂದರೇನು? (ಸುಲಭ) (ಜೂನ್–2015, ಜೂನ್– 2018)
9. ಕೊರತೆಯ ಆಯ–ವ್ಯಯ ಎಂದರೇನು? (ಸಾಧಾರಣ) (ಜೂನ್–2023)
10. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಕೊರತೆಯ ಆಯವ್ಯಯವನ್ನೇ ಏಕೆ ಮಂಡಿಸುತ್ತವೆ? (ಕಠಿಣ)
11. ಸಾಮಾಜಿಕ ಸೇವೆಗಳಿಗೆ ಎರಡು ಉದಾಹರಣೆಗಳನ್ನು ಕೊಡಿ. (ಸುಲಭ)
12. ಯೋಜನೇತರ ವೆಚ್ಚಕ್ಕೆ ಉದಾಹರಣೆ ಕೊಡಿ (ಸಾಧಾರಣ)
13. ವಿತ್ತೀಯ ನೀತಿ/ ಕೋಶೀಯ ನೀತಿ ಎಂದರೇನು? (ಕಠಿಣ) (ಪರೀಕ್ಷೆ 1– 2024)
14. ಪ್ರತ್ಯಕ್ಷ ತೆರಿಗೆ ಎಂದರೇನು? (ಸಾಧಾರಣ)
15. ಯೋಜನಾ ವೆಚ್ಚ ಎಂದರೇನು? (ಸುಲಭ)
16. ಆಂತರಿಕ ಸಾಲ ಎಂದರೇನು? (ಸಾಧಾರಣ)
17. ಪ್ರಗತಿಪರ ತೆರಿಗೆ ನೀತಿ ಎಂದರೇನು? (ಕಠಿಣ)

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

18. ಆಯವ್ಯಯದ ವಿಧಗಳನ್ನು ಹೆಸರಿಸಿ. (ಸುಲಭ)
19. ಆರ್ಥಿಕ ಸೇವೆಗಳು ಯಾವುವು? (ಸಾಧಾರಣ)
20. ತೆರಿಗೆ ಆದಾಯ ಎಂದರೇನು? ಒಂದು ಉದಾಹರಣೆ ಕೊಡಿ. (ಸುಲಭ)
21. ಪ್ರತ್ಯಕ್ಷ ತೆರಿಗೆಗಳನ್ನು ಹೆಸರಿಸಿ. (ಸುಲಭ) (ರಾಪೂ–2023)

IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ

22. ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸಿನ ವ್ಯತ್ಯಾಸಗಳಾವುವು? (ಸಾಧಾರಣ)(ಜೂನ್–2015, ಪ–2–2024, ರಾ.ಮ–2017)
23. ಕೇಂದ್ರ ಸರಕಾರದ ತೆರಿಗೆಯೇತರ ಆದಾಯದ ಮೂಲಗಳು ಯಾವುವು? (ಕಠಿಣ) (ಏಪ್ರಿಲ್–2015, ಏಪ್ರಿಲ್–2023, ಜೂನ್–2016, ಜೂನ್–2019, ರಾ.ಮ–2019, 2023, 2024)
24. ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಯ ವ್ಯತ್ಯಾಸಗಳೇನು? (ಸಾಧಾರಣ)
25. ಸಾರ್ವಜನಿಕ ಹಣಕಾಸಿನ/ ಕೋಶೀಯ ನೀತಿಯ/ ವಿತ್ತೀಯ ನೀತಿಯ ಮಹತ್ವವನ್ನು ವಿವರಿಸಿ. (ಸಾಧಾರಣ) (ಜೂನ್– 2017, ಜೂನ್–2023, ಪರೀಕ್ಷೆ 1–2024, ಪರೀಕ್ಷೆ 3–2024, ರಾಪೂ– 2016)
26. ಯೋಜನಾ ವೆಚ್ಚಗಳನ್ನು ಪಟ್ಟಿ ಮಾಡಿ. (ಸಾಧಾರಣ)

ವ್ಯವಹಾರ ಅಧ್ಯಯನ, ಅಧ್ಯಾಯ– 16

ಬ್ಯಾಂಕ್ ವ್ಯವಹಾರಗಳು

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಉತ್ತರವಾಗಿ ಬರೆಯಿರಿ.

1. 'ಬ್ಯಾಂಕ್'ಎಂಬ ಪದ ಇಟಾಲಿಯನ್ ಭಾಷೆಯ ಈ ಪದದಿಂದ ಬಂದಿದೆ (ಸುಲಭ)

A) ಬ್ಯಾಂಕ್ B) ಬ್ಯಾಂಕೊ C) ಬಾಂಚು D) ಬ್ಯಾಂಚೊ

2. ಭಾರತದ ಕೇಂದ್ರ ಬ್ಯಾಂಕು (ಬ್ಯಾಂಕುಗಳ ಬ್ಯಾಂಕು) ಎಂದು ಇದನ್ನು ಕರೆಯುತ್ತಾರೆ (ಸುಲಭ)

A) ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ B) ಸಿಂಡಿಕೇಟ್ ಬ್ಯಾಂಕ್ C) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ D) ಕೆನರಾ ಬ್ಯಾಂಕ್

3. ಒಂದು ನಿಯಮಿತ ಆದಾಯ ಹೊಂದಿರುವ ಹಿರಿಯ ನಾಗರಿಕರು, ಪಿಂಚಣಿದಾರರು ಈ ಖಾತೆಯನ್ನು ತೆರೆಯುತ್ತಾರೆ, (ಸಾಧಾರಣ)

A) ಉಳಿತಾಯ ಖಾತೆ B) ಚಾಲ್ತಿ ಖಾತೆ C) ಆವರ್ತ ಠೇವಣಿ ಖಾತೆ D) ನಿಶ್ಚಿತ ಠೇವಣಿ ಖಾತೆ

4. ಭವಿಷ್ಯದ ಆವಶ್ಯಕತೆಗಳಾದ ಮಕ್ಕಳ ವಿವಾಹ, ಬೆಲೆ ಬಾಳುವ ವಸ್ತುಗಳ ಖರೀದಿ, ನೆಲ, ಕಾರು ಮುಂತಾದವುಗಳನ್ನು ಕೊಳ್ಳಲು ತೆರೆಯಬಹುದಾದ ಖಾತೆ (ಸಾಧಾರಣ) (ಜೂನ್–2024)

A) ನಿಶ್ಚಿತ ಠೇವಣಿ ಖಾತೆ B) ಆವರ್ತ ಠೇವಣಿ ಖಾತೆ C) ಚಾಲ್ತಿ ಖಾತೆ D) ಉಳಿತಾಯ ಖಾತೆ

5. ರಾಷ್ಟ್ರೀಯ ಉಳಿತಾಯ ಪತ್ರವನ್ನು ಈ ಇಲಾಖೆ ನೀಡುತ್ತದೆ (ಸುಲಭ) (ಜೂನ್–2023)

A) ಅಂಚೆ ಇಲಾಖೆ B) ಕೃಷಿ ಇಲಾಖೆ C) ಹಣಕಾಸು ಇಲಾಖೆ D) ಶಿಕ್ಷಣ ಇಲಾಖೆ

6. ದಿನವೊಂದಕ್ಕೆ ಎಷ್ಟು ಬಾರಿಯಾದರೂ ಹಣ ತುಂಬಲು ಮತ್ತು ಹಣ ಹಿಂಪಡೆಯಲು ಅವಕಾಶ ಇರುವ ಬ್ಯಾಂಕ್ ಖಾತೆ (ಸುಲಭ) (ಜೂನ್–2022)

A) ಚಾಲ್ತಿ ಖಾತೆ B) ಉಳಿತಾಯ ಖಾತೆ C) ಆವರ್ತ ಠೇವಣಿ ಖಾತೆ D) ನಿಶ್ಚಿತ ಠೇವಣಿ ಖಾತೆ

7. ಈ ಬ್ಯಾಂಕ್ ಖಾತೆಯ ಠೇವಣಿಗಳಿಗೆ ಬಡ್ಡಿಯನ್ನು ನೀಡದೇ, ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲಿ ಮಾಡಲಾಗುತ್ತದೆ (ಸಾಧಾರಣ) (ಏಪ್ರಿಲ್–2023)

A) ಆವರ್ತ ಠೇವಣಿ ಖಾತೆ B) ನಿಶ್ಚಿತ ಠೇವಣಿ ಖಾತೆ C) ಚಾಲ್ತಿ ಖಾತೆ D) ಉಳಿತಾಯ ಖಾತೆ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ,

8. ಭಾರತದಲ್ಲಿ ಬ್ಯಾಂಕುಗಳ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸುವ ಬ್ಯಾಂಕ್ ಯಾವುದು? (ಸಾಧಾರಣ)

9. ಜನರು ತಮ್ಮ ಒಡವೆ ಮತ್ತು ಬೆಲೆಬಾಳುವ ವಸ್ತುಗಳನ್ನು ಸಂರಕ್ಷಿಸಿಡಲು ಬ್ಯಾಂಕುಗಳಿಂದ ಪಡೆಯುವ ಸೇವೆ ಯಾವುದು? (ಸಾಧಾರಣ) (ಜೂನ್–2023)

10. ATM ಅನ್ನು ವಿಸ್ತರಿಸಿ (ಸಾಧಾರಣ)

11. ಬ್ಯಾಂಕ್ ಪದ ಫ್ರೆಂಚ್ ಭಾಷೆಯ ಯಾವ ಶಬ್ಧದಿಂದ ಬಂದಿದೆ? (ಸುಲಭ)

III. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ

12. ಬ್ಯಾಂಕುಗಳ ಗುಣಲಕ್ಷಣಗಳಾವುವು? (ಕಠಿಣ)

13. ಬ್ಯಾಂಕುಗಳ ವಿಧಗಳನ್ನು ತಿಳಿಸಿ. (ಸಾಧಾರಣ)

14. ಬ್ಯಾಂಕಿನ ಕಾರ್ಯಗಳನ್ನು ತಿಳಿಸಿ. (ಕಠಿಣ)

15. ಬ್ಯಾಂಕುಗಳು ಸಲ್ಲಿಸುವ ಸೇವೆಗಳು ಯಾವುವು? (ಕಠಿಣ)

16. ಬ್ಯಾಂಕಿನ ಕಾರ್ಯಗಳು/ ಬ್ಯಾಂಕುಗಳ ಸೇವೆಗಳು/ ಬ್ಯಾಂಕ್ ಖಾತೆ ತೆಗೆಯುವುದರಿಂದಾಗುವ ಅನುಕೂಲಗಳಾವುವು? (ಸಾಧಾರಣ) (ಜೂನ್–2022, ಸೆಪ್ಟೆಂಬರ್–2022, ಏಪ್ರಿಲ್–2023, ಜೂನ್–2024, ಆಗಸ್ಟ್–2024, ಏಪ್ರಿಲ್–2025, ಜೂನ್–2025)

17. ಅಂಚೆ ಕಚೇರಿಗಳ ಹಣಕಾಸು ವ್ಯವಹಾರಗಳಾವುವು? (ಕಠಿಣ) (ಜೂನ್–2020, ಏಪ್ರಿಲ್–2024)

18. ಬ್ಯಾಂಕು ಖಾತೆ ತೆಗೆಯುವ ಹಂತಗಳನ್ನು ಅಥವಾ ವಿಧಾನವನ್ನು ತಿಳಿಸಿ./ ನೀವು ಬ್ಯಾಂಕ್ ಖಾತೆಯನ್ನು ತೆರೆಯಬೇಕಾದರೆ ಅನುಸರಿಸಬೇಕಾದ ಹಂತಗಳನ್ನು ತಿಳಿಸಿ. (ಸಾಧಾರಣ) (ಸೆಪ್ಟೆಂಬರ್ –2020, ಸೆಪ್ಟೆಂಬರ್ –2022, ಜೂನ್–2023)

19. ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳ ನಡುವಿನ ವ್ಯತ್ಯಾಸಗಳಾವುವು? (ಸಾಧಾರಣ)

ವ್ಯವಹಾರ ಅಧ್ಯಯನ, ಅಧ್ಯಾಯ– 32

ಉದ್ಯಮಶೀಲತೆ

I. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ,

1. ಉದ್ಯಮಿ ಎಂಬ ಪದ ಫ್ರೆಂಚ್ ಭಾಷೆಯ ಯಾವ ಪದದಿಂದ ಬಂದಿದೆ? (ಸುಲಭ)

2. ಉದ್ಯಮಿ ಎಂದರೆ ಯಾರು? (ಸಾಧಾರಣ)

3. ಉದ್ಯಮಶೀಲತೆ ಎಂದರೇನು? (ಸಾಧಾರಣ)

4. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಸ್ಥಾಪನೆಯಾದ ವರ್ಷ ಯಾವುದು? (ಸುಲಭ)

5. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆಯ ಉದ್ದೇಶವೇನು? (ಕಠಿಣ) (ಜೂನ್–2024)

II. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ

6. ಉದ್ಯಮಶೀಲತೆ/ ಉದ್ಯಮಿಯ ಗುಣಲಕ್ಷಣಗಳಾವುವು?/ ಯಶಸ್ವಿ ಉದ್ಯಮಗಾರನ ಗುಣಲಕ್ಷಣಗಳನ್ನು ಪಟ್ಟಿ ಮಾಡಿ. (ಸಾಧಾರಣ) (ಸೆಪ್ಟೆಂಬರ್–2022) (ಏಪ್ರಿಲ್–2023)

7. ಉದ್ಯಮಿಯ ಕಾರ್ಯಗಳನ್ನು ತಿಳಿಸಿ? (ಸಾಧಾರಣ)

8. ಉದ್ಯಮಶೀಲತೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ. ಈ ಹೇಳಿಕೆಯನ್ನು ಸಮರ್ಥಿಸಿ. (ಕಠಿಣ) (ಜೂನ್–2020) (ಜೂನ್–2023) (ಜೂನ್–2024) (ಆಗಸ್ಟ್– 2024) (ಏಪ್ರಿಲ್–2025)

9. ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರವೇನು?/ ಉದ್ಯಮದಾರರು ದೇಶದ ಆರ್ಥಿಕತೆಯಲ್ಲಿ ಹೇಗೆ ಪ್ರಮುಖ ಪಾತ್ರ ವಹಿಸುತ್ತಾರೆ? (ಕಠಿಣ) (ಸೆಪ್ಟೆಂಬರ್–2020) (ಜೂನ್–2022) (ಜೂನ್–2025)

10. ಉದ್ಯಮಿಗಳಿಗೆ ಸ್ವಂತ ಉದ್ಯೋಗ ಕೈಗೊಳ್ಳಲು ಇರುವ ಅವಕಾಶಗಳು ಯಾವುವು? (ಸಾಧಾರಣ)

11. ಸ್ವಯಂ ಉದ್ಯೋಗಕ್ಕೆ ಸಾಲ ನೀಡುವ ಸಂಸ್ಥೆಗಳಾವುವು? (ಕಠಿಣ)

12. ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ. (ಕಠಿಣ)

13. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಒದಗಿಸುವ ಸೇವೆಗಳಾವುವು? (ಕಠಿಣ)

ವ್ಯವಹಾರ ಅಧ್ಯಯನ, ಅಧ್ಯಾಯ– 33

ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1. ಪ್ರತಿ ವರ್ಷ ವಿಶ್ವ ಗ್ರಾಹಕರ ಹಕ್ಕುಗಳ ದಿನವನ್ನು ಎಂದು ಆಚರಿಸಲಾಗುತ್ತದೆ? (ಸುಲಭ) ಏಪ್ರಿಲ್–2024, ಜೂನ್–2024)

A) ಸೆಪ್ಟೆಂಬರ್ 15 B) ಜನವರಿ 15 C) ಮಾರ್ಚ್ 15 D) ಡಿಸೆಂಬರ್ 15

2. ದೂರುಗಳ ಮೌಲ್ಯವು ಒಂದು ಕೋಟಿ ರೂಪಾಯಿಗಳಿಗಿಂತ ಕಡಿಮೆ ಆಗಿದ್ದರೆ ಈ ಆಯೋಗಕ್ಕೆ ಸಲ್ಲಿಸಬೇಕು. (ಸುಲಭ) (ಆಗಸ್ಟ್–2024, ಏಪ್ರಿಲ್–2023, ಏಪ್ರಿಲ್–2025)

A) ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ B) ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

C) ತಾಲ್ಲೂಕು ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ D) ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

3. "ಮಾರುಕಟ್ಟೆಯ ರಾಜ" ಎಂದು ಕರೆಯಲ್ಪಡುವವನು (ಸುಲಭ)

A) ಗ್ರಾಹಕ B) ಉತ್ಪಾದಕ C) ಪೂರೈಕೆದಾರ D) ವಿತರಕ

II. ಈ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ

4. ಟೆಲಿಶಾಪಿಂಗ್ ಎಂದರೇನು? (ಸಾಧಾರಣ) (ಏಪ್ರಿಲ್–2024)
5. ಗ್ರಾಹಕರ ರಕ್ಷಣೆಯ ಅಗತ್ಯವೇನು? (ಸಾಧಾರಣ)
6. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ? (ಸಾಧಾರಣ)
7. ಗ್ರಾಹಕ ಸಂರಕ್ಷಣಾ ಕಾಯಿದೆ ಜಾರಿಗೆ ಬಂದ ವರ್ಷ? (ಸುಲಭ) (ಸೆಪ್ಟೆಂಬರ್–2022)

III. ಕೆಳಗಿನ ಪ್ರಶ್ನೆಗಳಿಗೂ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ

8. ಬಳಕೆದಾರರ ಶೋಷಣೆಗೆ ಕಾರಣಗಳಾವುವು? (ಕಠಿಣ) (ಆಗಸ್ಟ್–2024, ಜೂನ್–2022, ಜೂನ್–2023)
9. ಪ್ರತಿ ವರ್ಷವು ಮಾರ್ಚ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ. ಏಕೆ? (ಸಾಧಾರಣ) (ಜೂನ್–2024, ಜೂನ್–2020, ಸೆಪ್ಟೆಂಬರ್–2020)

IV. ಕೆಳಗಿನ ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.

10. ಗ್ರಾಹಕ ಸಂರಕ್ಷಣಾ ಕಾಯಿದೆಯ ಮುಖ್ಯ ಉದ್ದೇಶಗಳಾವುವು?
11. ಗ್ರಾಹಕ ಸಂರಕ್ಷಣಾ ಕಾಯಿದೆಯು ಗ್ರಾಹಕ ಹಿತಾಸಕ್ತಿಗಳನ್ನು ಹೇಗೆ ಕಾಪಾಡುತ್ತದೆ? ಅಥವಾ ಗ್ರಾಹಕರ ಸಂರಕ್ಷಣಾ ಕಾಯಿದೆಯ ಗ್ರಾಹಕರಿಗೆ ನೀಡಿರುವ ಹಕ್ಕುಗಳು ಯಾವುವು? (ಕಠಿಣ)
12. ಗ್ರಾಹಕ ಆಯೋಗಕ್ಕೆ/ ನ್ಯಾಯಾಲಯಕ್ಕೆ ದೂರು ಸಲ್ಲಿಸುವ ವಿಧಾನವನ್ನು ತಿಳಿಸಿ. (ಸಾಧಾರಣ)

ಮಾದರಿ ಉತ್ತರಗಳು

ಇತಿಹಾಸ, ಅಧ್ಯಾಯ 1

ಭಾರತಕ್ಕೆ ಯೂರೋಪಿಯನ್ನರ ಆಗಮನ

1. B) ಕಾನ್‌ಸ್ಟಾಂಟಿನೋಪಲ್
2. A) ವಾಸ್ಕೋಡಗಾಮ
3. B) ಫ್ರಾನ್ಸಿಸ್ಕೊ ಡಿ ಆಲ್ಮೇಡ
4. B) ಏಕ್ಸ್–ಲಾ–ಚಾಪೆಲ್
5. D) ಫಾರೂಕ್ ಸಿಯಾರ್

6. ರಾಬರ್ಟ್ ಕ್ಲೈವ್
7. ಭೂಮಿಯ ಮೇಲಿನ ಅಧಿಪತ್ಯದ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ ನೀತಿಯೇ ನೀಲಿ ನೀರಿನ ನೀತಿ.
8. ಅಟೋಮನ್ ಟರ್ಕರು
9. ಆಲ್ಫೋನ್ಸೊ–ಡಿ–ಅಲ್ಬುಕರ್ಕ್
10. ಪ್ಯಾರಿಸ್ ಒಪ್ಪಂದ
11. ಪಾಂಡಿಚೇರಿ
12. ಕಾಪ್ಪಡ್
13. ಕೊಚ್ಚಿ

14. ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು.
- ಅವರು ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು.
- ಇದರಿಂದ ವರ್ತಕರಿಗೆ ವ್ಯಾಪಾರ ಲಾಭದಾಯಕವಾಗಲಿಲ್ಲ.
- ಯುರೋಪಿನ ರಾಜರು ನಾವಿಕರಿಗೆ ನೀಡಿದ ಪ್ರೋತ್ಸಾಹ.
- ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್, ಸಿಡಿಮದ್ದು ಮೊದಲಾದವುಗಳು.

15. ರಾಬರ್ಟ್ ಕ್ಲೈವನು 'ಬಂಗಾಳ'ದಲ್ಲಿ ಜಾರಿಗೆ ತಂದನು.
- ಬ್ರಿಟಿಷರು ಭೂಕಂದಾಯ ವಸೂಲಿ ಹಕ್ಕು ಹೊಂದಿದ್ದರು.
- ಬಂಗಾಳದ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.

16. 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.
- ಫ್ರೆಂಚರು ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡರು.
- ಫ್ರೆಂಚರಿಗೆ ರಾಜಕೀಯ ಹಿನ್ನಡೆಯನ್ನು ತಂದುಕೊಟ್ಟಿತು.
- ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಿತು.

17. ಐರ್ ಕೂಟ್ ನು ಫ್ರೆಂಚರನ್ನು ಸೋಲಿಸಿ ಬುಸ್ಸಿಯನ್ನು ಸೆರೆಹಿಡಿದನು.
- ಫ್ರೆಂಚರು ಭಾರತದಲ್ಲಿ ತಮ್ಮ ನೆಲೆಗಳನ್ನು ಕಳೆದುಕೊಂಡರು.
- ಪ್ಯಾರಿಸ್ ಒಪ್ಪಂದ ಪ್ರಕಾರ ಪಾಂಡಿಚೇರಿಯನ್ನು ಫ್ರೆಂಚರಿಗೆ ಹಿಂತಿರುಗಿಸಲಾಯಿತು.
- ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು.

18. ಮೀರ್ ಖಾಸಿಂ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತಗೊಳಿಸಿದನು.
- ಪರಿಣಾಮವಾಗಿ ಬ್ರಿಟಿಷರ ವ್ಯಾಪಾರಕ್ಕೆ ಹೊಡೆತ ಬಿದ್ದಿತು.
- ಬ್ರಿಟಿಷರು ಮೀರ್ ಖಾಸಿಂನನ್ನು ಇಳಿಸಿ ಮೀರ್ ಜಾಫರ್‌ನನ್ನು ನವಾಬನನ್ನಾಗಿ ಮಾಡಿದರು.
- ಮೀರ್ ಖಾಸಿಂನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು.

19. ಎರಡನೇ ಷಾಆಲಂ ಈಸ್ಟ್‌ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ನೀಡಿದನು.
- ಷಾ ಆಲಂ ವಾರ್ಷಿಕ 26 ಲಕ್ಷರೂಪಾಯಿ ಪಡೆದು ಬಂಗಾಳದ ಮೇಲಿನ ಹಕ್ಕನ್ನು ಬಿಟ್ಟುಕೊಡಬೇಕಾಯಿತು.
- ಔದ್‌ನ ನವಾಬ ಕಂಪನಿಗೆ ಯುದ್ಧ ನಷ್ಟ ಪರಿಹಾರವಾಗಿ 50 ಲಕ್ಷ ರೂ. ಕೊಡಬೇಕಾಯಿತು.
- ಮೀರ್ ಜಾಫರನ ಮಗನಿಗೆ ವಿಶ್ರಾಂತಿ ವೇತನ ನೀಡಿದರು.

• ಬಂಗಾಳದ ಪೂರ್ಣ ಆಡಳಿತ ಕಂಪನಿಗೆ ಒಳಪಟ್ಟಿತು.
• ರಾಬರ್ಟ್ ಕ್ಲೈವ್ ದ್ವಿಸರ್ಕಾರವನ್ನು ಜಾರಿಗೆ ತಂದನು.

20. ಪ್ಲಾಸಿ ಕದನಕ್ಕೆ ಕಾರಣಗಳು

• ದಸ್ತಕ್‌ಗಳ ದುರುಪಯೋಗ
• ಅನುಮತಿ ಇಲ್ಲದೆ ಕೋಟೆಯ ದುರಸ್ಥಿ
• ಕಪ್ಪುಕೋಣೆ ದುರಂತ

ಪ್ಲಾಸಿ ಕದನದ ಪರಿಣಾಮಗಳು

• ಮೀರ್ ಜಾಫರ್ ಬಂಗಾಳದ ನವಾಬನಾದನು.
• ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
• ಮೀರ್ ಜಾಫರ್ ಕಂಪನಿಗೆ 17 ಕೋಟಿ 70 ಲಕ್ಷ ರೂ. ನೀಡಿದನು.
• ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ವ್ಯಾಪಾರಿ ವರ್ಗದ ಲೋಭಿತನವನ್ನು ಪ್ರದರ್ಶಿಸಿತು.

21. 1758ರವರೆಗೆ ವೈನಾಡ್ ಸಂಸ್ಥಾನವನ್ನು ಆಳಿದನು.

• ಡಚ್ಚರಿಂದ ತನ್ನ ಸಂಸ್ಥಾನವನ್ನು ರಕ್ಷಿಸಿದನು.
• ರಾಜಧಾನಿಯನ್ನು ತಿರುವನಂತಪುರಕ್ಕೆ ಸ್ಥಳಾಂತರಿಸಿದನು.
• ಕರಿಮೆಣಸಿನ ವ್ಯಾಪಾರದಲ್ಲಿ ಹಿಡಿತ ಸಾಧಿಸುತ್ತಿದ್ದ ಡಚ್ಚರನ್ನು ತಡೆಗಟ್ಟಿದನು.
• ಡಚ್ಚರು ತಿರುವಾಂಕೂರಿನ ಮೇಲೆ ಆಕ್ರಮಣ ಮಾಡಿದಾಗ ಡಚ್ ಕೂಟವನ್ನು ಸೋಲಿಸಿದನು.
• ನೆಡುಮಂಗಡ ಮತ್ತು ಕೊಟ್ಟಾರಕರ ವ್ಯಾಪಾರಿ ಕೇಂದ್ರಗಳನ್ನು ವಶಪಡಿಸಿಕೊಂಡನು.
• 1741ರಲ್ಲಿ ಡಚ್ಚರು ತಿರುವಾಂಕೂರಿನ ಮೇಲೆ ಯುದ್ಧ ಸಾರಿದರು.
• ಮಾರ್ತಾಂಡವರ್ಮ ಡಚ್ಚರನ್ನು ಹಿಮ್ಮೆಟ್ಟಿಸಿದನು.
• 1753ರ ಒಪ್ಪಂದದ ಪ್ರಕಾರ ಡಚ್ಚರು ಸಂಪೂರ್ಣ ಅಧಿಕಾರವನ್ನು ಒಪ್ಪಿಸಿ ಶರಣಾದರು.

****

ಇತಿಹಾಸ, ಅಧ್ಯಾಯ– 2
ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

1. B) ಸಾಲ್ ಬಾಯ್
2. B) ಲಾರ್ಡ್ ವೆಲ್ಲೆಸ್ಲಿ
3. A) ಹೈದರಾಬಾದ್
4. D) ಪ್ರತಾಪಸಿಂಹ
5. A) ಲಾರ್ಡ್ ಡಾಲ್ ಹೌಸಿ
6. A) ಲಾರ್ಡ್ ಡಾಲ್‌ಹೌಸಿ
7. A) ಬೆಸ್ಸಿನ್

8. ರಣಜಿತ್ ಸಿಂಗ್
9. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದ.
10. ಲಾರ್ಡ್ ವೆಲ್ಲೆಸ್ಲಿಯ ಯುದ್ಧಪ್ರಿಯ ನೀತಿಯಿಂದ ಕಂಪನಿಯ ಸಾಲದ ಹೊರೆ ಹೆಚ್ಚಿ, ಟೀಕೆಗೆ ಒಳಗಾಗಿ ರಾಜಿನಾಮೆ ನೀಡಿದನು.
11. ಪೇಶ್ವೆಯು ಪೂನಾ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ಮಾಡಿದ್ದು.
12. ರಣಜಿತ್ ಸಿಂಗ್‌ನ ಮರಣ.
13. ಎರಡನೇ ಮಾಧವರಾವ್

14. ಯುದ್ಧಗಳು

• ಸಹಾಯಕ ಸೈನ್ಯ ಪದ್ಧತಿ
• ದತ್ತುಮಕ್ಕಳಿಗೆಹಕ್ಕಿಲ್ಲ ನೀತಿ

15. ಮೊಘಲ್ ಚಕ್ರವರ್ತಿ ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು.

♦ ಮರಾಠರು ಮತ್ತು ಬ್ರಿಟಿಷರ ಮಧ್ಯೆ ವೈರತ್ವ ಉಂಟಾಯಿತು.
♦ ಪೇಶ್ವೆಯ ಸ್ಥಾನಕ್ಕೆ ಏರ್ಪಟ್ಟ ಕಲಹ.
16. ಮರಾಠ ಮನೆತನಗಳು ತಮ್ಮ ಘನತೆ, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ನಡೆಸಿದ ಪ್ರಯತ್ನಗಳು.
♦ ಪೇಶ್ವೆ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸಿದ್ದು.
♦ ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ಪೇಶ್ವೆಯು ದಾಳಿ ಮಾಡಿದ್ದು.
17. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿದರು.
♦ ಬಾಜಿರಾಯನಿಗೆ ವಿಶ್ರಾಂತಿವೇತನ ನೀಡಿದರು.
♦ ಶಿವಾಜಿಯ ವಂಶಸ್ಥ ಪ್ರತಾಪಸಿಂಹನನ್ನು ಸತಾರಾದಲ್ಲಿ ಪ್ರತಿಷ್ಠಾಪಿಸಿದರು.
♦ ಈ ಮೂಲಕ ಮರಾಠರ ಪ್ರತಿರೋಧವನ್ನು ನಿಗ್ರಹಿಸಿದರು.
18. ಯಾವುದೇ ಭಾರತೀಯ ರಾಜನು ಮಕ್ಕಳಿಲ್ಲದೆ ಸತ್ತರೆ, ಅವನ ದತ್ತು ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ
♦ ಅಂತಹ ರಾಜ್ಯವನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳಲಾಗುತ್ತಿತ್ತು.
♦ ಸತಾರಾ, ಜೈಪುರ್, ಸಂಬಲ್‌ಪುರ, ಉದಯಪುರ, ಝಾನ್ಸಿ, ನಾಗಪುರಗಳು ಬ್ರಿಟಿಷರ ವಶವಾದವು
19. ಮೂಲ್ ರಾಜ್ ಮತ್ತು ಚಟ್ಟಾರಿಸಿಂಗ್ ಅಟ್ಟಾರಿವಾಲ.

20. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
♦ ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು.
♦ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
♦ ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
♦ ಯಾವುದೇ ರಾಜ್ಯದೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಬ್ರಿಟಿಷರ ಸಮ್ಮತಿ ಬೇಕು.
♦ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

****

ಇತಿಹಾಸ, ಅಧ್ಯಾಯ 3
ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

1. 1773ರ ರೆಗ್ಯುಲೇಟಿಂಗ್ ಶಾಸನ
2. ಲಾರ್ಡ್ ಕಾರ್ನ್ ವಾಲೀಸ್
3. ಲಾರ್ಡ್ ಡಾಲ್ ಹೌಸಿ
4. 1909ರ ಭಾರತೀಯ ಪರಿಷತ್ ಕಾಯಿದೆ
5. ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.
6. ಲಾರ್ಡ್ ಕಾರ್ನ್‌ವಾಲೀಸ್
7. ಮೆಕಾಲೆ ವರದಿ

8. ವಿಲಿಯಂ ಬೆಂಟಿಂಕ್
9. ಆರ್. ಎಂ .ಬರ್ಡ್ ಮತ್ತು ಜೇಮ್ಸ್ ಥಾಮ್ಸನ್
10. ಲಾರ್ಡ್ ಕ್ಯಾನಿಂಗ್
11. ನಾಗರಿಕ ನ್ಯಾಯಾಲಯಗಳು
12. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಪರವಾನಿಗೆಯನ್ನು ವಿಸ್ತರಿಸುವುದು
13. ಸುಬೇದಾರ್
14. ಚಾರ್ಲ್ಸ್ ಮೆಟ್ಕಾಫ್
15. 1935ರ ಭಾರತ ಸರ್ಕಾರದ ಕಾಯ್ದೆ

16) ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆ ಹೆಚ್ಚಳ.

♦ ಪ್ರಾಂತ್ಯಗಳ ಶಾಸನ ಸಭೆಗಳ ಸದಸ್ಯರ ಸ್ಥಾನಗಳ ಹೆಚ್ಚಳ

♦ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಗೆ ಅವಕಾಶ.

♦ ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ.

♦ ಮುಸ್ಲಿಂರಿಗೆ "ಪ್ರತ್ಯೇಕ ಚುನಾವಣಾ ಮತಗಟ್ಟೆ" ಜಾರಿಗೆ.

17) ಬ್ರಿಟಿಷರ ಆಡಳಿತದಲ್ಲಿ ಸೈನ್ಯವು ಆಧಾರಸ್ತಂಭವಾಗಿತ್ತು.

♦ ಭಾರತೀಯರನ್ನೇ ಸೈನ್ಯದಲ್ಲಿ ಸೇರಿಸಿಕೊಂಡರು.

♦ ಅವರ ನೆರವಿನಿಂದ ಭಾರತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು.

♦ ಸೈನ್ಯವನ್ನು ಬಳಸಿ ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿಕೊಂಡರು

18) ಅಲೆಕ್ಸಾಂಡರ್ ರೀಡ್ ಮತ್ತು ಥಾಮಸ್ ಮನ್ರೋ ಜಾರಿಗೊಳಿಸಿದರು

♦ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಲಾಯಿತು

♦ ಸರ್ಕಾರ ಮತ್ತು ರೈತರ ನಡುವೆ ನೇರ ಸಂಪರ್ಕವಿತ್ತು

♦ ರೈತರೇ ಭೂ ಮಾಲೀಕರಾದರು

♦ ಉತ್ಪನ್ನದ ಶೇಕಡ 50ರಷ್ಟು ಭಾಗವನ್ನು ಕಂದಾಯವಾಗಿ ನಿಗದಿಗೊಳಿಸಲಾಯಿತು

♦ ರೈತರು ಸಾಲದ ಸುಳಿಗೆ ಸಿಲುಕಿದರು

19) ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ ಹಾಗೂ ವೈಜ್ಞಾನಿಕ ಆಲೋಚನಾ ಕ್ರಮದ ಬೆಳವಣಿಗೆ.

♦ ರಾಷ್ಟ್ರೀಯವಾದಿ ದೃಷ್ಟಿಕೋನದ ಬೆಳವಣಿಗೆ

♦ ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗೆ ಪ್ರೋತ್ಸಾಹ

♦ ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯಲಾರಂಭಿಸಿದವು

♦ ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು

♦ ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ ಉಂಟಾಯಿತು

♦ ಭಾರತೀಯ ಸಾಂಸ್ಕೃತಿಕ ಪರಂಪರೆಗಳ ಅರಿವು ಉಂಟಾಯಿತು.

20) ರೈತರನ್ನು ಶೋಷಿಸುವ ಹೊಸ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು

♦ ರೈತರು ವಿವಿಧ ಬಗೆಯ ಸಂಕಷ್ಟಗಳಿಗೆ ಒಳಗಾದರು

♦ ಭೂಮಿ ಮಾರಾಟದ ವಸ್ತುವಾಯಿತು

♦ ಅನೇಕ ಜಮೀನ್ದಾರರು ಕೂಡ ಕಂದಾಯವನ್ನು ಸಲ್ಲಿಸಲು ಭೂಮಿಯನ್ನು ಪರಭಾರೆ ಮಾಡಿದರು

♦ ಕೃಷಿ ಕ್ಷೇತ್ರ ವಾಣಿಜ್ಯೀಕರಣಗೊಂಡಿತು

♦ ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು

21) ಕೇಂದ್ರದಲ್ಲಿ ದ್ವಿ ಸದನ ಶಾಸಕಾಂಗ ರಚಿಸಲಾಯಿತು

♦ ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೊಳಿಸಲಾಯಿತು

♦ ಭಾರತಕ್ಕೆ ಒಬ್ಬ ಹೈಕಮಿಷನರ್ ನೇಮಕ ಮಾಡಲಾಯಿತು

♦ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ

♦ ಕೇಂದ್ರದ ಬಜೆಟ್ ನಿಂದ ಪ್ರಾಂತ್ಯಗಳ ಬಜೆಟ್ ಅನ್ನು ಬೇರ್ಪಡಿಸಲಾಯಿತು

♦ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಸಿಖ್, ಆಂಗ್ಲೋ–ಇಂಡಿಯನ್ನರು ಮತ್ತು ಯುರೋಪಿಯನ್ನರಿಗೂ ವಿಸ್ತರಿಸಲಾಯಿತು.

22) 1935ರ ಭಾರತ ಸರ್ಕಾರದ ಕಾಯಿದೆ ಭಾರತ ಸಂವಿಧಾನ ರಚನೆಗೆ ಬುನಾದಿ

♦ ಅಖಿಲ ಭಾರತ ಒಕ್ಕೂಟ ರಚನೆಗೆ ಅವಕಾಶ ನೀಡಿತು

♦ ಕೇಂದ್ರದಲ್ಲಿ ದ್ವಿ ಸರ್ಕಾರವನ್ನು ಸ್ಥಾಪಿಸಲಾಯಿತು

♦ ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.

♦ ಭಾರತದಲ್ಲಿ ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ ನೀಡಿತು.

♦ ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು.

23) ವಾರನ್ ಹೇಸ್ಟಿಂಗ್ಸ್ ಎರಡು ಬಗೆಯ ನ್ಯಾಯಾಲಯಗಳನ್ನು ಸ್ಥಾಪಿಸಿದನು.

♦ ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯ

♦ ನಿಜಾಮತ್ ಅದಾಲತ್ ಎಂಬ ಅಪರಾಧ ನ್ಯಾಯಾಲಯ

- ಹಿಂದೂಗಳಿಗೆ ಹಿಂದೂ ಶಾಸ್ತ್ರಗ್ರಂಥಗಳ ಪ್ರಕಾರ ನ್ಯಾಯದಾನ
- ಮುಸ್ಲಿಮರಿಗೆ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ
- ನಾಗರಿಕ ನ್ಯಾಯಾಲಯಗಳಿಗೆ ಯುರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆ
- ಅಪರಾಧ ನ್ಯಾಯಾಲಯಗಳು ಖಾಜಿಗಳ ಅಧೀನದಲ್ಲಿದ್ದವು.

****

ಇತಿಹಾಸ, ಅಧ್ಯಾಯ– 4

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

1) ಬಸಪ್ಪ ಶಾಸ್ತ್ರಿ
2) ಒಪ್ಪಂದ
3) ಯಾದಗಿರಿ
4) ನಂದಗಡ
5) ಹೈದರಾಲಿ ಬ್ರಿಟಿಷರಿಂದ ಪರಾಭವ
6) ಹತ್ತನೆಯ ಚಾಮರಾಜೇಂದ್ರ ಒಡೆಯರು
7) ನಾಲ್ವಡಿ ಕೃಷ್ಣರಾಜ ಒಡೆಯರು
8) ರಾಜ ಒಡೆಯರು

9) ರಾಜಕೀಯ ಸಮಸ್ಯೆಗಳ ಶತಮಾನ
10) ಚೆನ್ನಮ್ಮನ ಕುಮ್ಮಕ್ಕಿನಿಂದ ಸಂಗೊಳ್ಳಿ ರಾಯಣ್ಣ ಸೈನಿಕ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾನೆ ಎಂಬ ಗುಮಾನಿಯಿಂದ
11) ಮಂಗಳೂರು ಒಪ್ಪಂದ
12) ಶಸ್ತ್ರಾಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನು ಜಾರಿಗೆ ತಂದಿದ್ದರಿಂದ
13) ರಾಜ ಒಡೆಯರು

14) ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿದರು
- ರಾಜಮುಡಿ ಕಿರೀಟವನ್ನು ಮೇಲುಕೋಟೆ ಚೆಲುವನಾರಾಯಣಸ್ವಾಮಿಗೆ ಅರ್ಪಿಸಿದರು
- ಶ್ರೀರಂಗಪಟ್ಟಣದಲ್ಲಿ ನವರಾತ್ರಿ ಉತ್ಸವವನ್ನು ಆರಂಭಿಸಿದರು
- ಶ್ರೀರಂಗಪಟ್ಟಣ, ಮೈಸೂರು, ಮೇಲುಕೋಟೆ ದೇವಾಲಯಗಳ ಜೀರ್ಣೋದ್ಧಾರ

15) ಹೊಸ ರೈಲುಮಾರ್ಗಗಳ ನಿರ್ಮಾಣ
- ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ ಆರಂಭಿಸಿದರು
- ಶಿಶುವಿವಾಹ ನಿಷೇಧ ಕಾಯ್ದೆ ಜಾರಿಗೊಳಿಸಿದರು
- ಶಿಂಷಾ ಜಲವಿದ್ಯುತ್ ಯೋಜನೆ ಆರಂಭಿಸಿದರು

16) ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬ್ರಿಟಿಷರಿಗೆ ಬಿಟ್ಟು ಕೊಡುವುದು
- ಮೂರು ಕೋಟಿ ರೂಪಾಯಿಗಳನ್ನು ಯುದ್ಧ ನಷ್ಟ ಭರ್ತಿಯಾಗಿ ಕೊಡುವುದು
- ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ನೀಡುವುದು
- ಸೆರೆಯಲಿದ್ದ ಸೈನಿಕರ ಬಿಡುಗಡೆ

17) ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಶುಲ್ಕ ರದ್ದು
- ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು
- ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ
- ವಿದೇಶದಲ್ಲಿ ವಿದ್ಯಾಭ್ಯಾಸಕ್ಕೆ ಹೋಗುವವರೆಗೆ ವಿದ್ಯಾರ್ಥಿ ವೇತನ
- ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಸ್ಥಾಪನೆ
- ಕಾವೇರಿ ನದಿಗೆ ಅಣೆಕಟ್ಟು ನಿರ್ಮಾಣ
- ಹೊಸ ರೈಲು ಮಾರ್ಗಗಳ ನಿರ್ಮಾಣ
- ಸಣ್ಣ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ

♦ ನ್ಯಾಯ ವಿಧಾಯಕ ಸಭೆಯ ರಚನೆ.

18) ಕಿತ್ತೂರಿನ ಸ್ವಾತಂತ್ರಕ್ಕಾಗಿ ಹೋರಾಡುವುದು ತನ್ನ ಆದ್ಯಕರ್ತವ್ಯವೆಂದು ಭಾವಿಸಿದ್ದನು.

♦ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು

♦ ಸೈನಿಕರನ್ನು ಸಂಘಟಿಸಿದನು

♦ ಗುಪ್ತ ಸಭೆಗಳನ್ನು ನಡೆಸಿದನು

♦ ತಾಲೂಕು ಕಚೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡಿದನು

♦ ನಂದಗಡ, ಖಾನಾಪುರ ಮತ್ತು ಸಂಪಗಾವಿಗಳಲ್ಲಿ ಕಾರ್ಯಾಚರಣೆ

♦ ಬ್ರಿಟಿಷರು ರಾಯಣ್ಣನನ್ನು ಸೆರೆಹಿಡಿಯಲು ದೇಸಾಯಿಗಳನ್ನು ಪ್ರೋತ್ಸಾಹಿಸಿದರು

♦ ಸಂಚಿಗೆ ಬಲಿಯಾದ ರಾಯಣ್ಣನನ್ನು ಬ್ರಿಟಿಷರು ಬಂಧಿಸಿದರು

♦ ರಾಯಣ್ಣನನ್ನು ನಂದಗಡದಲ್ಲಿ ಗಲ್ಲಿಗೇರಿಸಲಾಯಿತು

19) ಅಮರಸುಳ್ಯ ಬಂಡಾಯ ಒಂದು ರೈತ ಬಂಡಾಯವಾಗಿದೆ.

♦ ಬ್ರಿಟಿಷರ ವಿರುದ್ಧ ಅಪರಾಂಪರ, ಕಲ್ಯಾಣಸ್ವಾಮಿ ಮತ್ತು ಪುಟ್ಟ ಬಸಪ್ಪ ಬಂಡಾಯವನ್ನು ಸಂಘಟಿಸಿದರು

♦ ಪುಟ್ಟಬಸಪ್ಪ ತಂಬಾಕು ಮತ್ತು ಉಪ್ಪಿನ ಮೇಲಿನ ಸುಂಕವನ್ನು ರದ್ದು ಮಾಡುವುದಾಗಿ ಘೋಷಿಸಿದನು

♦ ಬೆಳ್ಳಾರೆಯಲ್ಲಿದ್ದ ಸರ್ಕಾರಿ ಕಚೇರಿಯ ವಶಪಡಿಸಿಕೊಂಡನು.

♦ ಬಂಟ್ವಾಳದ ಜೈಲು ಮತ್ತು ಖಜಾನೆಗಳನ್ನು ಲೂಟಿಮಾಡಿದರು

♦ ಅಮಲ್ದಾರರನ ಹತ್ಯೆಮಾಡಿದರು

♦ ಬ್ರಿಟಿಷರು ಪುಟ್ಟಬಸಪ್ಪನನ್ನು ಸೆರೆ ಹಿಡಿದು ಗಲ್ಲಿಗೇರಿಸಿದರು.

****

ಇತಿಹಾಸ, ಅಧ್ಯಾಯ– 5

ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

1. B) ಪ್ರಾರ್ಥನಾ ಸಮಾಜ

2. A) ಸಂವಾದ ಕೌಮುದಿ

3. D) ಆರ್ಯಸಮಾಜ

4. D) ಕರ್ನಲ್ ಅಲ್ಕಾಟ್ ಮತ್ತು ಮ್ಯಾಡಮ್ ಬ್ಲಾವಟ್ಸ್ಕಿ

5. C) ಅನಿಬೆಸೆಂಟ್

6. C) ದಯಾನಂದ ಸರಸ್ವತಿ

7. C) ರಾಮ ಕೃಷ್ಣ ಪರಮಹಂಸ

8. C) ಸತ್ಯಶೋಧಕ ಸಮಾಜ

9. ಭಾರತೀಯ ಪುನರುಜ್ಜೀವನ ಕಾಲ ಹಾಗೂ ಸಮಾಜಸುಧಾರಣಾ ಕಾಲ

10. ಇ.ವಿ. ರಾಮಸ್ವಾಮಿನಾಯ್ಕರ್/ಪೆರಿಯಾರ್

11. ಆತ್ಮಾರಾಂ ಪಾಂಡುರಂಗ

12. ಜ್ಯೋತಿಬಾ ಫುಲೆ

13. ರಾಮಕೃಷ್ಣ ಪರಮಹಂಸರು

14. ಹೆನ್ರಿ ವಿವಿಯನ್ ಡಿರೋಜಿಯೋ

15. ರಾಮಕೃಷ್ಣ ಪರಮಹಂಸರ ಧ್ಯೇಯ, ಆದರ್ಶಗಳನ್ನು ಪ್ರಚಾರ ಪಡಿಸುವುದು.

16. ನಾರಾಯಣಗುರು

17. ಜ್ಯೋತಿಬಾ ಫುಲೆ

18. ಎಂ. ಜಿ. ರಾನಡೆ

19. ಸರ್ ಸಯ್ಯದ್ ಅಹಮದ್ ಖಾನ್

20. ಅಕಾಡೆಮಿಕ್ ಅಸೋಸಿಯೇಷನ್

21. ಸತಿ ಪದ್ಧತಿ ನಿಷೇಧ ಕಾಯ್ದೆ ಜಾರಿಗೆ ತರುವ ಮೂಲಕ

22. ದಯಾನಂದ ಸರಸ್ವತಿ

23. ಭಾರತೀಯರಿಗೆ ಪಾಶ್ಚಾತ್ಯ ನಾಗರಿಕತೆಯ ಸಂಪರ್ಕ ದೊರೆಯಿತು.
- ಇಂಗ್ಲೀಷ್ ವಿದ್ಯಾಭ್ಯಾಸದ ಸೌಲಭ್ಯ ದೊರೆಯಿತು.
- ಪ್ರಜಾಪ್ರಭುತ್ವ, ರಾಷ್ಟ್ರೀಯತೆ ಪರಿಕಲ್ಪನೆಗಳ ಪರಿಚಯ.
- ವೈಚಾರಿಕತೆಯ ಮನೋಭಾವ ಬೆಳೆಯಿತು.
- ಸಮಾಜದ ವಿಶ್ಲೇಷಣೆ ಹಾಗೂ ಸುಧಾರಣೆಯ ಆಸಕ್ತಿ.
- ಬ್ರಿಟಿಷ್ ಆಡಳಿತಗಾರರಿಂದ ಸುಧಾರಣಾ ಚಳವಳಿಗೆ ಬೆಂಬಲ.
- ರಾಂ ಮೋಹನರಾಯ್, ದಯಾನಂದ ಸರಸ್ವತಿ, ಜ್ಯೋತಿಬಾ ಫುಲೆ ಮೊದಲಾದವರು ಚಳವಳಿಯನ್ನು ರೂಪಿಸಿದರು.

24. ಬ್ರಹ್ಮ ಸಮಾಜದ ಸಂಸ್ಥಾಪಕರಲ್ಲಿ ಪ್ರಮುಖರು.
- 'ಭಾರತೀಯ ನವೋದಯದ ಜನಕ' ಎನಿಸಿದ್ದಾರೆ.
- ಸಂಸ್ಕೃತ, ಅರೇಬಿಕ್, ಇಂಗ್ಲಿಷ್, ಫ್ರೆಂಚ್, ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು.
- ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧಧರ್ಮಗಳ ಅಧ್ಯಯನ.
- ಮೂರ್ತಿ ಪೂಜೆಯನ್ನು ಪ್ರಶ್ನಿಸಿದರು.
- ಆಧುನಿಕ ವಿಜ್ಞಾನ ಮತ್ತು ಇಂಗ್ಲಿಷ್ ಶಿಕ್ಷಣ ಅವಶ್ಯಕವೆಂದರು
- ಸ್ತ್ರೀಶೋಷಣೆಯನ್ನು ವಿರೋಧಿಸಿದರು.
- ಸತಿಪದ್ಧತಿ, ಬಾಲ್ಯವಿವಾಹಗಳ ವಿರುದ್ಧ ಹೋರಾಟ.
- ಸತಿಸಹಗಮನ ಪದ್ಧತಿ ವಿರುದ್ಧದ ಕಾಯ್ದೆಯನ್ನು ಬೆಂಬಲಿಸಿದರು.
- 'ಸಂವಾದ ಕೌಮುದಿ' ಪತ್ರಿಕೆ ಆರಂಭಿಸಿದರು.

25. ಪಾನನಿಷೇಧವನ್ನು ಒತ್ತಾಯಿಸಿತು.
- ಸ್ತ್ರೀ–ಪುರುಷರ ಅಸಮಾನತೆ, ಮಾನವ ಹಕ್ಕುಗಳ ನಿರಾಕರಣೆ, ಶೋಷಣೆಗಳನ್ನು ವಿರೋಧಿಸಿತು.
- ಅಸ್ಪೃಶ್ಯತಾ ಆಚರಣೆಯನ್ನು ವಿರೋಧಿಸಿತು.
- ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿಯನ್ನು ನಡೆಸಿತು.
- ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ ಶಾಲೆ ತೆರೆದರು.
- ಗುಲಾಮಗಿರಿಯನ್ನು ಖಂಡಿಸಿತು.
- ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿತು.
- ರೈತಪರವಾದ ಹೋರಾಟಗಳನ್ನು ನಡೆಸಿತು.

26. ಹಿಂದೂ ಧರ್ಮದ ಆಚಾರ ವಿಚಾರಗಳ ಸುಧಾರಣೆಗೆ ಯತ್ನಿಸಿತು.
- ವಿಗ್ರಹಾರಾಧನೆ ವಿರೋಧಿಸಿತು.
- ಏಕದೇವತಾ ಆರಾಧನೆಯನ್ನು ಪ್ರೋತ್ಸಾಹಿಸಿತು.
- ಯಜ್ಞಯಾಗಾದಿಗಳನ್ನು ಖಂಡಿಸಿತು.
- ಬಹುದೇವತಾ ಆರಾಧನೆ ವಿರೋಧಿಸಿತು.
- ಭಾರತೀಯರಲ್ಲಿ ರಾಷ್ಟ್ರಪ್ರಜ್ಞೆ ಜಾಗೃತಗೊಳಿಸಲು ಸಹಾಯ.

27. ಆರ್ಯ ಸಮಾಜವನ್ನು ಸ್ಥಾಪಿಸಿದರು.
- ವೇದಗಳು ಸತ್ಯ ಮತ್ತು ಜ್ಞಾನದ ಮೂಲವೆಂದರು.
- 'ವೇದಗಳಿಗೆ ಹಿಂದಿರುಗಿ' ಎಂದು ಘೋಷಿಸಿದರು.
- ವಿಗ್ರಹಾರಾಧನೆ, ಜಾತಿಪದ್ಧತಿಯನ್ನು ಖಂಡಿಸಿದರು.
- ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು.
- ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು.
- 'ಸತ್ಯಾರ್ಥ ಪ್ರಕಾಶ' ಕೃತಿ ರಚಿಸಿದರು.
- 'ಶುದ್ಧಿ ಚಳುವಳಿ' ಆರಂಭಿಸಿದರು.
- "ಭಾರತೀಯರಿಗೇ ಭಾರತ" ಎಂದುಘೋಷಿಸಿದರು.

28. "ಮಾನವನ ಸೇವೆಯೇ ಪರಮಾತ್ಮನ ಸೇವೆ" ಎಂಬುದು ಇದರ ನೆಲೆಗಟ್ಟಾಗಿತ್ತು.
- ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಆದ್ಯತೆ ನೀಡಿತು.

* ಡೆಕ್ಕನ್ ಶಿಕ್ಷಣ ಸಂಸ್ಥೆಯ ಮೂಲಕ ಶಿಕ್ಷಣದ ಪ್ರಗತಿಗೆ ಪ್ರಯತ್ನ.
* ವಿಧವಾ ವಿವಾಹ, ಸ್ತ್ರೀಶಿಕ್ಷಣಕ್ಕೆ ಪ್ರೋತ್ಸಾಹ.
* ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಿತು.
* ಸಹಭೋಜನ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿತು.
* ಬಾಲ್ಯವಿವಾಹ, ಜಾತಿಪದ್ಧತಿ ವಿರೋಧಿಸಿತು.
* ವಿಗ್ರಹಾರಾಧನೆಗಳನ್ನು ವಿರೋಧಿಸಿತು.
* ಸರ್ವಧರ್ಮಗಳು ಸತ್ಯದ ಪ್ರತೀಕ ಎಂದಿತು.
* ಅನಾಥಾಲಯಗಳು, ರಾಷ್ಟ್ರೀಯ ಶಾಲೆಗಳು, ವಿಧವಾಶ್ರಮಗಳ ಸ್ಥಾಪನೆ.

29. ಭಾರತೀಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ.

* ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟರು.
* ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮಹತ್ವ ನೀಡಿದರು.
* ಮೋಕ್ಷಕ್ಕಾಗಿ ಸಮಾಜ ಸೇವೆಯು ಮುಖ್ಯವೆಂದರು.
* ಭಾರತದ ಸಮಾಜಕ್ಕೆ ಶೋಷಣೆ ಮುಕ್ತ ರೂಪ ನೀಡಲು ಪ್ರಯತ್ನ.
* ಪಾಶ್ಚಿಮಾತ್ಯರ ಅಂಧಾನುಕರಣೆಯನ್ನು ಬಿಡಬೇಕೆಂದರು.
* ಯುವಕರಿಗೆ ಪ್ರೇರಕ ಶಕ್ತಿಯಾಗಿದ್ದರು.

30. ಥಿಯೊಸಾಫಿಕಲ್ ಸೊಸೈಟಿಯ ಕಾರ್ಯಗಳಿಗೆ ನವಚೈತನ್ಯ.

* ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಬಿತ್ತಿದರು.
* ಸಮಾಜದಲ್ಲಿ ಸಮಾನತೆ ಮತ್ತು ವಿಶ್ವಸೋದರತೆಯನ್ನು ವೃದ್ಧಿಸಲು, ಸಾಮರಸ್ಯ ಸಾಧಿಸಲು ಪ್ರಯತ್ನ.
* ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದರು.
* 'ನ್ಯೂ ಇಂಡಿಯಾ' ಪತ್ರಿಕೆಯನ್ನು ಪ್ರಾರಂಭಿಸಿದರು.
* 1916ರಲ್ಲಿ ಹೋಂರೂಲ್ ಚಳವಳಿ ಪ್ರಾರಂಭಿಸಿದರು.
* 1917ರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷೆಯಾಗಿದ್ದರು.
* ಭಾರತೀಯ ತಾತ್ವಿಕತೆಗೆ ಮತ್ತು ಸ್ವಾತಂತ್ರ್ಯ ಚಳವಳಿಗೆ ಅಪಾರ ಕೊಡುಗೆ ನೀಡಿದರು.

31. ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣದ ಗುರಿ.

* ಸಾಮಾಜಿಕ ಪ್ರತಿರೋಧದ ಚಳವಳಿಗಳನ್ನು ಪ್ರಾರಂಭಿಸಿದರು.
* ಮನುಷ್ಯನು ಘನತೆಯಿಂದ ಬದುಕುವ ಸಮಾಜದ ನಿರ್ಮಾಣದ ಉದ್ದೇಶ.
* ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು.
* ಕೆಳಸಮುದಾಯಗಳಿಗೆ ಪ್ರವೇಶ ನಿರಾಕರಿಸುತ್ತಿದ್ದ ದೇವಾಲಯಗಳಿಗೆ ಪರ್ಯಾಯ ದೇವಾಲಯಗಳನ್ನು ಕಟ್ಟಿದರು.
* ವೈಕಂ ಸತ್ಯಾಗ್ರಹ ಎಂಬ ದೇವಾಲಯ ಪ್ರವೇಶ ಚಳವಳಿಯನ್ನು ನಡೆಸಿದರು.
* ಗುರುವಾಯೂರು ದೇವಾಲಯ ಪ್ರವೇಶ ಚಳವಳಿಯು ಮತ್ತೊಂದು ಮಹತ್ವದ ಘಟನೆ.

32. 'ಆತ್ಮಗೌರವ ಚಳವಳಿ'ಯನ್ನು ಆರಂಭಿಸಿದರು.

* 1926ರಲ್ಲಿ ಸೆಲ್ಫ್ ರೆಸ್ಪೆಕ್ಟ್ ಲೀಗ್ ಅನ್ನು ಆರಂಭಿಸಿದರು.
* ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿದರು.
* ವೈಕಂ ಹೋರಾಟದಲ್ಲಿ ಭಾಗವಹಿಸಿದ್ದರು.
* ತಮಿಳು ಭಾಷೆಯನ್ನು ದ್ರಾವಿಡರ ಭಾಷೆಯೆಂದರು.
* ಸಂಸ್ಕೃತ ಭಾಷೆ ಮತ್ತು ಸಾಹಿತ್ಯವನ್ನು ವಿರೋಧಿಸಿದರು.
* ಪೆರಿಯಾರ್ 1939ರಲ್ಲಿ ಜಸ್ಟೀಸ್ ಪಕ್ಷದ ಅಧ್ಯಕ್ಷರಾದರು.
* "ದ್ರಾವಿಡ ಕಳಗಂ" ಸಂಘಟನೆಯನ್ನು ಹುಟ್ಟುಹಾಕಿದರು.
* 'ರಿವೋಲ್ಟ್' ಪತ್ರಿಕೆಯನ್ನು ಹುಟ್ಟುಹಾಕಿದರು.
* ಬ್ರಾಹ್ಮಣೇತರ ಚಳವಳಿಯನ್ನು ಸಾಂಸ್ಕೃತಿಕ ಚಳವಳಿಯನ್ನಾಗಿಸಿದರು.
* ಸರ್ವಧರ್ಮ ಸಹಿಷ್ಣುತೆಯ ಸಮಾಜ ರೂಪುಗೊಳ್ಳಬೇಕು ಎನ್ನುವುದು ಅವರ ಧ್ಯೇಯವಾಗಿತ್ತು.

****

ಇತಿಹಾಸ, ಅಧ್ಯಾಯ– 17

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

1. C) ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ
2. C) ನಾನಾ ಸಾಹೇಬ್
3. C) ಒಬ್ಬ ಪ್ರಬಲ ನಾಯಕನನ್ನು ಹೊಂದಿರಲಿಲ್ಲ
4. D) ಸೈನಿಕರ ಲೂಟಿ ಮತ್ತು ದರೋಡೆಗಳು
5. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ
6. ಮಂಗಲಪಾಂಡೆ
7. ಗ್ವಾಲಿಯರ್
8. ಭಾರತೀಯ ಮಹಾಸನ್ನದು (ಮ್ಯಾಗ್ನಕಾರ್ಟ)
9. ಮೀರತ್‌ನಲ್ಲಿ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆಗೊಳಿಸಿದ ಘಟನೆ.
10. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯ ಜಾರಿ.

- ಸತಾರ, ಜೈಪುರ, ಝಾನ್ಸಿ, ಉದಯಪುರ ಸಂಸ್ಥಾನಗಳು ಬ್ರಿಟಿಷರ ವಶವಾದವು.
- ಮೊಘಲ್ ಚಕ್ರವರ್ತಿ, ಔದ್ ನವಾಬರ ಪದಚ್ಯುತಿ.
- ತಂಜಾವೂರು, ಕಾರ್ನಾಟಿಕ್ ನವಾಬರ ರಾಜಪದವಿ ರದ್ದು.
- ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

11. ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.

- ಭಾರತದ ಕರಕುಶಲಗಾರರು ನಿರುದ್ಯೋಗಿಗಳಾದರು.
- ಗೃಹಕೈಗಾರಿಕೆಗಳು ನಷ್ಟ ಅನುಭವಿಸಿ ಶಿಥಿಲಗೊಂಡವು.
- ಭಾರತದ ವಸ್ತುಗಳ ಮೇಲೆ ದುಬಾರಿ ಸುಂಕವನ್ನು ಹೇರಿದರು.
- ಜಮೀನ್ದಾರನು ಕೃಷಿಕರನ್ನು ಶೋಷಿಸುತ್ತಿದ್ದನು.
- ಕೃಷಿಕರು ಆರ್ಥಿಕ ಸಂಕಷ್ಟ ಅನುಭವಿಸಿದರು.
- ಇನಾಂ ಆಯೋಗದ ಮೂಲಕ ಇನಾಂ ಭೂಮಿ ಹಿಂಪಡೆಯಲಾಯಿತು.

12. ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳು ಜಾರಿ.

- ಕಾನೂನಿನಲ್ಲಿ ಪಕ್ಷಪಾತ ಇತ್ತು.
- ಭಾರತೀಯರಿಗೆ ಪ್ರತ್ಯೇಕ ನಿಯಮಗಳಿದ್ದವು.
- ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು.
- ನ್ಯಾಯಾಧೀಶರಿಂದ ಇಂಗ್ಲಿಷರ ಪರವಾಗಿ ನ್ಯಾಯದಾನ.
- ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

13. ಭಾರತೀಯ ಸಿಪಾಯಿಗಳ ಸ್ಥಿತಿ ಶೋಚನೀಯವಾಗಿತ್ತು.

- ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.
- ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.
- 'ರಾಯಲ್ ಎನ್‌ಫೀಲ್ಡ್' ಬಂದೂಕುಗಳ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ.

14. ಇಡೀ ಭಾರತವನ್ನು ವ್ಯಾಪಿಸಿದ ಹೋರಾಟವಾಗಿರಲಿಲ್ಲ.

- ರಾಜರ ಮತ್ತು ಜಮೀನ್ದಾರರ ಸ್ವಹಿತಾಸಕ್ತಿಗಾಗಿ ನಡೆದಿತ್ತು.
- ಯೋಜಿತ ಹೋರಾಟವಾಗಿರಲಿಲ್ಲ.
- ಭಾರತೀಯ ಸೈನಿಕರಲ್ಲಿದ್ದ ಭಿನ್ನತೆ.
- ಸೂಕ್ತ ಮಾರ್ಗದರ್ಶನವಿರಲಿಲ್ಲ.
- ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು.
- ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ ಇತ್ತು.
- ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.
- ಹಲವು ದೇಶೀಯ ರಾಜರು ಬ್ರಿಟಿಷರಿಗೆ ನಿಷ್ಠೆ ತೋರಿದರು.

• ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳಿಂದ ಜನರ ವಿಶ್ವಾಸ ಕಳೆದುಕೊಂಡರು.

15. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡಿತು.

• ಭಾರತವು ಬ್ರಿಟಿಷ್ ರಾಣಿಯ ಆಡಳಿತಕ್ಕೆ ಒಳಪಟ್ಟಿತು.

• ಭಾರತದ ವ್ಯವಹಾರವನ್ನು ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.

• 1858ರಲ್ಲಿ ಬ್ರಿಟನ್ ರಾಣಿ ಘೋಷಣೆ ಹೊರಡಿಸಿದರು.

• ಭಾರತೀಯರ ಪ್ರೀತಿ, ಬೆಂಬಲ, ವಿಶ್ವಾಸವಿಲ್ಲದಿದ್ದರೆ ಶಾಂತಿಯಿಂದ ಆಳಲು ಸಾಧ್ಯವಿಲ್ಲವೆಂದು ಅರಿತರು.

• ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯನ್ನು ನೀಡಿತು.

16. ಎರಡು ಅಂಕದ ಪ್ರಶ್ನೋತ್ತರಗಳನ್ನು ಗಮನಿಸಿ.

17. ಎರಡು ಅಂಕದ ಪ್ರಶ್ನೋತ್ತರಗಳನ್ನು ಗಮನಿಸಿ.

****

ಇತಿಹಾಸ, ಅಧ್ಯಾಯ– 18

ಸ್ವಾತಂತ್ರ್ಯ ಹೋರಾಟ

1. ಎ. ಓ. ಹ್ಯೂಮ್
2. ಬಾಲ ಗಂಗಾಧರ ತಿಲಕ್
3. 1923
4. ಸುಭಾಷ್ ಚಂದ್ರ ಬೋಸ್
5. ದಾದಾಬಾಯಿ ನವರೋಜಿ
6. ಜವಾಹರಲಾಲ್ ನೆಹರು
7. ಗೋಪಾಲಕೃಷ್ಣ ಗೋಖಲೆ
8. ಬ್ರೀಟಿಷರ ವಿರುದ್ಧ ಹೋರಾಟಗಳ್ನು ಧಮನಗೊಳಿಸಲು
9. ಜಯ ಪ್ರಕಾಶ್ ನಾರಾಯಣ್
10. ಸುಭಾಸ್ ಚಂದ್ರ ಭೋಸ್
11. ನೀಲಿ ಬೆಳೆಗಾರರನ್ನು ಬೆಂಬಲಿಸಲು
12. ಖಿಲಾಪತ್
13. ಲಾರ್ಡ ಲಿಟ್ಟನ್
14. 1885
15. ಬಾಲ ಗಂಗಾಧರ ತಿಲಕ್
16. ಅನುಶೀಲನ ಸಮಿತಿ ಮತ್ತು ಅಭಿನವ ಭಾರತ
17. ಮಹಮ್ಮದ್ ಅಲಿ ಮತ್ತು ಶೌಕತ್ ಅಲಿ
18. ಪಂಡಿತ ಜವಾಹರಲಾಲ್ ನೆಹರು
19. 1942
20. ಸುಭಾಷ್ ಚಂದ್ರ ಬೋಸ್
21. ಡಾ. ಬಿ.ಆರ್. ಅಂಬೇಡ್ಕರ್
22. ಜವಾಹರಲಾಲ್ ನೆಹರು
23. ಲಾರ್ಡ್ ಮೌಂಟ್ ಬ್ಯಾಟನ್
24. ರ್‍ಯಾಡ್‌ಕ್ಲಿಫ್ ಆಯೋಗ
25. ಮಹಮದ್ ಅಲಿ ಜಿನ್ನಾ
26. ಬಾಲ ಗಂಗಾಧರ ತಿಲಕ್

27. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು ಮಂದಗಾಮಿ ಯುಗ ಎನ್ನುವರು.

• ಪ್ರಾರ್ಥನೆ ಮತ್ತು ಮನವಿಗಳ ಮೂಲಕ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು.

• ದಾದಾಬಾಯಿ ನವರೋಜಿ, ಎಂ.ಜಿ.ರಾನಡೆ. ಗೋಪಾಲಕೃಷ್ಣ ಗೋಖಲೆ, ಸುರೇಂದ್ರನಾಥ ಬ್ಯಾನರ್ಜಿ ಪ್ರಮುಖರು.

- ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು.
- ಜನರಿಗೆ ರಾಜಕೀಯ ಶಿಕ್ಷಣ ನೀಡುವ ಪ್ರಯತ್ನ ಮಾಡಿದರು.
- ಸೈನಿಕ ವೆಚ್ಚ ಕಡಿತ, ಕೈಗಾರಿಕೆಗಳ ಅಭಿವೃದ್ಧಿ, ಉತ್ತಮ ಶಿಕ್ಷಣ ಕೊಡುವುದು ಪ್ರಮುಖ ಬೇಡಿಕೆಗಳಾಗಿದ್ದವು.
- ಬ್ರಿಟಿಷ್ ಆಳ್ವಿಕೆಯಿಂದಾಗಿ ದುಷ್ಪರಿಣಾಮಗಳನ್ನು ಅವಲೋಕಿಸಲು ಪ್ರಯತ್ನಿಸಿದರು.
- ಭಾರತದ ಸಂಪತ್ತು ಇಂಗ್ಲೆಂಡಿಗೆ ಸೋರಿ ಹೋಗುತ್ತಿರುವುದನ್ನು ವಿವರಿಸಿದರು.

28. ದಾದಾಬಾಯಿ ನವರೋಜಿಯವರು ಭಾರತದ ಸಂಪತ್ತು ಇಂಗ್ಲೆಂಡಿಗೆ ಸೋರಿ ಹೋಗುವ ಸಂಪತ್ತಿನ ಬಗ್ಗೆ ವಿಶ್ಲೇಷಿಸಿದರು.

- ಆಮದು ಹೆಚ್ಚಿಸಿ, ರಫ್ತು ಕಡಿಮೆಯಾಗಿದ್ದು ಸಂಪತ್ತಿನ ಹರಿವಿಗೆ ಕಾರಣ.
- ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ.
- ನಿವೃತ್ತಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸುತ್ತಿದ್ದುದರಿಂದ ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿದು ಹೋಗುತ್ತಿತ್ತು.

29. ಮಂದಗಾಮಿಗಳನ್ನು ರಾಜಕೀಯ ಭಿಕ್ಷುಕರು ಎಂದು ಕರೆದರು.

- ಅರಬಿಂದೋ ಘೋಷ್, ಬಾಲ ಗಂಗಾಧರ ತಿಲಕ, ಬಿಪಿನ್ ಚಂದ್ರಪಾಲ್ ಪ್ರಮುಖರು.
- ಸ್ವದೇಶಿ ಚಳುವಳಿಯನ್ನು ದೇಶದಾದ್ಯಂತ ಕೊಂಡೊಯ್ದರು.
- ಉತ್ತಮ ಆಳ್ವಿಕೆಯು ಸ್ವಯಂ ಆಳ್ವಿಕೆಗೆ ಪರ್ಯಾಯವಾಗಲಾರದೆಂದರು.
- ಪೂರ್ಣ ಸ್ವರಾಜ್ಯ ಪಡೆಯುವುದೇ ಗುರಿಯಾಗಿತ್ತು.
- ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿದರು.
- ಗಣೇಶ, ಶಿವಾಜಿ, ದುರ್ಗಾಪೂಜೆಗಳ ಮೂಲಕ ರಾಷ್ಟ್ರೀಯತೆಗೆ ಪ್ರಚೋದಿಸಿದರು.
- ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸಲು ಪ್ರಯತ್ನಿಸಿದರು.

30. ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು.

- ಹಿಂಸಾತ್ಮಕ ಮಾರ್ಗದಿಂದ ಮಾತ್ರ ಬ್ರಿಟಿಷರನ್ನು ಓಡಿಸಬಹುದೆಂದು ನಂಬಿದ್ದರು.
- ವಿ.ಡಿ.ಸಾವರ್ಕರ್, ಅರಬಿಂದೋ ಘೋಷ್, ಶ್ಯಾಮ್ ಜಿ ಕೃಷ್ಣವರ್ಮ, ಖುದಿರಾಮ್ ಬೋಸ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್.
- ರಹಸ್ಯ ಸಂಘಗಳ ಸ್ಥಾಪನೆ
- ಅನುಶೀಲನ ಸಮಿತಿ, ಅಭಿನವ ಭಾರತ ಮುಖ್ಯವಾದವು.
- ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ
- ಹಣಕಾಸು ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹಣೆ
- ಕ್ರಾಂತಿಕಾರಿಗಳಿಗೆ ತರಬೇತಿ ನೀಡಿದರು
- ಕ್ರಾಂತಿಕಾರಿಗಳನ್ನು ಗಲ್ಲಿಗೇರಿಸಲಾಯಿತು.

31. 1920ರಲ್ಲಿ ಗಾಂಧೀಜಿಯವರು ಅಸಹಕಾರ ಚಳವಳಿಗೆ ಕರೆಯಿತ್ತರು..

- ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದುರಿಗಿಸಿದರು.
- ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ತೊರೆದರು.
- ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು.
- ಬ್ರಿಟನ್ ರಾಜಕುಮಾರನ ಭಾರತದ ಭೇಟಿಗೆ ವಿರೋಧ.
- ಚಳವಳಿಯಿಂದ ಬ್ರಿಟಿಷ್ ಸರ್ಕಾರಕ್ಕೆ ಆತಂಕ ಉಂಟಾಯಿತು.
- ಚೌರಿಚೌರ ಘಟನೆ ನಡೆಯಿತು.
- ಗಾಂಧೀಜಿಯವರು ಚಳವಳಿಯನ್ನು ಹಿಂತೆಗೆದುಕೊಂಡರು.

32. ಸಂಪೂರ್ಣ ಸ್ವರಾಜ್ಯದ ಗುರಿ ಸಾಧನೆಗಾಗಿ ಹಮ್ಮಿಕೊಳ್ಳಲಾಯಿತು.

- ಚಳವಳಿಯ ಪೂರ್ಣ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ವಹಿಸಲಾಯಿತು.
- ಗಾಂಧೀಜಿ ಹನ್ನೊಂದು ಬೇಡಿಕೆಗಳನ್ನು ವೈಸ್‌ರಾಯ್‌ಗೆ ಸಲ್ಲಿಸಿದರು.
- ವೈಸ್‌ರಾಯ್ ಈ ಬೇಡಿಕೆಗಳನ್ನು ಪರಿಗಣಿಸಲಿಲ್ಲ.
- ಗಾಂಧೀಜಿ ತಮ್ಮ ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ದಂಡಿಯವರೆಗೆ ಕ್ರಮಿಸಿದರು.
- ಕಡಲತೀರದಲ್ಲಿ ಉಪ್ಪು ತಯಾರಿಸಿ ಕಾನೂನುಭಂಗ ಚಳವಳಿ ಪ್ರಾರಂಭಿಸಿದರು
- ಚಳವಳಿ ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು.
- ನಾಯಕರು ಸೇರಿದಂತೆ ಸಾವಿರಾರು ಜನರ ಬಂಧನ.

33. ಕ್ರಿಪ್ಸ್ ಆಯೋಗದ ಸಲಹೆಗಳನ್ನು ಕಾಂಗ್ರೆಸ್ ಒಪ್ಪಲಿಲ್ಲ.
• ಕಾಂಗ್ರೆಸ್ ಕ್ವಿಟ್ ಇಂಡಿಯಾ ಚಳವಳಿಗೆ ಕರೆ ನೀಡಿತು.
• 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎನ್ನುವುದು ಈ ಚಳವಳಿಯ ಆಶಯವಾಗಿತ್ತು.
• ಗಾಂಧೀಜಿಯವರು 'ಮಾಡು ಇಲ್ಲವೇ ಮಡಿ' ಎಂದು ಕರೆ ನೀಡಿದರು.
• ಗಾಂಧೀಜಿ ಹಾಗೂ ಅನೇಕ ನಾಯಕರನ್ನು ಬ್ರಿಟಿಷ್ ಸರ್ಕಾರವು ಬಂಧಿಸಿತು.
• ಹೊಸನಾಯಕರುಗಳ ಉದಯಕ್ಕೆ ಈ ಹೋರಾಟ ಎಡೆಮಾಡಿಕೊಟ್ಟಿತು.
• ಕಾಂಗ್ರೆಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು.
• ಜಯಪ್ರಕಾಶ್ ನಾರಾಯಣರವರು ಚಳವಳಿಯ ನೇತೃತ್ವವನ್ನು ವಹಿಸಿಕೊಂಡರು.
• ಸಮಾಜವಾದಿಗಳು 'ದಿ ಫ್ರೀಡಂ ಸ್ಟ್ರಗಲ್ ಫ್ರಂಟ್' ದಾಖಲೆಯ ಮೂಲಕ ತಮ್ಮ ಕಾರ್ಯತಂತ್ರದ ಅನುಷ್ಠಾನ.
• ಮುಸ್ಲಿಂ ಲೀಗ್ ಚಳವಳಿಯಲ್ಲಿ ಭಾಗವಹಿಸಲಿಲ್ಲ.

34. **<u>ರೈತರ ಪ್ರತಿಭಟನೆ</u>**
• ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು.
• ಭೂಕಂದಾಯದ ವಿರುದ್ದ ಹರತಾಳ ನಡೆಸಿದರು.
• ತೆಲಂಗಾಣದ ರೈತರು ಜಮೀನ್ದಾರರು ಹಾಗೂ ನಿಜಾಮನ ರಜಾಕಾರರ ವಿರುದ್ಧ ಪ್ರತಿಭಟಿಸಿದರು.
• ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ ಎದ್ದರು.
• ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳವಳಿ ನಡೆಸಿದರು.

<u>ಕಾರ್ಮಿಕ ಬಂಡಾಯ</u>
• ಕಾರ್ಮಿಕರ ಹೋರಾಟವು ಕಲ್ಕತ್ತದಲ್ಲಿ ಆರಂಭವಾಯಿತು.
• ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗತೊಡಗಿದರು.
• ರೈಲ್ವೆ ಕೂಲಿಗಳು ಹೆಚ್ಚಿನ ಕೂಲಿಗಾಗಿ ಘೋಷಣೆಗಳನ್ನು ಕೂಗಿದರು.
• ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆಗೊಂಡಿತು.

35. ಬ್ರಿಟಿಷರ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗಳಿಗೆ ಪ್ರೇರಣೆಯಾದವು.
• ಸಂತಾಲರ ದಂಗೆ ಮತ್ತು ಮುಂಡ ಚಳುವಳಿ ಪ್ರಮುಖವಾಗಿವೆ.
• ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯವು ಗಮನಾರ್ಹವಾಗಿದೆ.
• ಖಾಯಂ ಜಮೀನ್ದಾರಿ ಪದ್ಧತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು.
• ಸಂತಾಲರು ರಹಸ್ಯ ಸಭೆಗಳನ್ನು ನಡೆಸಿದರು.
• ಜಮೀನ್ದಾರರು ಮತ್ತು ಮಹಾಜನರನ್ನು ಲೂಟಿಮಾಡಲು ನಿರ್ಧರಿಸಿದರು.
• ದಂಗೆಯು ಬಾರಹತ್, ಬಾಗತಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು.
• ಜಮೀನ್ದಾರರು ಮತ್ತು ಲೇವಾದೇವಿದಾರರು ಪಲಾಯನ ಮಾಡಿದರು.
• ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು.
• ಸಂತಾಲರ ದಂಗೆಯು ಮುಂದಿನ ಅನೇಕ ಹೋರಾಟಗಳಿಗೆ ಪ್ರೇರಣೆಯಾಯಿತು.

36. ನೇತಾಜಿ ಎಂದು ಜನಪ್ರಿಯರಾಗಿದ್ದರು.
• ವಿದೇಶದಲ್ಲಿದ್ದ ಭಾರತೀಯರನ್ನು ಸಂಘಟಿಸುವ ಪ್ರಯತ್ನ.
• ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆ.
• ಹರಿಪುರ ಹಾಗೂ ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದರು
• 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದರು.
• ಆಜಾದ್ ಹಿಂದ್ ರೇಡಿಯೋ ಮೂಲಕ ಭಾಷಣಗಳನ್ನು ಪ್ರಸರಣ ಮಾಡಿದರು.
• ಐ.ಎನ್.ಎ. ಯ ಮುಖಂಡತ್ವವನ್ನು ವಹಿಸಿದರು.
• ದೆಹಲಿ ಚಲೋಗೆ ಕರೆಯನ್ನು ನೀಡಿದರು.
• ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು.
• ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು.

37. ಸಾಮಾಜಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯ ಅರ್ಥಹೀನ.

• ಜಾತಿ ವ್ಯವಸ್ಥೆಯ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು.
• ದೇಶದ ಮೊದಲ ಕಾನೂನು ಮಂತ್ರಿಯಾಗಿದ್ದರು.
• 'ಮಹಾಡ್ ಕೆರೆ' ಮತ್ತು 'ಕಾಲಾರಾಂ' ಚಳವಳಿಗಳನ್ನು ರೂಪಿಸಿದರು.
• ಪ್ರಬುದ್ಧ ಭಾರತ, ಜನತಾ, ಮೂಕನಾಯಕ ಪತ್ರಿಕೆಗಳನ್ನು ಹೊರಡಿಸಿದರು.
• ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.
• ಭಾರತದ ಪ್ರಥಮ ಕಾನೂನು ಮಂತ್ರಿಯಾದರು.
• ಸಂವಿಧಾನದಲ್ಲಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆ ಒದಗಿಸಿದರು.
• ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿದೆ.

38. ಭಾರತದ ಮೊದಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು.
• ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿದ್ದಾರೆ.
• ದೇಶೀಯ ಸಂಸ್ಥಾನಗಳ ವಿಲೀನಿಕರಣಕ್ಕೆ ಕಾರಣರಾದರು.
• ಭಾಷಾವಾರು ಪ್ರಾಂತ್ಯಗಳ ರಚನೆ.
• ಪಂಚಶೀಲ ತತ್ವಗಳ ಮೇಲೆ ವಿದೇಶಾಂಗ ನೀತಿ ರೂಪಿಸಿದರು.
• ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು.
• ಅಲಿಪ್ತ ನೀತಿಯನ್ನು ಪ್ರತಿಪಾದಿಸಿದರು.
• ಮಿಶ್ರ ಆರ್ಥಿಕ ನೀತಿಯನ್ನು ಜಾರಿಗೆ ತಂದರು.

****

ಇತಿಹಾಸ, ಅಧ್ಯಾಯ– 19

ಸ್ವಾತಂತ್ರೋತ್ತರ ಭಾರತ

1. B) ಮೌಂಟ್ ಬ್ಯಾಟನ್ ವರದಿ
2. D) ಜಾತ್ಯತೀತ– ಸಮಾಜವಾದಿ
3. C) ಸರ್ದಾರ್ ವಲ್ಲಭಭಾಯ್ ಪಟೇಲ್
4. D) 1973

5. ಡಾ. ಬಾಬು ರಾಜೇಂದ್ರ ಪ್ರಸಾದ್
6. 1950 **ಜನವರಿ** 26
7. 1987
8. ಡಾ.ಫಜಲ್ ಅಲಿ
9. ಆಂಧ್ರ ಪ್ರದೇಶ
10. 2006

11. ನಿರಾಶ್ರಿತರ ಸಮಸ್ಯೆ
• ಕೋಮು ಗಲಭೆಗಳು
• ಸರ್ಕಾರದ ರಚನೆ
• ದೇಶಿಯ ಸಂಸ್ಥಾನಗಳ ವಿಲೀನೀಕರಣ
• ಆಹಾರದ ಉತ್ಪಾದನೆ
• ಕೃಷಿ ಮತ್ತು ಕೈಗಾರಿಕೆ ಅಭಿವೃದ್ದಿ

12. ಸ್ವಾತಂತ್ರ್ಯಾ ನಂತರವೂ ಪಾಂಡಿಚೇರಿ, ಕಾರೈಕಲ್, ಮಾಹೆ, ಚಂದ್ರನಗರಗಳು ಫ್ರೆಂಚರ ವಸಾಹತುಗಳಾಗಿದ್ದವು.
• ಫ್ರೆಂಚರು ಇವುಗಳ ಮೇಲಿನ ಹಿಡಿತವನ್ನು ಮತ್ತಷ್ಟು ಹೆಚ್ಚಿಸಿದರು.
• ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಇತರ ಸಂಘಟನೆಗಳಿಂದ ಹೋರಾಟ.
• 1954ರಲ್ಲಿ ಭಾರತಕ್ಕೆ ಸೇರ್ಪಡೆ.
• 1962ರಲ್ಲಿ ಪಾಂಡಿಚೇರಿ ಕೇಂದ್ರಾಡಳಿತ ಪ್ರದೇಶವಾಯಿತು.

13. ಹೈದರಾಬಾದ್ ನಿಜಾಮನ ಅಧೀನದಲ್ಲಿತ್ತು
- ಸ್ವತಂತ್ರವಾಗಿ ಉಳಿಯಲು ನಿರ್ಧಾರ
- ಕಮ್ಯುನಿಸ್ಟರ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟ
- ನಿಜಾಮ ಹಾಗೂ ರಜಾಕರ ಪಡೆಗಳ ವಿರುದ್ದ ವ್ಯಾಪಕ ಪ್ರತಿರೋಧ
- ಭಾರತ ಸರ್ಕಾರವು ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿತು.
- 1948ರಲ್ಲಿ ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸಿತು.

14. ಭಾರತವು ಸ್ವಾತಂತ್ರ್ಯವಾದಾಗ 562 ದೇಶೀಯ ಸಂಸ್ಥಾನಗಳಿದ್ದವು
- 1947ರ ಭಾರತ ಸರ್ಕಾರದ ವಿಲೀನ ಕಾಯ್ದೆ ಜಾರಿ
- ಭಾರತ ಒಕ್ಕೂಟಕ್ಕೆ ಸೇರಲು ಆಹ್ವಾನ
- ಜುನಾಗಡ್, ಹೈದರಾಬಾದ್ ಮತ್ತು ಜಮ್ಮು ಕಾಶ್ಮಿರ ಮೂರು ಸಂಸ್ಥಾನಗಳ ತೀವ್ರ ಪ್ರತಿರೋಧ
- ಸರ್ದಾರ ವಲ್ಲಭಭಾಯ್ ಪಟೇಲರ ನೇತೃತ್ವದಲ್ಲಿ ದೇಶಿಯ ಸಂಸ್ಥಾನಗಳ ವೀಲಿನೀಕರಣ ಯಶಸ್ವಿಗೊಳಿಸಲಾಯಿತು.

15. ಜುನಾಗಡದ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಚಿಸಿದ್ದನು.
- ಪ್ರಜೆಗಳಿಂದ ತೀವ್ರ ಪ್ರತಿರೋಧ. ನವಾಬನು ರಾಜ್ಯ ಬಿಟ್ಟು ಪಲಾಯನ ಮಾಡಿದನು
- ದಿವಾನರ ಮನವಿ ಮೇರೆಗೆ 1949ರಲ್ಲಿ ಭಾರತ ಒಕ್ಕೂಟಕ್ಕೆ ಸೇರ್ಪಡೆ.

16. ಪೋರ್ಚುಗೀಸರ ವಸಾಹತುವಾಗಿದ್ದ ಗೋವಾ ಭಾರತಕ್ಕೆ ಸೇರಬೇಕೆಂದು ನಿರಂತರವಾದ ಚಳುವಳಿ ನಡೆಯಿತು
- ಗೋವಾವನ್ನು ತೇರವುಗೊಳಿಸಬೇಕೆಂದು ಆದೇಶ ನೀಡಿದರು ಪೋರ್ಚುಗೀಸರು ಆಫ್ರಿಕಾ, ಯುರೋಪಿನಿಂದ ಹೆಚ್ಚು ಸೈನ್ಯ ತರಿಸಿಕೊಂಡು ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರು
- 1955 ರಲ್ಲಿ ದೇಶದ ವಿವಿಧ ಬಾಗಗಳಿಂದ ಸತ್ಯಾಗ್ರಹಿಗಳು ಬಂದು ಗೋವಾ ವಿಮೋಚನೆಗೆ ಹೋರಾಟ ನಡೆಸಿದರು.
- 1961ರಲ್ಲಿ ಭಾರತ ಸೈನ್ಯ ಮದ್ಯ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.

17. ಜಮ್ಮು ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗಿ ಉಳಿಯಲು ನಿರ್ಧರಿಸಿದ್ದನು.
- ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು.
- ಷೇಕ್ ಅಬ್ದುಲ್ಲಾನ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಭಾರತಕ್ಕೆ ಸೇರುವುದೇ ಉತ್ತಮವೆಂದು ಹೋರಾಟ ಆರಂಭ.
- ರಾಜಾ ಹರಿಸಿಂಗ ಭಾರತದ ಸಹಾಯ ಕೋರಿದನು.
- ಕಾಶ್ಮೀರ ಕೆಲವು ಷರತ್ತುಗಳೊಂದಿಗೆ ಭಾರತದಲ್ಲಿ ವಿಲೀನ.
- ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು.
- ಇದರ ವಿರುದ್ಧ ಭಾರತ ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು.
- ವಿಶ್ವಸಂಸ್ಥೆ ಕದನ ವಿರಾಮದ ಆದೇಶವನ್ನು ನೀಡಿತು.
- ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ' ಎನ್ನುವರು.
- ಆದ್ದರಿಂದ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ.

****

ಇತಿಹಾಸ, ಅಧ್ಯಾಯ– 20

ಮಹಾಯುದ್ಧಗಳು ಹಾಗೂ ಭಾರತದ ಪಾತ್ರ

1. B) ಅಲಿಪ್ತ ನೀತಿ
2. A) ಬ್ರಿಟನ್, ಫ್ರಾನ್ಸ್, ರಷ್ಯಾ
3. C) ಜಪಾನ್
4. A) ವರ್ಸೈಲ್ಸ್ ಒಪ್ಪಂದ
5. D) ಅಮೇರಿಕಾ ಸಂಯುಕ್ತ ಸಂಸ್ಥಾನ– ಸೋವಿಯತ್ ರಷ್ಯಾ
6. D) ಬೂದು ಅಂಗಿದಳ

7. ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸಲು ಬೂದುಅಂಗಿ ದಳವನ್ನು ರಚಿಸಿದನು.
8. ಹಿಟ್ಲರ್ ಜನಾಂಗೀಯ ದ್ವೇಷ ಬೆಳೆಸಲು ಗೋಬೆಲ್ಸ್ ಎಂಬ ಮಂತ್ರಿಯನ್ನು ನೇಮಿಸಿದನು.
9. ಮುಸೋಲಿನಿ
10. ದೆಹಲಿ

11. ಮಹಾಯುದ್ಧಗಳನ್ನು ತಡೆಗಟ್ಟಲು

12. ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳನ್ನು ಹೋಲೋಕಾಸ್ಟ್ ಎಂದು ಕರೆಯಲಾಗಿದೆ.

13. ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ.

14. 1917

15. ಹಿಟ್ಲರ್

16. ಉಗ್ರರಾಷ್ಟ್ರೀಯವಾದ

- ಪರಕೀಯ ಶಕ್ತಿಗಳ ನಾಶ
- ಹಿಂಸೆಯ ವೈಭವೀಕರಣ
- ಜನಾಂಗೀಯ ಶ್ರೇಷ್ಠತೆ
- ಸಾಮ್ರಾಜ್ಯವಾದದ ವಿಸ್ತರಣೆ
- ನರಮೇಧಗಳಿಗೆ ಬೆಂಬಲ.

17. ಯುರೋಪ್ ಮತ್ತು ಅಮೇರಿಕದಲ್ಲಿ ಸಂಕಷ್ಟದ ಪರಿಸ್ಥಿತಿ ನಿರ್ಮಾಣ.

- ಜನರ ಜೀವನಮಟ್ಟದಲ್ಲಿ ತೀವ್ರ ಕುಸಿತ
- ಕೈಗಾರಿಕೆ ಮತ್ತು ಕೃಷಿ ಬೆಳವಣಿಗೆ ಸ್ಥಗಿತ
- ವಿಪರೀತ ನಿರುದ್ಯೋಗ ಉಂಟಾಯಿತು.
- ಯುರೋಪಿನ ದೇಶಗಳಲ್ಲಿ ಉಗ್ರರಾಷ್ಟ್ರೀಯತೆ.
- ಸರ್ವಾಧಿಕಾರಿಗಳ ಬೆಳವಣಿಗೆ.

18. ಜಗತ್ತಿನಲ್ಲಿ ಆರ್ಯ ಜರ್ಮನ್ ಜನಾಂಗ ಶ್ರೇಷ್ಠವಾದದ್ದು.

- ಜಗತ್ತನ್ನು ಆಳಲು ಜರ್ಮನ್ನರು ಮಾತ್ರ ಯೋಗ್ಯರು
- ಉಳಿದ ಜನಾಂಗಗಳು ಆಳಿಸಿಕೊಳ್ಳಲು ಮಾತ್ರ ಯೋಗ್ಯರು
- ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೆ ಯಹೂದಿಗಳೇ ಕಾರಣ
- ಯಹೂದಿಗಳು ,ಕಮ್ಯುನಿಷ್ಟರು,ಸೋಷಿಯಲಿಸ್ಟರು ಬದುಕಲು ಯೋಗ್ಯರಲ್ಲ.

19. ಮೈಸೂರು, ಹೈದರಾಬಾದ್ ಮತ್ತು ಜೋಧಪುರದ ಲ್ಯಾನ್ಸರ್ ಗಳು ಎರಡನೆಯ ಮಹಾಯುದ್ದದಲ್ಲಿ ಭಾಗಿಯಾಗಿದ್ದರು.

- ಇವರುಗಳ ಹೆಸರಿನಲ್ಲಿ ಬ್ರಿಟಿಷರು ತೀನ್ ಮೂರ್ತಿ ಭವನವನ್ನು ದೆಹಲಿಯಲ್ಲಿ ನಿರ್ಮಿಸಿದರು.

20. ಮೊದಲ ಮಹಾಯುದ್ಧದ ಕಾರಣಗಳು

- ಅತಿಯಾದ ಮಿಲಿಟರೀಕರಣ
- ಅತಿಯಾದ ರಾಷ್ಟ್ರೀಯತೆ
- ಸಾಮ್ರಾಜ್ಯವಾದದ ನೀತಿಗಳ ಬಲವರ್ಧನೆ
- ಮೈತ್ರಿಕೂಟಗಳ ರಚನೆ
- ವಸಾಹತುಶಾಹಿ ನೀತಿ
- ಭೌಗೋಳಿಕ ಗಡಿ ಸಮಸ್ಯೆಗಳು

ಪರಿಣಾಮಗಳು

- ವರ್ಸೇಲ್ಸ್ ಒಪ್ಪಂದಕ್ಕೆ ಸಹಿ.
- ಆಸ್ಟ್ರೋ–ಹಂಗೇರಿ, ಆಟೋಮನ್ ಸಾಮ್ರಾಜ್ಯಗಳ ಅಸ್ತಿತ್ವ ನಾಶ
- ಯುರೋಪಿನ ಭೂಪಟ ಬದಲಾಯಿತು
- ಸಣ್ಣ ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು
- ರಾಷ್ಟ್ರಸಂಘ ರಚನೆಯಾಯಿತು
- ಉಗ್ರ ರಾಷ್ಟ್ರೀಯತೆಯ ಬೆಳವಣಿಗೆ

21. **ಎರಡನೇ ಮಹಾಯುದ್ಧದ ಕಾರಣಗಳು**

- ಮೊದಲ ಮಹಾಯುದ್ಧದ ಸೋಲು ಅವಮಾನಕರ ಒಪ್ಪಂದಗಳು
- ಯುರೋಪಿನಲ್ಲಿ ಬೆಳೆದ ಉಗ್ರರಾಷ್ಟ್ರೀಯತೆ

• ಹಿಟ್ಲರ್ ಮತ್ತು ಮುಸೋಲಿನಿಯಂತಹ ಸರ್ವಾಧಿಕಾರಿಗಳ ಉದಯ
• ಶತ್ರುಬಣ, ಮಿತ್ರಬಣಗಳ ರಚನೆ
• ಜಪಾನಿನ ಸಾಮ್ರಾಜ್ಯ ವಿಸ್ತರಣಾ ನೀತಿ ಪರಿಣಾಮಗಳು
• ಜಗತ್ತಿನಲ್ಲಿ ರಾಜಕೀಯ, ಸಾಮಾಜಿಕ ಸಂರಚನೆಯಲ್ಲಿ ಬದಲಾವಣೆ.
• **ಪರಿಣಾಮಗಳು**
• ವಿಶ್ವಸಂಸ್ಥೆ ರಚನೆಯಾಯಿತು.
• ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ.
• ಅಮೇರಿಕಾ ಮತ್ತು ರಷ್ಯಾ ವಿರೋಧಿ ಶಕ್ತಿಗಳಾದವು.
• ಬ್ರಿಟನ್, ಫ್ರಾನ್ಸ್ ವಸಾಹತುಗಳನ್ನು ಕಳೆದುಕೊಂಡವು.
• ಶೀತಲ ಸಮರಕ್ಕೆ ನಾಂದಿಯಾಯಿತು.
• ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು.

22. ಭಾರತ ಯುದ್ಧದಲ್ಲಿ ಭಾಗವಹಿಸಿತು.

• ಭಾರತದ ಸೇನೆ ಪಶ್ಚಿಮ ಏಷ್ಯಾ, ಬರ್ಮಾ, ಇರಾಕ್, ಇರಾನ್, ಸಿರಿಯಾ, ಆಫ್ರಿಕಾ, ಇಟಲಿಗಳಲ್ಲಿ ಹೋರಾಡಿತು.
• ಭಾರತವು ಪಶ್ಚಿಮದಲ್ಲಿ ಜರ್ಮನಿ ಹಾಗೂ ಜಪಾನ್ ಗೆ ಯುದ್ಧ ವಿಭಜನಕ ರೇಖೆಯಾಗಿ ಪರಿಣಮಿಸಿತು.
• ಭಾರತೀಯ ಸಂಪನ್ಮೂಲಗಳು ಮತ್ತು ಸಿಪಾಯಿಗಳು ಮಿತ್ರರಾಷ್ಟ್ರಗಳು ಜಯಗಳಿಸಲು ಸಹಾಯವಾದವು.
• ಆಫ್ರಿಕಾದಲ್ಲಿ ಇಟಲಿಯನ್ನರ ಜೊತೆ ಸೆಣೆಸಲು ಸಹಾಯ.
• ಬ್ರಿಟನ್ ಭಾರತೀಯ ಕೃಷಿ ವಸ್ತುಗಳನ್ನು, ಕೈಗಾರಿಕಾ ಪದಾರ್ಥಗಳನ್ನು ಉಪಯೋಗಿಸಿಕೊಂಡಿತು.
• ಯುದ್ಧ ಸಾಮಗ್ರಿಗಳನ್ನು ಉತ್ಪಾದಿಸಲು ಆರ್ಡಿನೆನ್ಸ್ ಕಾರ್ಖಾನೆಗಳನ್ನು ಮೇಲ್ದರ್ಜೆಗೇರಿಸಿತು.
• ದೊಡ್ಡ ಗಾತ್ರದ ಯುದ್ಧ ಸಾಮಾಗ್ರಿಗಳ ಉಪಯೋಗ ಪಡೆದುಕೊಂಡಿತು.

****

ರಾಜ್ಯಶಾಸ್ತ್ರ, ಅಧ್ಯಾಯ– 6
ಸಾರ್ವಜನಿಕ ಆಡಳಿತ– ಒಂದು ಪರಿಚಯ

1. A) ವುಡ್ರೋ ವಿಲ್ಸನ್
2. C) ಅಲೆಗ್ಸಾಂಡರ್ ಹ್ಯಾಮಿಲ್ಟನ್
3. B) ಲೂಥರ್ ಗುಲಿಕ್
4. D) ನೇಮಕಾತಿ
5. B) ಓ. ಗ್ಲೆನ್ ಸ್ಟಾಲ್
6. A) 315 ನೇ ವಿಧಿ

7. ರಾಜ್ಯದ ದೈನಂದಿನ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವ ಸರಕಾರದ ಅಂಗವೇ ಸಾರ್ವಜನಿಕ ಆಡಳಿತ.
8. ವುಡ್ರೋವಿಲ್ಸನ್ ರ ಪ್ರಕಾರ– ಕಾನೂನಿನ ಸಮಗ್ರ ಮತ್ತು ಕ್ರಮಬದ್ಧ ಜಾರಿಗೊಳಿಸುವಿಕೆಯೇ ಸಾರ್ವಜನಿಕ ಆಡಳಿತ.
9. ಫಿಫ್ನರ್ ರ ಪ್ರಕಾರ– ಸಾರ್ವಜನಿಕ ನೀತಿಯನ್ನು ಜಾರಿಗೊಳಿಸುವ ಸಾಮೂಹಿಕ ಯತ್ನದ ಸಂಯೋಜನೆಯೇ ಸಾರ್ವಜನಿಕ ಆಡಳಿತ.
10. ಲೂಥರ್ ಗುಲಿಕ್ ರ ಪ್ರಕಾರ–ಸಾರ್ವಜನಿಕ ಆಡಳಿತವು ಸರ್ಕಾರದ ಕಾರ್ಯಗಳನ್ನು ನಿರ್ವಹಿಸುವ ಕಾರ್ಯಾಂಗದ ಶಾಖೆಗೆ ಸಂಬಂಧಿಸಿದೆ.
11. ಎಫ್.ಎಂ. ಮಾರ್ಕ್ಸ್ ರ ಪ್ರಕಾರ– ವ್ಯಕ್ತಿ ವಸ್ತು ಮತ್ತು ವಿಧಾನಗಳ ವ್ಯವಸ್ಥಿತ ಸಂಯೋಜನೆಯೇ ಸಾರ್ವಜನಿಕ ಆಡಳಿತ.
12. ವುಡ್ರೋ ವಿಲ್ಸನ್, ಎಲ್.ಡಿ. ವೈಟ್.
13. ಲೂಥರ್ ಗುಲಿಕ್, ಹರ್ಬರ್ಟ್ ಎ, ಸೈಮನ್.
14. ರಾಷ್ಟ್ರಾಧ್ಯಕ್ಷರು ನೇಮಕ ಮಾಡುತ್ತಾರೆ/ವಜಾ ಮಾಡುತ್ತಾರೆ.
15. ಸಾಬೀತಾದ ದುರ್ನಡತೆ ಅಥವಾ ಅಸಮರ್ಥತೆಯ ಆಧಾರದ ಮೇಲೆ ವಜಾ ಮಾಡಲಾಗುತ್ತದೆ.
16. ನವದೆಹಲಿಯಲ್ಲಿದೆ.
17. ರಾಜ್ಯಪಾಲರು ನೇಮಿಸುತ್ತಾರೆ.
18. ಬೆಂಗಳೂರಿನಲ್ಲಿದೆ.
19. 7ನೇ ಅನುಸೂಚಿ.

20. ಸಂವಿಧಾನದ 320 ನೇ ವಿಧಿ.
21. 356 ನೇ ವಿಧಿ.
22. ರಾಜ್ಯ ಗೃಹ ಮಂತ್ರಿಯ ಅಧೀನದಲ್ಲಿದೆ.
23. ಗೃಹ ಇಲಾಖೆಯ ಕಾರ್ಯದರ್ಶಿ.

24. ಸರಕಾರದ ಆಧಾರ ಸ್ತಂಭ
- ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುತ್ತದೆ
- ಕಾನೂನು ಮತ್ತು ನೀತಿಗಳ ಅನುಷ್ಠಾನ
- ಸಾಮಾಜಿಕ ಭದ್ರತೆಯನ್ನು ದೃಢಪದಿಸುತ್ತದೆ
- ಶಾಸಕಾಂಗ ಮತ್ತು ಕಾರ್ಯಾಂಗಕ್ಕೂ ಸಹಾಯ

25. ಬಡವರು ಮತ್ತು ದುರ್ಬಲರ ಕ್ಷೇಮಾಭಿವೃದ್ಧಿ.
- ದುರ್ಬಲರ ಏಳಿಗೆಗಾಗಿ ಸಾಮಾಜಿಕ ಭದ್ರತಾ ನೀತಿಗಳ ಅನುಷ್ಠಾನ.
- ಯುವನಿಧಿ, ರಾಷ್ಟ್ರೀಯ ಆಹಾರ ಭದ್ರತಾ ಮಿಷನ್
- ಸಮಾಜದ ನೊಂದ ಬಂಧುಗಳಿಗೆ ಸಾಮಾಜಿಕ ಭದ್ರತೆ

26. ಕೇಂದ್ರ ಸರಕಾರದ 'ಎ' ಮತ್ತು 'ಬಿ' ವೃಂದದ ಹುದ್ದೆಗಳಿಗೆ ನೇಮಕ ಮಾಡಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದು.
- ನೇರ ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆ ನಡೆಸುವುದು.
- ಬಡ್ತಿ ಮತ್ತು ವರ್ಗಾವಣೆಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸರಕಾರಕ್ಕೆ ಸಲಹೆ
- ಅಧಿಕಾರಿಗಳ ದುರ್ವರ್ತನೆಯ ಬಗ್ಗೆ ಶಿಸ್ತುಕ್ರಮಕ್ಕೆ ಸರಕಾರಕ್ಕೆ ಸಲಹೆ.

27. ರಾಜ್ಯ ಸರ್ಕಾರಿ ಸೇವೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ.
- ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆ ನಡೆಸುವುದು.
- ಶಿಸ್ತು ಮತ್ತು ಪೂರ್ವಾನ್ವಯ ಬಡ್ತಿ ಪ್ರಕರಣಗಳ ಬಗ್ಗೆ ಸರಕಾರಕ್ಕೆ ಸಲಹೆ
- ವರ್ಷಕ್ಕೆ ಎರಡು ಬಾರಿ ಇಲಾಖಾ ಪರೀಕ್ಷೆಗಳನ್ನು ನಡೆಸುವುದು.
- ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಮನ್ವಯ ಕಾರ್ಯ .

28. ಪೂರ್ವಭಾವಿ ಪರೀಕ್ಷೆ,
- ಮುಖ್ಯ ಪರೀಕ್ಷೆ
- ವ್ಯಕ್ತಿತ್ವ ಪರೀಕ್ಷೆ (ಸಂದರ್ಶನ)

29. ಕೇಂದ್ರೀಯ ಮೀಸಲು ಪೊಲೀಸ್ ಪಡೆ
- ಗಡಿ ಭದ್ರತಾ ಪಡೆ
- ರೈಲ್ವೆ ರಕ್ಷಣಾ ಪಡೆ
- ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ

30. ಶಾಂತಿ ಸುವ್ಯವಸ್ಥೆಯನ್ನು ಕಾಪಾಡುತ್ತದೆ.
- ಜನರ ಪ್ರಾಣ ಮತ್ತು ಅಸ್ತಿಯ ರಕ್ಷಿಸುತ್ತದೆ.
- ನ್ಯಾಯ ಒದಗಿಸುತ್ತದೆ.
- ಶಿಕ್ಷಣ ನೀಡುತ್ತದೆ.
- ಉದ್ಯೋಗಾವಕಾಶ ಕಲ್ಪಿಸುತ್ತದೆ.
- ಆರ್ಥಿಕ ಸಮಾನತೆಯನ್ನು ಉಂಟುಮಾಡುತ್ತದೆ.
- ಅವಶ್ಯಕ ವಸ್ತುಗಳನ್ನು ಪೂರೈಸುತ್ತದೆ.

31. ಯೋಜಿಸುವಿಕೆ
- ಸಂಘಟಿಸುವಿಕೆ
- ಸಿಬ್ಬಂದಿಗಳ ಪೂರೈಕೆ
- ನಿರ್ದೇಶಿಸುವಿಕೆ

• ಸಮನ್ವಯಗೊಳಿಸುವಿಕೆ

• ವರದಿ ನೀಡುವಿಕೆ

• ಆಯವ್ಯಯ ರಚನೆ

32. ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವುದು ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದೆ.

• ಅದಕ್ಕಾಗಿ ಪೊಲೀಸ್ ಆಡಳಿತವನ್ನು ಹೊಂದಿವೆ.

• ಪೊಲೀಸ್ ಖಾತೆ ಗೃಹಮಂತ್ರಿಯ ಅಧೀನದಲ್ಲಿರುತ್ತದೆ.

• ಗೃಹಮಂತ್ರಿ ಪೊಲೀಸ್ ಆಡಳಿತದ ಹೊಣೆಗಾರಿಕೆ ಹೊಂದಿರುತ್ತಾರೆ.

• ಗೃಹ ಇಲಾಖೆಯ ಕಾರ್ಯದರ್ಶಿ ಗೃಹ ಇಲಾಖೆಯ ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ.

• ಗೃಹ ಇಲಾಖೆ ಪೊಲೀಸ್ ಆಡಳಿತದ ಮೇಲ್ವಿಚಾರಣೆ ಮತ್ತು ಸಂಯೋಜನೆಯ ಕಾರ್ಯ ನಿರ್ವಹಿಸುತ್ತದೆ.

33. ಪ್ರತ್ಯಕ್ಷ ನೇಮಕಾತಿ:

• ನೇರ ನೇಮಕಾತಿ ಎಂದೂ ಕರೆಯುತ್ತಾರೆ.
• ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡವುದೇ ನೇರ ನೇಮಕಾತಿ.
• ಅಭ್ಯರ್ಥಿಗಳು ಕೆಲವು ಅರ್ಹತೆಗಳನ್ನು ಹೊಂದಿರಬೇಕು.

ಪರೋಕ್ಷ ನೇಮಕಾತಿ:

• ಆಂತರಿಕ ನೇಮಕಾತಿ ಎಂದೂ ಕರೆಯುವರು.
• ಈಗಾಗಲೇ ಹುದ್ದೆಯಲ್ಲಿ ಇರುವವರನ್ನು ವಿದ್ಯಾರ್ಹತೆ ಮತ್ತು ಸೇವಾ ಹಿರಿತನದ ಮೇಲೆ ಮೇಲಿನ ಹುದ್ದೆಗಳಿಗೆ ನೇಮಕ ಮಾಡುವುದೇ ಪರೋಕ್ಷ ನೇಮಕಾತಿ.
• ಪದೋನ್ನತಿ ಮತ್ತು ಬಡ್ತಿಯ ವಿಧಾನವಾಗಿದೆ.

****

ರಾಜ್ಯಶಾಸ್ತ್ರ, ಅಧ್ಯಾಯ– 7

ಭಾರತಕ್ಕಿರುವ ಸವಾಲುಗಳು ಮತ್ತು ಅವುಗಳ ಪರಿಹಾರೋಪಾಯಗಳು

1. D) 2005

2. B) ಫಾತಿಮಾ ಬೀವಿ

3. B) 74.04%

4. D) ಶೈಕ್ಷಣಿಕ ಮೂಲಭೂತ ಹಕ್ಕು

5. B) ಪ್ರಾದೇಶಿಕವಾದ ತಡೆಯಲು

6. ರಾಜ್ಯದೊಳಗಿನ ವಿವಿಧ ಪ್ರದೇಶಗಳಲ್ಲಿರುವ ಪ್ರಾದೇಶಿಕವಾದವನ್ನು ಉಪಪ್ರಾದೇಶಿಕವಾದ ಎನ್ನುವರು.

7. ಯಾವುದೇ ಆಮದು ಹಾಗೂ ರಫ್ತು ಸುಂಕಗಳನ್ನು ಸರಕಾರಕ್ಕೆ ಪಾವತಿಸದೆ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದು ಮತ್ತು ಕಳುಹಿಸುವುದನ್ನು ಕಳ್ಳ ಸಾಗಾಣಿಕೆ ಎನ್ನುವರು.

8. ದೈಹಿಕವಾಗಿ, ಮಾನಸಿಕವಾಗಿ ತಮ್ಮ ಜನನಾಂಗದ ವಿರುದ್ಧ ಭಾವನೆ ಮತ್ತು ವರ್ತನೆಯುಳ್ಳ ಸಮುದಾಯದ ವ್ಯಕ್ತಿಗಳೇ ಲಿಂಗತ್ವ ಅಲ್ಪ ಸಂಖ್ಯಾತರು.

9. ಲೋಕಪಾಲ ಹಾಗೂ ಲೋಕಾಯುಕ್ತ.

10. ಒಂದು ನಿರ್ದಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶದ ಬಗ್ಗೆ ಹೊಂದಿರುವ ಗಾಢವಾದ ಅಭಿಮಾನವನ್ನು ಪ್ರಾದೇಶಿಕವಾದ ಎನ್ನುವರು.

11. ಧರ್ಮದ ಆಧಾರದ ಮೇಲೆ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವೈಷಮ್ಯವನ್ನು ಬೆಳೆಸಿಕೊಳ್ಳುವುದನ್ನು ಕೋಮುವಾದ ಎನ್ನುವರು.

12. ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವುದನ್ನು ಭ್ರಷ್ಟಾಚಾರ ಎನ್ನುವರು.

13. ಜನರು ಕನಿಷ್ಠ ಅಗತ್ಯತೆಗಳನ್ನು ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಲು ಸಾಧ್ಯವಾಗದ ಸ್ಥಿತಿಯನ್ನು ಬಡತನ ಎನ್ನುವರು.

14. ಬಳಕೆದಾರರಿಂದ ಅಧಿಕ ಹಣವನ್ನು ವಸೂಲಿ ಮಾಡಿ ಲಾಭಗಳಿಸುವ ಧೋರಣೆಯೇ ಲಾಭಕೋರತನ.

15. ದೇಶದ ಒಟ್ಟು ಜನಸಂಖ್ಯೆಯಲ್ಲಿ ದುಡಿಯುವವರ ಸಂಖ್ಯೆ ಹೆಚ್ಚಾಗಿರುವ ಸ್ಥಿತಿಯೇ ಜನಸಂಖ್ಯಾ ಲಾಭಾಂಶ.

16. ಅನಪೇಕ್ಷಿತ ಆರ್ಥಿಕ ಚಟುವಟಿಕೆಗಳಿಗೆ ಆಸ್ಪದ

• ದೇಶದ ಕೈಗಾರಿಕೆ ಮತ್ತು ಮಾರುಕಟ್ಟೆಗೆ ಹಾನಿ

• ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ

♦ ಆರ್ಥಿಕ ಅಪರಾಧಗಳ ಹೆಚ್ಚಳ

♦ ರಾಷ್ಟ್ರ ವಿರೋಧಿ ಚಟುವಟಿಕೆ

17. ರಾಷ್ಟ್ರದ ಏಕತೆ, ಸಮಗ್ರತೆಗೆ ಅಪಾಯ ಮಾಡಬಹುದು.

♦ ಅಂತರ ರಾಜ್ಯ ಜಲ ವಿವಾದಗಳಿಗೆ ಕಾರಣವಾಗಬಹುದು.

♦ ಗಡಿ ವಿವಾದಗಳಿಗೆ ಕಾರಣವಾಗಬಹುದು.

18. ಜವಾಹರ್ ರೋಜಗಾರ್ ಯೋಜನೆ

♦ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ

♦ ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ

♦ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ

♦ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ

♦ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ

♦ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ

19. ಆರ್ಥಿಕ ಅಸಮಾನತೆ ಹೆಚ್ಚಳ

♦ ಸಮಾಜದಲ್ಲಿ ಅಪರಾಧಗಳ ಏರಿಕೆ

♦ ಕಪ್ಪು ಹಣ ಸೃಷ್ಟಿಗೆ ದಾರಿ

♦ ಹಣದುಬ್ಬರದ ಹೆಚ್ಚಳ

♦ ಅನೈತಿಕ ವ್ಯಾಪಾರ ವಹಿವಾಟಿಗೆ ಪ್ರಚೋದನೆ

♦ ಬೆಲೆ ಏರಿಕೆಗೆ ದಾರಿ

♦ ಬಡತನ ಇನ್ನಷ್ಟು ಅಧಿಕವಾಗುತ್ತದೆ

20. ತೆರಿಗೆಗಳ್ಳತನ

♦ ಅಕ್ರಮ ದಾಸ್ತಾನು

♦ ವಸ್ತುಗಳ ಕೃತಕ ಅಭಾವ ಸೃಷ್ಟಿ

♦ ಕಳ್ಳಸಾಗಾಣಿಕೆ

♦ ಅಧಿಕಾರ ದುರುಪಯೋಗ

♦ ಆರ್ಥಿಕ ವಂಚನೆ

♦ ಮೋಸಗಾರಿಕೆ

♦ ವಿದೇಶಿ ವಿನಿಮಯದ ಕಾನೂನು ಉಲ್ಲಂಘನೆ

♦ ಔದ್ಯೋಗಿಕ ವಂಚನೆ

21. ಸಮಾಜ ವಿರೋಧಿ ಹಾಗೂ ಅನೈತಿಕವಾದುದು

♦ ಕಾನೂನು ಬಾಹಿರವಾದುದು

♦ ಉತ್ತಮ ಆಡಳಿತದ ಪರಮಶತ್ರು

♦ ಪಾರದರ್ಶಕತೆ ಹಾಗೂ ಉತ್ತರದಾಯಿತ್ವಕ್ಕೆ ಭಂಗ

♦ ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೆ ದಾರಿ

♦ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ.

22. ಲೋಕಪಾಲ ಸಂಸ್ಥೆಯ ಸ್ಥಾಪನೆ

♦ ಲೋಕಾಯುಕ್ತ ಸಂಸ್ಥೆಯ ಸ್ಥಾಪನೆ

♦ ಕೇಂದ್ರೀಯ ಜಾಗೃತ ಆಯೋಗದ ಸ್ಥಾಪನೆ

♦ ಭ್ರಷ್ಟಾಚಾರ ತಡೆ ಕಾಯಿದೆ–1988 ಜಾರಿ

♦ ಮಾಹಿತಿ ಹಕ್ಕು ಕಾಯಿದೆ–2005 ಜಾರಿ

♦ ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮೆರಾಗಳ ಅಳವಡಿಕೆ

♦ ಕಡತಗಳ ವಿಲೇವಾರಿಗೆ ಇ–ಆಫೀಸ್ ವ್ಯವಸ್ಥೆ ಜಾರಿ

♦ ಸಕಾಲ, ಜನಸ್ಪಂದನ, ಜನಸೇವಕ ಯೋಜನೆಗಳ ಜಾರಿ

• ಸರ್ಕಾರಿ ಕಛೇರಿಗಳಲ್ಲಿ ದೂರು ಪೆಟ್ಟಿಗೆಗಳನ್ನು ಇಡಲಾಗಿದೆ

23. ಉತ್ತಮ ಆರ್ಥಿಕ ಸುಧಾರಣೆಗಳು

• ಯೋಜನಾಬದ್ಧ ಹಣಕಾಸಿನ ನಿರ್ವಹಣೆ
• ಪ್ರಗತಿಪರ ತೆರಿಗೆ ಪದ್ಧತಿ
• ಗುಡಿ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ
• ಭೂ–ಸುಧಾರಣೆಗಳು
• ಕಾರ್ಮಿಕಪರ ಧೋರಣೆಗಳು

24. ನಿರುದ್ಯೋಗ

• ಅನಕ್ಷರತೆ
• ಬಡತನ
• ಭಿಕ್ಷಾಟನೆ
• ವಸತಿ ಸೌಲಭ್ಯಗಳ ಕೊರತೆ
• ಆರೋಗ್ಯ ಸಮಸ್ಯೆ
• ಸುರಕ್ಷಿತ ಕುಡಿಯುವ ನೀರಿನ ಪೂರೈಕೆಯ ಕೊರತೆ

25. ಸಮರ್ಪಕವಾದ ಸರಕಾರಿ ನಿಯಮಗಳು

• ಬೆಲೆಗಳ ನಿಯಂತ್ರಣ
• ಬೆಲೆ ಸೂಚ್ಯಂಕಗಳ ನಿಯತಕಾಲಿಕ ಪರಿಶೀಲನೆ
• ಸಹಕಾರಿ ಮಾರುಕಟ್ಟೆಗಳ ವಿಸ್ತರಣೆ
• ಸರಿಯಾದ ತೆರಿಗೆ ನೀತಿ
• ದೇಶೀಯ ಮಾರುಕಟ್ಟೆಯಲ್ಲಿ ಸರಕುಗಳ ಕೊರತೆಯಾಗದಂತೆ ಕ್ರಮವಹಿಸುವುದು.

26. ಏಕರೂಪ ನಾಗರಿಕ ಸಂಹಿತೆಯ ಜಾರಿ

• ಶಿಕ್ಷಣದಲ್ಲಿ ಜಾತ್ಯತೀತ ತತ್ವದ ಅಳವಡಿಕೆ
• ರಾಷ್ಟ್ರೀಯತೆಯ ಚಿಂತನೆಗಳಿಗೆ ಒತ್ತು
• ಸದೃಢ ರಾಷ್ಟ್ರೀಯ ಮನೋಭಾವನೆ ಬೆಳೆಸುವುದು
• ಕ್ರಮಬದ್ಧ ಕಾನೂನು ವ್ಯವಸ್ಥೆಯ ಜಾರಿ
• ಕೋಮು ಸೌಹಾರ್ದದ ಬಗ್ಗೆ ಜಾಗೃತಿ

27. ಅಕ್ಷರ ಪ್ರಸರಣ

• ತಾಂತ್ರಿಕ ಶಿಕ್ಷಣ
• ಕೈಗಾರಿಕಾ ಅಭಿವೃದ್ಧಿ
• ಕೃಷಿ ಅಭಿವೃದ್ಧಿ
• ರಫ್ತು ಹೆಚ್ಚಳ
• ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ
• ಹೆಚ್ಚುವರಿ ಉದ್ಯೋಗಾವಕಾಶಗಳ ಸೃಷ್ಟಿ

28. ದೇಶದೊಳಗೆ ಪರ್ಯಾಯ ವಸ್ತುಗಳ ಉತ್ಪಾದನೆ ಮತ್ತು ಪೂರೈಕೆ

• ಆಂತರಿಕ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಣ
• ಯೋಗ್ಯ ಆಮದು ಮತ್ತು ರಫ್ತು ನೀತಿ
• ಉತ್ತಮ ವಿದೇಶಿ ವ್ಯಾಪಾರ ನೀತಿ
• ಕರಾವಳಿ ಗಸ್ತು ಪಡೆಯ ಕಟ್ಟು ನಿಟ್ಟಿನ ಕಾರ್ಯಾಚರಣೆ
• ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷೆ

29. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಪ್ರಾರಂಭ

• ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಮೀಸಲಾತಿ

• ರಾಷ್ಟ್ರೀಯ ಹಾಗೂ ರಾಜ್ಯ ಮಹಿಳಾ ಆಯೋಗಗಳ ಸ್ಥಾಪನೆ
• ಮಹಿಳಾ ಅಭಿವೃದ್ಧಿ ನಿಗಮಗಳ ಸ್ಥಾಪನೆ
• ಸಖಿ ಒನ್ ಸ್ಟಾಪ್ ಸೆಂಟರ್ ಗಳ ಸ್ಥಾಪನೆ
• ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ ಕಾಯ್ದೆಯ ಜಾರಿ (2005)
• ದುಡಿಯುವ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆಯ ಜಾರಿ(2013)
• ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 50 ರಷ್ಟು ಸ್ಥಾನಗಳ ಮೀಸಲು
• ಮಹಿಳಾ ಸಹಾಯವಾಣಿ 1091 ಸೌಲಭ್ಯ
• ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ.
• ನಾರಿಶಕ್ತಿ ವಂದನಾ ಅಧಿನಿಯಮದ ಅಂಗೀಕಾರ

30. ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳ ಹಕ್ಕುಗಳ ಸಂರಕ್ಷನಾ ಕಾಯಿದೆ –2019

• ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳ ಕಲ್ಯಾಣಕ್ಕಾಗಿ ಸಮಗ್ರ ಪುನರ್ವಸತಿ ಉಪಯೋಜನೆ
• ರಾಷ್ಟ್ರೀಯ ಪರಿಷತ್ ರಚನೆ
• ಗರೀಮಾ ಗೃಹಗಳ ನಿರ್ಮಾಣ
• ನ್ಯಾಷನಲ್ ಕೌನ್ಸಿಲ್ ಫಾರ್ ಟ್ರಾನ್ಸ್ ಜೆಂಡರ್ ಪರ್ಸನ್ಸ್
• ನ್ಯಾಷನಲ್ ಪೋರ್ಟಲ್ ಫಾರ್ ಟ್ರಾನ್ಸ್ ಜೆಂಡರ್ಸ್ ಪರ್ಸನ್ಸ್
• ಸ್ಮೈಲ್ ಯೋಜನೆ
• ರಾಷ್ಟ್ರೀಯ ನೀತಿ
• ಕರ್ನಾಟಕ ಸರಕಾರದ ಲಿಂಗತ್ವ ಅಲ್ಪಸಂಖ್ಯಾತರ ರಾಜ್ಯ ನೀತಿ– 2017 ರ ಜಾರಿ
• ಕರ್ನಾಟಕ ರಾಜ್ಯ ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇಕಡಾ 1ರಷ್ಟು ಹುದ್ದೆಗಳ ಮೀಸಲಾತಿ

31. ರಾಷ್ಟ್ರೀಯ ಸಾಕ್ಷರತಾ ಮಿಷನ್(1988)

• ಸರ್ವ ಶಿಕ್ಷಣ ಅಭಿಯಾನ (2001)
• ಶಿಕ್ಷಣ ಹಕ್ಕು ಕಾಯ್ದೆ (2009)
• ಸಾಕ್ಷರ ಭಾರತ ಕಾರ್ಯಕ್ರಮ (2009)
• ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಮೂಲಭೂತ ಹಕ್ಕು– 21ಎ ವಿಧಿ
• ಸಮಗ್ರ ಶಿಕ್ಷಾ ಕಾರ್ಯಕ್ರಮ (2018)
• ನವಭಾರತ ಸಾಕ್ಷರತಾ ಕಾರ್ಯಕ್ರಮ

32. ಸಾಮಾಜಿಕ ಭಿನ್ನತೆಗೆ ಕಾರಣವಾಗಿದೆ.

• ಪರಸ್ಪರ ಅಪನಂಬಿಕೆಗೆ ಕಾರಣವಾಗಿದೆ.
• ಭಯದ ವಾತಾರವಣವನ್ನು ಸೃಷ್ಟಿಸುತ್ತದೆ.
• ಸಮಾಜದಲ್ಲಿ ಗುಂಪುಗಾರಿಕೆಯನ್ನು ಸೃಷ್ಟಿಸುತ್ತದೆ.
• ರಾಷ್ಟ್ರೀಯ ಏಕತೆ, ಸಮಗ್ರತೆಯನ್ನು ಭಂಗಪಡಿಸುತ್ತದೆ.
• ಸಮಾಜದ ನೆಮ್ಮದಿಯನ್ನು ಕೆಡಿಸುತ್ತದೆ.
• ಜೀವ ಹಾಗೂ ಸೊತ್ತುಗಳ ನಾಶಕ್ಕೆ ಕಾರಣವಾಗುತ್ತದೆ.
• ದೈಹಿಕ ಹಲ್ಲೆಗಳಿಗೆ ಕಾರಣವಾಗುತ್ತದೆ.
• ಮತೀಯ ಹಿತಾಸಕ್ತಿ ಹೆಚ್ಚಿನದು ಎಂದು ಪರಿಗಣಿಸುತ್ತದೆ.

****

ರಾಜ್ಯಶಾಸ್ತ್ರ, ಅಧ್ಯಾಯ– 21

ಭಾರತದ ವಿದೇಶಾಂಗ ನೀತಿ ಮತ್ತು ಜಾಗತಿಕ ಸವಾಲುಗಳು

1. B) ಜವಾಹರಲಾಲ್ ನೆಹರೂ
2. C) 1948, ಡಿಸೆಂಬರ್ 10
3. D) ಆಲ್ಫ್ರೆಡ್ ಸಾವಿ
4. C) ಅಲಿಪ್ತ ನೀತಿ
5. D) ಭಾರತ
6. A) ಡಿಸೆಂಬರ್ 10
7. B) ಮಾನವ ಹಕ್ಕುಗಳ ಸಂರಕ್ಷಣೆ
8. C) ಭಾರತ ಶಾಂತಿ ಪ್ರಿಯ ರಾಷ್ಟ್ರ.
9. A) ಚೀನಾ

10. ಒಂದು ರಾಷ್ಟ್ರವು ಅನ್ಯ ರಾಷ್ಟ್ರಗಳೊಂದಿಗೆ ವ್ಯವಹರಿಸುವಾಗ ಅನುಸರಿಸುವ ನೀತಿಯನ್ನು ವಿದೇಶಾಂಗ ನೀತಿ ಎನ್ನುವರು.
11. ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ತ್ಯಜಿಸುವ ನೇರ ಪ್ರಕ್ರಿಯೆ.
12. ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಪೂರಕವಾದ ಮಾನವೀಯ, ನ್ಯಾಯಯುತ, ಸಾಮಾಜಿಕ ಸ್ಥಿತಿಗತಿಗಳೇ ಮಾನವ ಹಕ್ಕುಗಳಾಗಿವೆ.
13. ಉಗ್ರಗಾಮಿ ಸಂಘಟನೆಗಳ ಉದ್ದೇಶ ಪೂರೈಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆಯನ್ನು ಭಯೋತ್ಪಾದಕತೆ ಎನ್ನುವರು.

14. ರಾಷ್ಟ್ರದ ಏಕತೆ ಮತ್ತು ಸಾರ್ವಭೌಮತೆ.
- ಪರಸ್ಪರಾವಲಂಬನೆ.
- ರಾಷ್ಟ್ರೀಯ ಹಿತಾಸಕ್ತಿಯ ರಕ್ಷಣೆ ಮತ್ತು ಅಭಿವೃದ್ಧಿ.
- ಪ್ರಚೋಧನಾತ್ಮಕ ಅಂಶಗಳು.

15. ಜವಾಹರಲಾಲ್ ನೆಹರು ರವರ ಆದರ್ಶವಾದದ ಹಂತ (1947–1959)
- ಆಯಕಟ್ಟಿನ ವಾಸ್ತವವಾದದ ಹಂತ (1959–1991).
- ಆರ್ಥಿಕ ಪ್ರಾಯೋಗಿಕ ಹಂತ (1991 ರಿಂದ ಪ್ರಸ್ತುತದ ವರೆಗೆ)

16. 1776 ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮ
- 1789ರ ಫ್ರಾನಿನ ಮಹಾಕ್ರಾಂತಿ,
- 1917ರ ರಷ್ಯಾ ಕ್ರಾಂತಿ,
- 20 ನೇ ಶತಮಾನದ ಭಾರತ ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟಗಳು.

17. ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (SALT),
- ಪರಮಾಣು ಪ್ರಸರಣ ನಿಷೇಧ ಒಪ್ಪಂದ (NPT)
- ಸಮಗ್ರ ಪರೀಕ್ಷಾ ನಿಷೇಧ ಒಪ್ಪಂದ (CTBT),
- ಫಲಿಕೆ ನಿಷೇಧ ಒಪ್ಪಂದ,
- ಜೈವಿಕ ಶಸ್ತ್ರಾಸ್ತ್ರಗಳ ಸಮಾವೇಶ (BWC)

18. ಮಾನವ ಹಕ್ಕುಗಳ ನಿರಾಕರಣೆ
- ಶಸ್ತ್ರಾಸ್ತ್ರಗಳ ಪೈಪೋಟಿ.
- ಆರ್ಥಿಕ ಅಸಮಾನತೆ
- ವರ್ಣಬೇಧ ನೀತಿ
- ಭಯೋತ್ಪಾದಕತೆ

19. ಬಡತನ ಮತ್ತು ನಿರುದ್ಯೋಗ ಹೆಚ್ಚಾಗಿರುತ್ತದೆ.
- ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಬಳಕೆ
- ಶಿಕ್ಷಣದ ಗುಣಮಟ್ಟ ಕಳಪೆ
- ಅನಾರೋಗ್ಯ ಹಾಗೂ ಅಪೌಷ್ಠಿಕತೆ ಹೆಚ್ಚಾಗಿರುತ್ತದೆ

• ತಂತ್ರಜ್ಞಾನದ ಕೊರತೆ ಹೆಚ್ಚಾಗಿರುತ್ತದೆ
• ಮೂಲಭೂತ ಸೌಕರ್ಯಗಳ ಕೊರತೆ ಕಂಡು ಬರುತ್ತದೆ.

20. ವ್ಯಕ್ತಿಗಳ ಪ್ರಾಣಹಾನಿ

• ಆಸ್ತಿ–ಪಾಸ್ತಿಗಳ ನಷ್ಟ
• ಆರ್ಥಿಕ ಅಭಿವೃದ್ಧಿಗೆ ತಡೆ
• ಸಾಮಾಜಿಕ ಸಂಸ್ಕೃತಿಗೆ ಧಕ್ಕೆ
• ಮಾನಸಿಕ ವೇದನೆ ನೀಡುತ್ತದೆ
• ಕಾನೂನು –ಸುವ್ಯವಸ್ಥೆಯ ನಿರ್ವಹಣೆಗೆ ಅಡ್ಡಿ
• ಜಾಗತಿಕ ಭದ್ರತೆಗೆ ಆತಂಕ

21. ಅಲಿಪ್ತ ನೀತಿಯನ್ನು ಮುಂದುವರೆಸಿದೆ.

• ಬಡರಾಷ್ಟ್ರಗಳಿಗೆ ಯಾವುದೇ ಷರತ್ತುಗಳಿಲ್ಲದೆ ಆರ್ಥಿಕ ನೆರವು ನೀಡಬೇಕೆಂದು ಭಾರತ ಪ್ರತಿಪಾದಿಸಿತು.
• ಹಲವು ಬಡ ರಾಷ್ಟ್ರಗಳಿಗೆ ನೆರವು ನೀಡುತ್ತಾ ಬಂದಿದೆ.
• ಹಿಂದುಳಿದ ರಾಷ್ಟ್ರಗಳ ಆತ್ಮಗೌರವ ಎತ್ತಿ ಹಿಡಿಯಲು ಸಹಕರಿಸಿದೆ.
• ಶ್ರೀಮಂತ ರಾಷ್ಟ್ರಗಳ ಬಂಡವಾಳವು ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿದೆ.

22. ವಸಾಹತುಶಾಹಿತ್ವಕ್ಕೆ ವಿರೋಧ.

• ಸಾಮ್ರಾಜ್ಯಶಾಹಿತ್ವಕ್ಕೆ ವಿರೋಧ.
• ವರ್ಣಭೇಧ ನೀತಿಗೆ ವಿರೋಧ.
• ಅಲಿಪ್ತ ನೀತಿ.
• ಆಫ್ರಿಕಾ ಮತ್ತು ಏಷ್ಯಾದ ಪ್ರಗತಿಗೆ ಪ್ರಥಮ ಆದ್ಯತೆ.
• ನಿಶ್ಯಸ್ತ್ರೀಕರಣಕ್ಕೆ ಬೆಂಬಲ.
• ವಿಶ್ವಸಂಸ್ಥೆ ಮತ್ತು ವಿಶ್ವ ಶಾಂತಿಗೆ ಬೆಂಬಲ.

23. ಸಾರ್ವತ್ರಿಕ ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ.

• ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ.
• ವಿಶ್ವ ಸಂಸ್ಥೆ ಹಾಗೂ ಇನ್ನಿತರ ಜಾಗತಿಕ ವೇದಿಕೆಗಳ ಮೂಲಕ ಹಕ್ಕುಗಳ ಸಂರಕ್ಷಣೆಗೆ ಪ್ರಯತ್ನ.
• ಜನಾಂಗ ಹತ್ಯೆ, ಎಲ್ಲಾ ವಿಧದ ಶೋಷಣೆ ಹಾಗೂ ದಬ್ಬಾಳಿಕೆಗೆ ವಿರೋಧ.
• ರಾಷ್ಟ್ರೀಯ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗಗಳ ಸ್ಥಾಪನೆ.
• ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ಸಂರಕ್ಷಣೆಗೆ ಪ್ರಯತ್ನ.

24. ವಿಶ್ವದಾದ್ಯಂತ ಭಯ, ಅಸ್ಥಿರತೆಯ ಸೃಷ್ಟಿ.

• ಯುದ್ಧದ ಸಂಭವನೀಯತೆ ಹೆಚ್ಚಾಗುತ್ತದೆ.
• ವಿಶ್ವಶಾಂತಿ ಸ್ಥಾಪನೆಗೆ ಅಡ್ಡಿಯಾಗುತ್ತದೆ.
• ಆರ್ಥಿಕವಾಗಿ ನಷ್ಟ .
• ಆರ್ಥಿಕ ಅಸ್ಥಿರತೆಗೆ ದಾರಿ

25. ರಾಷ್ಟ್ರೀಯ ತನಿಖಾ ದಳದ(NIA) ಸ್ಥಾಪನೆ.

• ವಿಶೇಷ ಪರಿಣಿತಿ ಪಡೆಗಳ ರಚನೆ.
• ರಾಜ್ಯ ಸರ್ಕಾರಗಳಿಂದ ಭಯೋತ್ಪಾದಕ ನಿಗ್ರಹ ಪಡೆಗಳು (ATS) ರಚನೆ.
• ಇಂಟಲಿಜೆನ್ಸ್ ಬ್ಯೂರೋ (IB) ಸ್ಥಾಪನೆ
• ಸಂಶೋಧನೆ ಹಾಗೂ ವಿಶ್ಲೇಷಣಾ ಘಟಕದ ಸ್ಥಾಪನೆ (RAW)
• ಹಣಕಾಸು ಗುಪ್ತಚರ ಘಟಕದ ಸ್ಥಾಪನೆ
• ಗುಪ್ತಚರ ವ್ಯವಸ್ಥೆಯ ಬಲವರ್ಧನೆ.

****

ರಾಜ್ಯಶಾಸ್ತ್ರ, ಅಧ್ಯಾಯ– 22
ಜಾಗತಿಕ ಸಂಸ್ಥೆಗಳು

1. B) 1945
2. A) ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್
3. D) ನ್ಯೂಯಾರ್ಕ್
4. C) ಭದ್ರತಾ ಮಂಡಳಿ
5. A) ದಿ ಹೇಗ್
6. B) 1948
7. D) ಯುನಿಸೆಫ್
8. C) ಕಠ್ಮಂಡು
9. C) ಸಾಮಾನ್ಯ ಸಭೆ
10. D) 5
11. D) ಜಿನೇವಾ

12. ದತ್ತಿ ಸಮಿತಿಯ ಆಡಳಿತಕ್ಕೊಳಪಟ್ಟು ಸ್ವತಂತ್ರಗೊಂಡ ಕೊನೆಯ ಪ್ರದೇಶ ಪಲಾವು ಗಣರಾಜ್ಯ.
13. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಛೇರಿ ಇಟಲಿ ದೇಶದ ರೋಮ್‌ನಲ್ಲಿದೆ.
14. ದ್ವಿತೀಯ ಮಹಾಯುದ್ಧದ ಬಳಿಕ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಸ್ಥಾಪನೆಯಾದ ಸಂಸ್ಥೆ ಯುನಿಸೆಫ್.
15. ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು ಎಂದು ಐ.ಎಮ್.ಎಫ್. ಸಂಸ್ಥೆಯನ್ನು ಕರೆಯಲಾಗಿದೆ.
16. ಕಾಮನ್ ವೆಲ್ತ್ ರಾಷ್ಟ್ರ ಸಂಘದಲ್ಲಿ 56 ಸದಸ್ಯ ರಾಷ್ಟ್ರಗಳಿವೆ.
17. "ಸಾರ್ಕ್" ಸಂಸ್ಥೆ 1985 ರಲ್ಲಿ ಸ್ಥಾಪನೆಯಾಯಿತು.
18. ಐರೋಪ್ಯ ಒಕ್ಕೂಟದ ಕೇಂದ್ರ ಕಛೇರಿ ಬೆಲ್ಜಿಯಂ ದೇಶದ ಬ್ರುಸೆಲ್ಸ್‌ನಲ್ಲಿದೆ.
19. ಆಫ್ರಿಕನ್ ಒಕ್ಕೂಟ ಸಂಸ್ಥೆಯು 1963 ರಲ್ಲಿ ಸ್ಥಾಪನೆಯಾಯಿತು.
20. ಶುಭಾಶಯ ಪತ್ರಗಳ ಮಾರಾಟದ ಮೂಲಕ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸುತ್ತದೆ.
21. ಇಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್
- ರಷ್ಯಾದ ಜೋಸೆಫ್ ಸ್ಟಾಲಿನ್
- ಅಮೆರಿಕಾದ ಫ್ರಾಂಕ್ಲಿನ್ ಡಿ. ರೂಸ್ ವೆಲ್ಟ್

22. ಅಮೆರಿಕಾ ಸಂಯುಕ್ತ ಸಂಸ್ಥಾನ, ಚೀನಾ, ಫ್ರಾನ್ಸ್, ರಷ್ಯಾ ಮತ್ತು ಯುನೈಟೆಡ್ ಕಿಂಗ್ ಡಂ.
23. ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು, ಕೋವಿಡ್–19 ಮುಂತಾದ ರೋಗಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲು ಯತ್ನಿಸುತ್ತಿದೆ.
- ಏಡ್ಸ್, ಕ್ಯಾನ್ಸರ್‌ನಂತಹ ಭೀಕರ ರೋಗಗಳಿಂದ ಪ್ರಪಂಚವನ್ನು ಮುಕ್ತಿಗೊಳಿಸಲು ಪ್ರಯತ್ನಿಸುತ್ತಿದೆ.
- ಸಿಡುಬು ರೋಗವನ್ನು ಸಮಗ್ರವಾಗಿ ನಿವಾರಿಸಿದೆ.
- ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಅಪೌಷ್ಟಿಕತೆಗಳ ನಿವಾರಣೆಗೆ ಶ್ರಮಿಸುತ್ತಿದೆ.

24. ಕೃಷಿ ಕ್ಷೇತ್ರದ ಅಭಿವೃದ್ಧಿ
- ಪೌಷ್ಟಿಕ ಆಹಾರ ಒದಗಿಸುವಿಕೆ
- ಜಾಗತಿಕ ಜನಸಮುದಾಯವನ್ನು ಹಸಿವಿನಿಂದ ಮುಕ್ತಗೊಳಿಸುವುದು
- ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟದ ಸುಧಾರಣೆ.

25. ದ್ವಿತೀಯ ಮಹಾಯುದ್ಧದ ಬಳಿಕ ಆರ್ಥಿಕ ಪುನಶ್ಚೇತನಕ್ಕಾಗಿ ಈ ಬ್ಯಾಂಕ್ ಸ್ಥಾಪನೆಗೊಂಡಿತು.
- ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕಗಳ ಅಭಿವೃದ್ಧಿಗಾಗಿ ಅಗಾಧ ಮೊತ್ತದ ಸಾಲ ನೀಡುತ್ತದೆ.
- ವಿಶ್ವ ವ್ಯಾಪಾರ ಹಾಗೂ ವಿದೇಶಿ ವಿನಿಮಯ ಪಾವತಿ ಸಮತೋಲನಕ್ಕೆ ಸಹಾಯ.
- ಎಲ್ಲಾ ಪ್ರಗತಿಪರ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಹೆಚ್ಚಿನ ಸಹಾಯ ಈ ಬ್ಯಾಂಕ್ ನೀಡುತ್ತದೆ.

26. (1) ಯುರೋಪಿಯನ್ ಸಮಿತಿ.
- (2) ಯುರೋಪಿಯನ್ ಆಯೋಗ.

• (3) ಯುರೋಪಿಯನ್ ಸಂಸತ್ತು.

• (4) ಯುರೋಪಿಯನ್ ನ್ಯಾಯಾಲಯ.

• (5) ಯುರೋಪಿಯನ್ ಕೇಂದ್ರ ಬ್ಯಾಂಕ್.

27. ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಮ್.ಎಫ್. ನ ಪಾತ್ರ

• ಅಂತರರಾಷ್ಟ್ರೀಯ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತದೆ.

• ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ ಸಹಕಾರ

• ಆರ್ಥಿಕ ಸ್ಥಿರತೆಗೆ ಸಹಕಾರ

• ಉತ್ತಮ ವಿದೇಶಿ ಪಾವತಿ ಸಮತೋಲನವನ್ನು ಕಾಯ್ದುಕೊಳ್ಳಲು ಸಹಕಾರ.

• ಆರ್ಥಿಕವಾಗಿ ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ಪರಸ್ಪರ ಸಂಬಂಧವನ್ನು ಬೆಸೆಯುವಲ್ಲಿ ಇದು ಪೂರಕ ಪಾತ್ರ ವಹಿಸುತ್ತಿದೆ.

28. ಸಾಮಾನ್ಯ ಸಭೆ

• ಭದ್ರತಾ ಮಂಡಳಿ

• ಆರ್ಥಿಕ ಮತ್ತು ಸಾಮಾಜಿಕ ಮಂಡಳಿ

• ದತ್ತಿ ಸಮಿತಿ

• ಅಂತರರಾಷ್ಟ್ರೀಯ ನ್ಯಾಯಾಲಯ

• ಸಚಿವಾಲಯ.

29. ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು.

• ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.

• ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು.

• ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕøತಿಕ, ಮಾನವೀಯ ಸಮಸ್ಯೆಗಳಿಗೆ ಪರಿಹಾರ.

• ಅಂತಾರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮಾನ್ಯತೆ ದೊರಕಿಸುವುದು.

• ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

30. ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕøತಿಕ, ಶೈಕ್ಷಣಿಕ, ಆರೋಗ್ಯ ವಿಷಯಗಳ ಅಧ್ಯಯನ ಹಾಗೂ ವರದಿ.

• ನಿರಾಶ್ರಿತರು, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆ ಮುಂತಾದ ವಿಚಾರಗಳು ಸಮಿತಿಯ ಕಾರ್ಯವ್ಯಾಪ್ತಿಯಲ್ಲಿವೆ.

• ಮಾನವ ಹಕ್ಕುಗಳು ಹಾಗೂ ಮೂಲಭೂತ ಸ್ವಾತಂತ್ರ್ಯಗಳ ಬಗ್ಗೆ ಶಿಫಾರಸ್ಸು.

• ಮಾನವ ಸಂಪನ್ಮೂಲ, ಸಂಸ್ಕøತಿ, ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನಗಳ ಸಂಘಟನೆ.

• ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ಐ.ಎಲ್.ಒ), ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಒ), ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂ ಹೆಚ್.ಒ) ಮುಂತಾದವುಗಳ ಕಾರ್ಯಗಳ ಸಮನ್ವಯ.

31. ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ

• ವಿಶ್ವಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿ ಮುಂತಾದವುಗಳ ಪ್ರೋತ್ಸಾಹ.

• ತಾಂತ್ರಿಕ ಶಿಕ್ಷಣ, ಮಾಧ್ಯಮ ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರಗಳು ಹಾಗೂ ಪರಿಸರ ವಿಜ್ಞಾನದ ಬಗೆಗೆ ಕಾರ್ಯೋನ್ಮುಖವಾಗುತ್ತದೆ.

• ಪ್ರಪಂಚದಾದ್ಯಂತ ಶಿಕ್ಷಣ ಮತ್ತು ಜ್ಞಾನ ಪ್ರಸಾರದ ನಿಟ್ಟಿನಲ್ಲಿ ಸರ್ಕಾರಗಳು ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಸಹಾಯ.

32. ಪ್ರಜಾತಂತ್ರವನ್ನು ಎತ್ತಿ ಹಿಡಿಯುವುದು.

• ಸ್ವಾತಂತ್ರ್ಯದ ಸಂರಕ್ಷಣೆ

• ಬಡತನ ನಿರ್ಮೂಲನೆ

• ವಿಶ್ವಶಾಂತಿ ನೆಲೆಗೊಳಿಸುವಿಕೆ.

• ಕ್ರೀಡೆ, ವಿಜ್ಞಾನ, ಹಾಗೂ ಕಲೆಯ ಬೆಳವಣಿಗೆ.

• ಪರಸ್ಪರ ಸದಸ್ಯ ರಾಷ್ಟ್ರಗಳ ಮೈತ್ರಿ ಬಲಪಡಿಸುತ್ತದೆ.

33. **ಸಾಮಾನ್ಯ ಸಭೆಯ ರಚನೆ:**

• ವಿಶ್ವಸಂಸ್ಥೆಯ ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡಿದೆ.

• ಪ್ರತಿಯೊಂದು ಸದಸ್ಯ ರಾಷ್ಟ್ರವೂ 5 ಪ್ರತಿನಿಧಿಗಳನ್ನು ಕಳುಹಿಸಿಕೊಡುತ್ತದೆ.

• ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದು ಮತದ ಹಕ್ಕು.

♦ **ಕಾರ್ಯಗಳು:**

♦ ಓರ್ವ ಅಧ್ಯಕ್ಷ, 17 ಉಪಾಧ್ಯಕ್ಷರು ಹಾಗೂ 7 ಸ್ಥಾಯಿ ಸಮಿತಿಗಳಿಗೆ 7 ಅಧ್ಯಕ್ಷರ ಆಯ್ಕೆ.

♦ ವಾರ್ಷಿಕ ಆಯವ್ಯಯ ಪಟ್ಟಿಗೆ ಒಪ್ಪಿಗೆ ನೀಡುತ್ತದೆ.

♦ ಭದ್ರತಾ ಮಂಡಳಿಯ ಖಾಯಂ ಅಲ್ಲದ 10 ಸದಸ್ಯ ರಾಷ್ಟ್ರಗಳನ್ನು ಆರಿಸುತ್ತದೆ.

♦ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿಯವರನ್ನು ಆಯ್ಕೆ ಮಾಡುತ್ತದೆ.

34. **ಭದ್ರತಾ ಮಂಡಳಿಯ ರಚನೆ:**

♦ ಭದ್ರತಾ ಮಂಡಳಿಯಲ್ಲಿ 15 ಸದಸ್ಯ ರಾಷ್ಟ್ರಗಳಿವೆ.

♦ 5 ಖಾಯಂ ಸದಸ್ಯ ರಾಷ್ಟ್ರಗಳಾಗಿವೆ.

♦ 10 ಖಾಯಂ ಅಲ್ಲದ ಸದಸ್ಯ ರಾಷ್ಟ್ರಗಳಾಗಿವೆ.

♦ ಅಮೇರಿಕಾ ಸಂಯುಕ್ತ ಸಂಸ್ಥಾನ, ಚೀನಾ, ಫ್ರಾನ್ಸ್, ರಷ್ಯಾ ಮತ್ತು ಯುನೈಟೆಡ್ ಕಿಂಗ್ ಡಂ ಇವು ಖಾಯಂ ಸದಸ್ಯ ರಾಷ್ಟ್ರಗಳಾಗಿವೆ.

♦ **ಕಾರ್ಯಗಳು :**

♦ ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕೆ ಪ್ರಯತ್ನ.

♦ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ನಿಯೋಜನೆ.

♦ ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ.

♦ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಹುದ್ದೆಯ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ.

35. ಕೊರಿಯಾ ವಿವಾದ, ಸೂಯೆಜ್ ಕಾಲುವೆಯ ಬಿಕ್ಕಟ್ಟು ಮತ್ತು ವಿಯೆಟ್ನಾಂ ಸಮಸ್ಯೆಗಳನ್ನು ಬಗೆಹರಿಸಿದೆ.

♦ ಕಾಶ್ಮೀರ ಸಮಸ್ಯೆ ಮತ್ತು ಪ್ಯಾಲಿಸ್ತೀನ್–ಇಸ್ರೇಲ್ ವಿವಾದದ ಪರಿಹಾರಕ್ಕೆ ಪ್ರಯತ್ನ.

♦ ನಿಶ್ಯಸ್ತ್ರೀಕರಣದ ಸಾಧನೆಯ ನಿಟ್ಟಿನಲ್ಲಿ ನಿರಂತರ ಪ್ರಯತ್ನ.

♦ ಅಂತರರಾಷ್ಟ್ರೀಯ ವ್ಯಾಪಾರ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನ.

♦ ಸಾಂಕ್ರಾಮಿಕ ಹಾಗೂ ಸಾಂಕ್ರಾಮಿಕವಲ್ಲದ ರೋಗಗಳ ನಿರ್ಮೂಲನೆಗೆ ಪ್ರಯತ್ನ.

♦ ವಿಶ್ವದಾದ್ಯಂತ ಮಾನವ ಹಕ್ಕುಗಳ ಜಾರಿಗೆ ಪ್ರಯತ್ನ.

♦ ವರ್ಣಭೇದ ನೀತಿ, ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವಗಳ ಅಂತ್ಯಕ್ಕೆ ಶ್ರಮಿಸುತ್ತಿದೆ.

♦ ಜಾಗತಿಕ ತಾಪಮಾನ ಹೆಚ್ಚಳದ ದುಷ್ಪರಿಣಾಮಗಳನ್ನು ತಡೆಯಲು ಶ್ರಮಿಸುತ್ತಿದೆ.

****

ಸಮಾಜಶಾಸ್ತ್ರ, ಅಧ್ಯಾಯ– 8

ಸಾಮಾಜಿಕ ಸ್ಥರವಿನ್ಯಾಸ

1. C) 17ನೇ ವಿಧಿ
2. A) ಪಂಪ
3. C) ಮಹಾತ್ಮ ಗಾಂಧೀಜಿ
4. B) 1976
5. D) ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯಿದೆ
6. C) ಜಾತಿ ಪದ್ಧತಿ
7. B) 1955

8. ಜನರನ್ನು ಆದಾಯ, ಶಿಕ್ಷಣ, ಜಾತಿ, ಲಿಂಗ, ಉದ್ಯೋಗ, ಮುಂತಾದವುಗಳ ಆಧಾರದ ಮೇಲೆ ಮೇಲು–ಕೀಳು ಎಂದು ವಿಂಗಡಿಸುವುದು.
9. ಪೂರ್ವಾಗ್ರಹ ಎಂದರೆ ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆ
10. 1989ರ ಶಾಸನ
11. ಪೂರ್ವಾಗ್ರಹಕ್ಕೆ ಕಾರಣವಾಗಿರುವ ತಾರತಮ್ಯ

♦ ಜಾತಿ ತಾರತಮ್ಯ

♦ ಲಿಂಗ ತಾರತಮ್ಯ

♦ ಪ್ರಾದೇಶಿಕ ತಾರತಮ್ಯ

• ಬಡವ – ಬಲ್ಲಿದ ಮೊದಲಾದ ತಾರತಮ್ಯಗಳು
• ತಿರಸ್ಕಾರ, ಅಗೌರವ, ದ್ವೇಷ ಮುಂತಾದವುಗಳು
12. ಭಾರತದಲ್ಲಿ ಜಾತಿ ಪದ್ಧತಿಯು ಅಸ್ತಿತ್ವದಲ್ಲಿದೆ
• ಈ ಪದ್ಧತಿಯು ಮೇಲು ಕೀಳಿನ ವ್ಯವಸ್ಥೆಯಾಗಿದೆ
• ಕೆಳ ಜಾತಿಯ ಜನರನ್ನು ಶೂದ್ರರು ಅಸ್ಪೃಶ್ಯರೆಂದು ಪರಿಗಣಿಸುತ್ತಾರೆ
• ಅವರ ಆಹಾರ ಉದ್ಯೋಗ ಮತ್ತು ಬದುಕಿನ ಹಕ್ಕನ್ನು ಕಸಿದುಕೊಳ್ಳಲಾಗಿತ್ತು
• ಸಾಮಾಜಿಕ ಸ್ತರವಿನ್ಯಾಸವು ಎಲ್ಲಾ ಸಮಾಜಗಳಲ್ಲಿ ಕಂಡು ಬರುತ್ತದೆ
• ಅಮೇರಿಕಾದಲ್ಲಿ ಬಿಳಿಯ ಚರ್ಮದ ಜನರು ಕಪ್ಪು ಚರ್ಮದ ಜನರನ್ನು ಗುಲಾಮರಂತೆ ನೋಡುತ್ತಾರೆ
• ಕಪ್ಪು ಚರ್ಮದ ಜನರನ್ನು ಮಾರಾಟ ಮಾಡುತ್ತಿದ್ದರು
• ಎಲ್ಲಾ ಕಡೆಯೂ ಬಡವರು ಶ್ರೀಮಂತರು ಎಂಬ ಭೇದ ಭಾವ ಇದೆ.
13. 17ನೇ ವಿಧಿ ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಿದೆ.
• ಅಸ್ಪೃಶ್ಯತೆಯ ಆಚರಣೆ ಶಿಕ್ಷಾರ್ಹ ಅಪರಾಧವಾಗಿದೆ.
• 1955ರಲ್ಲಿ "ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ" ಜಾರಿಗೆ.
• 1976ರಲ್ಲಿ ಇದನ್ನು "ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ" ಎಂದು ಬದಲಿಸಲಾಯಿತು.
• ಸಾರ್ವತ್ರಿಕ ಮತದಾನದ ಹಕ್ಕನ್ನು ನೀಡಿದೆ.
• ಸಮಾನತೆಯ ಹಕ್ಕನ್ನು ನೀಡಿದೆ.
• ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ನೀಡಿದೆ.
• 1989ರ ಶಾಸನವು ರಾಜ್ಯ ಸರ್ಕಾರಗಳಿಗೆ ಅಸ್ಪೃಶ್ಯತೆ ನಿರ್ಮೂಲನೆಯ ವಿಶೇಷ ಜವಾಬ್ದಾರಿ ವಹಿಸಿದೆ.
14. ಭಾರತದಲ್ಲಿ ಸ್ತರವಿನ್ಯಾಸ ವ್ಯವಸ್ಥೆಯನ್ನು ಜಾತಿ ಪದ್ಧತಿಯಲ್ಲಿ ಗುರುತಿಸಲಾಗಿದೆ.
• ಭಾರತೀಯ ಜನರು ಸಾವಿರಾರು ಜಾತಿ ಸಮೂಹಗಳಲ್ಲಿ ಹಂಚಿ ಹೋಗಿದ್ದಾರೆ.
• ಈ ಜಾತಿಗಳಲ್ಲಿ ಕೆಲವು ಮೇಲು ಜಾತಿ ಕೆಲವು ಕೀಳು ಜಾತಿ ಎನಿಸಿಕೊಂಡಿವೆ.
• ಅಸ್ಪೃಶ್ಯರನ್ನು ಸಮಾಜದ ಕಡೆಯ ಹಂತದವರೆಂದು ಪರಿಗಣಿಸಿತ್ತು.
• ಅಸ್ಪೃಶ್ಯತೆ ನಮ್ಮ ಸಮಾಜದ ಅಮಾನುಷವಾದ ಆಚರಣೆಯಾಗಿದೆ.
• ಕೆಳಜಾತಿಗಳು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ರಾಜಕೀಯ ಅವಕಾಶದಿಂದ ವಂಚಿತವಾದವು.
• ಮಹಾತ್ಮ ಗಾಂಧಿಯವರು ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದು ಹೇಳಿದ್ದಾರೆ.

****

ಸಮಾಜಶಾಸ್ತ್ರ, ಅಧ್ಯಾಯ– 9

ದುಡಿಮೆ ಮತ್ತು ಆರ್ಥಿಕ ಜೀವನ

1. C) ಶಿಕ್ಷಕರು
2. B) ಕೃಷಿ ಕಾರ್ಮಿಕರು
3. A) ಕೈಗಾರಿಕೀಕರಣ
4. A) ಜೀತದಾಳು
5. B) ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವುದು

6. ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತು ರೂಪದ ಪ್ರತಿಫಲ ಸಿಗುವುದಿದ್ದರೆ ಅದನ್ನು ದುಡಿಮೆ ಎನ್ನುವರು
7. ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣತಿ, ಕೌಶಲ್ಯ ಹಾಗೂ ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದನ್ನು ಶ್ರಮ ವಿಭಜನೆ ಎನ್ನಲಾಗಿದೆ.
8. 1976ರಲ್ಲಿ ಜಾರಿಗೊಳಿಸಿದೆ.
9. ದುಡಿಮೆಯಲ್ಲಿನ ತಾರತಮ್ಯ ನಿವಾರಿಸುವ ಸಲುವಾಗಿ ಸಮಾನ ವೇತನ ಕಾಯ್ದೆ ಜಾರಿಗೆ ತರಲಾಗಿದೆ.
10. ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣತಿ , ತರಬೇತಿ ಅಥವಾ ಕೌಶಲ್ಯ ಪಡೆಯುವುದೇ ವಿಶೇಷ ಪರಿಣತಿ
11. ಕೂಲಿ, ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲ ನೀಡುವ ದುಡಿಮೆಯ ಚಟುವಟಿಕೆ.

12. ಮನಃಸಂತೋಷದ ದೃಷ್ಟಿಯಿಂದ ಮಾನವನು ತೊಡಗುವ ಕ್ರಿಯೆಗಳೇ ಕೂಲಿ ರಹಿತ ದುಡಿಮೆ.

13. ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿಯೇ ನಿರುದ್ಯೋಗ

14. ಕೂಲಿ ಸಹಿತ ದುಡಿಮೆ	ಕೂಲಿ ರಹಿತ ದುಡಿಮೆ
♦ ಭೌತಿಕ ರೂಪದ ಪ್ರತಿಫಲ ನೀಡುವ ದುಡಿಮೆ ♦ ಆರ್ಥಿಕ ಪ್ರತಿಫಲಕ್ಕಾಗಿ ದುಡಿಮೆ ♦ ಉಪನ್ಯಾಸ ಮಾಡುವುದು, ಕಟ್ಟಡ ಕಟ್ಟುವುದು, ವಾಹನ ರಿಪೇರಿ	♦ ಮನಃಸಂತೋಷದ ದೃಷ್ಟಿಯಿಂದ ತೊಡಗುವ ಕ್ರಿಯೆ ♦ ಆರ್ಥಿಕ ಲಾಭ ಅಥವಾ ಪ್ರತಿಫಲವಿಲ್ಲದ ದುಡಿಮೆ ♦ ಕಲಾಕಾರನೊಬ್ಬನು ಆತ್ಮ ಸಂತೋಷಕ್ಕಾಗಿ ಚಿತ್ರವೊಂದನ್ನು ಬಿಡಿಸುವುದು,

15. ಅತಿಯಾದ ಜನಸಂಖ್ಯೆ
- ♦ ಯಾಂತ್ರೀಕರಣ
- ♦ ಅತಿಯಾದ ಶ್ರಮವಿಭಜನೆ
- ♦ ಸಾಮಾಜಿಕ ಅಸಮಾನತೆ
- ♦ ಬಂಡವಾಳದ ಕೊರತೆ
- ♦ ಅನಕ್ಷರತೆ

16. ಬಡತನ
- ♦ ಅನಾರೋಗ್ಯ
- ♦ ಭ್ರಷ್ಟಾಚಾರ
- ♦ ಕೌಟುಂಬಿಕ ವಿಘಟನೆ
- ♦ ಮೋಸ
- ♦ ವಂಚನೆ
- ♦ ಕಳ್ಳತನ
- ♦ ವ್ಯಭಿಚಾರ

17. ಜನಸಂಖ್ಯಾ ನಿಯಂತ್ರಣ ಕ್ರಮಗಳು
- ♦ ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ
- ♦ ಕೃಷಿ ಕ್ಷೇತ್ರದ ಅಭಿವೃದ್ಧಿ
- ♦ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ
- ♦ ಶೈಕ್ಷಣಿಕ ಸುಧಾರಣಾ ಯೋಜನೆಗಳು
- ♦ ಪಂಚವಾರ್ಷಿಕ ಯೋಜನೆಗಳು
- ♦ ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ
- ♦ ಗ್ರಾಮೀಣಾಭಿವೃದ್ಧಿ ಯೋಜನೆಗಳು
- ♦ ಉದ್ಯೋಗ ಖಾತರಿ ಯೋಜನೆ
- ♦ ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿ

18. ಸಂಘಟಿತ ಕೆಲಸಗಾರರು	ಅಸಂಘಟಿತ ಕೆಲಸಗಾರರು
♦ ಕಾನೂನು ಕಾಯ್ದೆಗಳಿಗೆ ಬದ್ಧತೆ. ♦ ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿ ವೇತನ ಸೌಲಭ್ಯಗಳಿರುತ್ತವೆ. ♦ ಅಧಿಕಾರದ ಏಣಿ ಶ್ರೇಣಿ ಇರುತ್ತದೆ. ♦ ವೈದ್ಯಕೀಯ ಸೌಲಭ್ಯಗಳಿವೆ ♦ ಕೆಲಸದ ಭದ್ರತೆ ಇರುತ್ತದೆ.	♦ ಕಾಯ್ದೆ ಕಾನೂನುಗಳಿರುವುದಿಲ್ಲ. ♦ ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿ ವೇತನ ಸೌಲಭ್ಯಗಳಿವುದಿಲ್ಲ. ♦ ಅಧಿಕಾರದ ಏಣಿ ಶ್ರೇಣಿ ಇರುವುದಿಲ್ಲ ♦ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ ♦ ಕೆಲಸದ ಭದ್ರತೆ ಇರುವುದಿಲ್ಲ

19. ದುಡಿಮೆಗೆ ನಿಗದಿತ ನಿಯಮ, ಕಾಯಿದೆಗಳಿರುವುದಿಲ್ಲ
- ♦ ಕಾಯ್ದೆ ಕಾನೂನುಗಳಿರುವುದಿಲ್ಲ
- ♦ ನಿಗದಿತ ಕಾರ್ಯಕ್ಷೇತ್ರ ಇರುವುದಿಲ್ಲ
- ♦ ಕಡಿಮೆ ಕೂಲಿ ನೀಡಲಾಗುತ್ತದೆ
- ♦ ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ

• ಕೆಲಸಕ್ಕೆ ಭದ್ರತೆ ಇರುವುದಿಲ್ಲ
• ನಿಗದಿತ ವೇತನ, ವಿರಾಮ ವೇತನ, ನಿವೃತ್ತಿ ವೇತನ ಹಾಗೂ ಭತ್ಯೆಗಳಿರುವುದಿಲ್ಲ
• ಶೋಷಣೆಗೆ ಒಳಗಾಗುವ ಸಾಧ್ಯತೆಗಳಿರುತ್ತವೆ

20. ಕಾನೂನು ಕಾಯ್ದೆಗಳಿಗೆ ಬದ್ಧತೆ
• ನಿಶ್ಚಿತ ನಿಯಮಗಳು
• ಅಧಿಕಾರದ ಏಣಿ ಶ್ರೇಣಿ
• ವಿಶೇಷ ಪರಿಣತಿ, ತರಬೇತಿ, ಪ್ರತಿಭೆ, ಅನುಭವ, ಶೈಕ್ಷಣಿಕ ಅರ್ಹತೆಗಳಿಗೆ ಅವಕಾಶ
• ಎಲ್ಲಾ ವ್ಯವಹಾರಗಳು ಬರಹ ರೂಪದಲ್ಲಿರುತ್ತವೆ.
• ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿ ವೇತನ ಸೌಲಭ್ಯ
• ವೈದ್ಯಕೀಯ ಸೌಲಭ್ಯ
• ನಿಗದಿತ ಕೆಲಸದ ಅವಧಿ

21. ದುಡಿಮೆಯಲ್ಲಿನ ತಾರತಮ್ಯತೆಯ ಸ್ವರೂಪ
• ದುಡಿಮೆ ಮತ್ತು ಕೂಲಿ ಹಂಚಿಕೆಯಲ್ಲಿನ ಅಸಮಾನತೆಯೇ ದುಡಿಮೆಯ ತಾರತಮ್ಯ.
• ಸ್ತ್ರೀ – ಪುರುಷರ ಉದ್ಯೋಗಗಳು ಒಂದೇ ಸಮನಾಗಿಲ್ಲ.
• ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತದೆ.
• ಪುರುಷರಿಗೆ ಹೆಚ್ಚಿನ ಹೊಣೆಗಾರಿಕೆ ಮತ್ತು ಸಂಬಳವನ್ನು ನೀಡಲಾಗುತ್ತದೆ.
• ಸ್ತ್ರೀಯರಿಗೆ ಕಡಿಮೆ ಹೊಣೆಗಾರಿಕೆ ಮತ್ತು ಸಂಬಳವನ್ನು ನೀಡಲಾಗುತ್ತದೆ.
• ಕೃಷಿಕ ಸಮಾಜವು ಕೆಲಸ ಕಾರ್ಯಗಳ ಅಸಮಾನ ಹಂಚಿಕೆ.
• ಕೂಲಿ ನೀಡುವುದರಲ್ಲಿಯೂ ಬೇದ ಭಾವ.

****

ಸಮಾಜಶಾಸ್ತ್ರ, ಅಧ್ಯಾಯ– 23
ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

1. C) ಕೇರಳ
2. B) ಅಪ್ಪಿಕೋ ಚಳವಳಿ
3. A) ಮೇಧಾ ಪಾಟ್ಕರ್
4. B) ಕೈಗಾ ಅಣುಸ್ಥಾವರ ವಿರೋಧಿ ಚಳವಳಿ
5. A) ಪ್ರೊ॥ ಎಂ. ಡಿ. ನಂಜುಂಡಸ್ವಾಮಿ

6. ಸಮೂಹದಲ್ಲಿರುವಾಗ ವ್ಯಕ್ತಿ ಮಾಡುವ ವರ್ತನೆಯೇ ಸಾಮೂಹಿಕ ವರ್ತನೆ.
7. ಯಾವುದೇ ಪೂರ್ವಯೋಜನೆ ಇಲ್ಲದೆ ಆನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.
8. ತೀರಾ ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯೇ ದೊಂಬಿ.
9. ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸಲು ಕಾರ್ಮಿಕ ಸಂಘಟನೆಗಳು ಮೂಲಕ ನಡೆಯುವ ಚಳವಳಿಗಳು
10. ಸಲ್ಯಾನಿ ಗ್ರಾಮದ ರೈತರು

11. ಪ್ರಚೋದಕ ಸನ್ನಿವೇಶ
• ವ್ಯಕ್ತಿಗಳ ಅನಿಯಂತ್ರಿತ ವರ್ತನೆ
• ಅನಾಗರಿಕ ನಡವಳಿಕೆ
• ಕಲಹ ನಡೆಸುವವರಲ್ಲಿನ ಅಪರಾಧಿ ಗುಣ
• ದೊಂಬಿಪರ ಮನೋಭಾವ

12. ಅಧಿಕಾರಿಗಳ ಸಮಯ ಪ್ರಜ್ಞೆ
• ಪೋಲೀಸ್

• ರಕ್ಷಣಾ ಪಡೆ
• ಕಾನೂನು ಮುಂತಾದ ಸಾಧನೆಗಳು

13. ಉತ್ತರಾಖಂಡದ ತೆಹ್ರಿ–ಘರ್ವಾಲ್ ಜಿಲ್ಲೆಯಲ್ಲಿ ಸರ್ಕಾರ ಮರ ಕಡಿಯಲು ಅನುಮತಿ ನೀಡಿತ್ತು.
• ಅರಣ್ಯ ನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ಜನರು ಮರಗಳನ್ನು ಅಪ್ಪಿ, ಕಡೆಯದಂತೆ ತಡೆದರು.
• ಸುಂದರ್ ಲಾಲ್ ಬಹುಗುಣ ಹಾಗೂ ಚಂಡಿಪ್ರಸಾದ್ ಭಟ್ಟರ ನೇತೃತ್ವದಲ್ಲಿ ನಡೆಯಿತು.
• ಮರ ಕಡಿಯಲು ನೀಡಿದ ಅನುಮತಿ ರದ್ದಾಯಿತು.

14. ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರು ನಡೆಸಿದರು.
• ಕಲಸೆ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದಾಗ ರೈತರು ಮರಗಳನ್ನು ಅಪ್ಪಿಕೊಂಡು ಪ್ರತಿಭಟಿಸಿದರು.
• ಮರಗಳ ಕಳ್ಳ ಸಾಗಾಣಿಕೆ ತಪ್ಪಿಸುವುದು ಹಾಗೂ ಪರಿಸರ ಮಹತ್ವದ ಬಗ್ಗೆ ಅರಿವು ಮೂಡಿಸುವುದು ರೈತರ ಉದ್ದೇಶವಾಗಿತ್ತು.

15. ನರ್ಮದಾ ನದಿಗೆ ಆಣೆಕಟ್ಟು ನಿರ್ಮಾಣದ ವಿರುದ್ಧ ನಡೆಯಿತು.
• ಮೇಧಾ ಪಾಟ್ಕರ್, ಬಾಬಾ ಆಮ್ಟೆ ನೇತೃತ್ವ ವಹಿಸಿದ್ದರು.
• ಅರಣ್ಯ ನಾಶ, ಪರಿಸರನಾಶ, ಜೀವ ಸಂಕುಲಗಳಿಗೆ ತೊಂದರೆ ಆಗುತ್ತದೆ ಎಂದು ಚಳವಳಿ ನಡೆಸಲಾಯಿತು.

16. ಕೇರಳದ ಮೌನಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಅಣೆಕಟ್ಟು ನಿರ್ಮಾಣದ ವಿರುದ್ಧ ನಡೆಯಿತು.
• ಅಣೆಕಟ್ಟಿನ ನಿರ್ಮಾಣದಿಂದ ಜೀವ ಪ್ರಭೇದಗಳು ಜೀವಿಸಲು ತೊಂದರೆಯಾಗುತ್ತದೆ.
• ಕೇರಳ ಸಾಹಿತ್ಯ ಪರಿಷತ್ತು ಮತ್ತು ವನ್ಯಮೃಗ ಆಸಕ್ತರು ಚಳವಳಿಯನ್ನು ನಡೆಸಿದರು.
• ಜೀವ ಸಂಕುಲ ಸಂರಕ್ಷಿಸುವಲ್ಲಿ ಯಶಸ್ವಿಯಾಯಿತು.

17. ಡಾ॥ ಶಿವರಾಮ ಕಾರಂತರ ನಾಯಕತ್ವದಲ್ಲಿ ಪ್ರಾರಂಭ.
• ಉತ್ತರ ಕನ್ನಡ ಜಿಲ್ಲೆಯ ಕೈಗಾದಲ್ಲಿ ಅಣು ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪನೆಯ ವಿರುದ್ಧ ನಡೆಯಿತು.
• ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ, ಜೀವ ಪ್ರಭೇದಗಳ ಮೇಲೆ ಹಾನಿಯಾಗುತ್ತದೆ, ಎಂದು ಚಳವಳಿ ನಡೆಸಲಾಯಿತು.

18. ತಾತ್ಕಾಲಿಕ ಸ್ವರೂಪದ ಸಮೂಹವಾಗಿರುತ್ತದೆ.
• ಜನ ಒಂದು ನಿರ್ದಿಷ್ಟ ಸ್ಥಳದಲ್ಲಿ ಒಟ್ಟಾಗಿ ಸೇರಿರುತ್ತಾರೆ.
• ಸದಸ್ಯರು ಪರಸ್ಪರ ಅಭಿಪ್ರಾಯ, ಭಾವನೆಗಳು ಮತ್ತು ಕ್ರಿಯೆಗಳ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ.
• ವ್ಯಕ್ತಿಯ ಅಂತರಾಳದ ಭಾವನೆಗಳು ಪ್ರಕಟವಾಗುವವು.
• ಸಮಾಜದ ಲೋಪದೋಷಗಳನ್ನು ಸೂಚಿಸುವುದು.
• ಸಾಮಾಜಿಕ ಸಂಸ್ಥೆಗಳ ಕಾರ್ಯವಿಧಾನದ ಬಗೆಗಿನ ಜನರ ಅಸಂತೃಪ್ತಿಯನ್ನು ಹೊರಹಾಕುತ್ತದೆ.

19. ಗೊಂದಲ ಸೃಷ್ಟಿಸುವುದೇ ಇದರ ಉದ್ದೇಶವಾಗಿರುತ್ತದೆ.
• ಜನಮಂದೆಯಲ್ಲಿ ಕಾಣುವಷ್ಟು ಕನಿಷ್ಠ ಮಟ್ಟದ ಉದ್ದೇಶ, ಏಕತೆ ಇರುವುದಿಲ್ಲ.
• ಕೆಲವೊಮ್ಮೆ ಅಪಾರ ಹಾನಿಯನ್ನುಂಟು ಮಾಡುತ್ತವೆ.
• ಆಕ್ರಮಣಕ್ಕೆ ನಿಶ್ಚಿತವಾದ ಗುರಿ ಇರುವುದಿಲ್ಲ.
• ಕಾನೂನು, ಸುವ್ಯವಸ್ಥೆಗೆ ಗಂಭೀರಸವಾಲುಗಳಾಗಿವೆ.

20. ಚಿಪ್ಕೋ ಚಳವಳಿ
• ಅಪ್ಪಿಕೋ ಚಳವಳಿ
• ನರ್ಮದಾ ಬಚಾವೋ ಆಂದೋಲನ
• ಮೌನ ಕಣಿವೆ ಆಂದೋಲನ
• ಕೈಗಾ ವಿರೋಧಿ ಚಳವಳಿ
• ಕರ್ನಾಟಕ ಕರಾವಳಿ ತೀರದ ವಿವಿಧ ಸ್ಥಾವರಗಳ ವಿರೋಧಿ ಚಳವಳಿ

****

ಸಮಾಜಶಾಸ್ತ್ರ, ಅಧ್ಯಾಯ– 24

ಸಾಮಾಜಿಕ ಸವಾಲುಗಳು

1. B) 1098
2. D) 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ
3. C) 1961
4. A) 1994
5. A) ಶಿಕ್ಷಣ ಹಕ್ಕು ಕಾಯ್ದೆ– 2009
6. C) 1986
7. B) ಕೂಲಿಯಿಂದ ಶಾಲೆಗೆ

8. ಅಪ್ರಾಪ್ತ ವಯಸ್ಸಿನ ಮಕ್ಕಳ ದುಡಿಮೆಯನ್ನು ಬಾಲಕಾರ್ಮಿಕತನ ಎನ್ನುವರು.
9. ಹುಡುಗಿಗೆ 18 ವರ್ಷ ಮತ್ತು ಹುಡುಗನಿಗೆ 21 ವರ್ಷದ ಒಳಗೆ ಮದುವೆ ಮಾಡುವದನ್ನು ಬಾಲ್ಯ ವಿವಾಹ ಎನ್ನುವರು.
10. ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದನ್ನು ಹೆಣ್ಣು ಭ್ರೂಣ ಹತ್ಯೆ ಎನ್ನುವರು.
11. ಜನನದ ನಂತರ ಹೆಣ್ಣು ಮಗುವನ್ನು ಹತ್ಯೆ ಮಾಡುವ ಕ್ರೂರ ಪದ್ಧತಿಯೇ ಹೆಣ್ಣು ಶಿಶು ಹತ್ಯೆ.
12. ಗರ್ಭದಲ್ಲಿರುವ ಲಿಂಗ ಪತ್ತೆ ಹಚ್ಚುವುದನ್ನು ನಿಯಂತ್ರಿಸಲು
13. 2006
14. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ– 2012 (ಪೋಕ್ಸೊ)
15. 2012 ನವೆಂಬರ್ 14

16. ಕಡುಬಡತನ
- ಕೌಟುಂಬಿಕ ಕಲಹ
- ವಿಚ್ಛೇದನ
- ಉದ್ಯಮಿಗಳ ಲಾಭಕೋರತನ
- ಅನಕ್ಷರತೆ
- ಮಕ್ಕಳ ಅಪಹರಣ

17. ಮಕ್ಕಳ ಅಗತ್ಯತೆಗಳ ಬಗ್ಗೆ ಕಾಳಜಿ ಇರುವುದಿಲ್ಲ.
- ದೈಹಿಕವಾಗಿ, ಮಾನಸಿಕವಾಗಿ ಹಿಂಸಿಸುವುದು.
- ಅನಾರೋಗ್ಯ, ಪೌಷ್ಠಿಕ ಆಹಾರ ಕೊರತೆ, ವೈದ್ಯಕೀಯ ಸೌಲಭ್ಯಗಳ ಕೊರತೆ.
- ಒತ್ತಾಯದ ದುಡಿತ, ಆರ್ಥಿಕ ಮತ್ತು ಸಾಮಾಜಿಕ ಶೋಷಣೆ.
- ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳಲಾಗುತ್ತಿದೆ.

18. ಬಡತನ
- ವರದಕ್ಷಿಣೆಯ ಭೀತಿ
- ಅನಕ್ಷರತೆ, ಅಜ್ಞಾನ
- ಸ್ತ್ರೀ ವಿರೋಧಿ ನಿಲುವುಗಳು

19. ಬಾಲಕಾರ್ಮಿಕ ನಿಷೇಧ & ನಿಯಂತ್ರಣ ಕಾಯ್ದೆ –1986
- ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ–1988
- 24 ನೇವಿಧಿ ಮಕ್ಕಳ ದುಡಿಮೆಯನ್ನು ನಿಷೇಧಿಸಿದೆ.
- ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿ–1987
- ಬಾಲಕಾರ್ಮಿಕರ ಪುನರ್ವಸತಿ ಕಲ್ಯಾಣನಿಧಿ ಸ್ಥಾಪನೆ.
- ಬಾಲಶ್ರಮ ನಿರ್ಮೂಲನ ಮತ್ತು ಪುನರ್ವಸತೀಕರಣ ಕಾಯ್ದೆ–2006
- ಕೂಲಿಯಿಂದ ಶಾಲೆಗೆ ಕಾರ್ಯಕ್ರಮ
- ಶಿಕ್ಷಣ ಹಕ್ಕು ಕಾಯಿದೆ –2009

20. ಬಾಲ್ಯ ವಿವಾಹಕ್ಕೆ ಕಾರಣಗಳು
- ಲಿಂಗ ತಾರತಮ್ಯ
- ಹೆಣ್ಣು ಮತ್ತು ಗಂಡು ಮಕ್ಕಳ ನಡುವಿನ ಭೇದಭಾವ
- ಶಿಕ್ಷಣ ಇಲ್ಲದಿರುವಿಕೆ, ಬಾಲಕಾರ್ಮಿಕತೆ
- ಮಕ್ಕಳ ಸಾಗಾಣಿಕೆ ಮತ್ತು ಮಾರಾಟ
- ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ
- ಸಾರ್ವಜನಿಕರ ಅಸಹಕಾರ
- ಮಕ್ಕಳ ಹಕ್ಕುಗಳ ದೋಷಪೂರಿತ ಅನುಷ್ಠಾನ

21. ಬಾಲ್ಯ ವಿವಾಹದ ದುಷ್ಪರಿಣಾಮಗಳು
- ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತ.
- ಮಕ್ಕಳು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ.
- ಮಕ್ಕಳ ಮೇಲೆ ದೌರ್ಜನ್ಯ, ಹಿಂಸೆ, ಶೋಷಣೆ.
- ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ.
- ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ.
- ಶಿಶುಮರಣ, ತಾಯಿಮರಣಕ್ಕೆ ಕಾರಣವಾಗುತ್ತದೆ.
- ಬಾಲ್ಯ, ಶಿಕ್ಷಣ, ಗೆಳೆಯರ ಒಡನಾಟಕ್ಕೆ ಧಕ್ಕೆ.

22. ಬಾಲ್ಯವಿವಾಹವನ್ನು ತಡೆಯಲು ಕ್ರಮಗಳು
- ಬಾಲ್ಯವಿವಾಹ ಎಲ್ಲೇ ನಡೆದರೂ ದೂರು ನೀಡುವುದು.
- ಮಕ್ಕಳ ಸಹಾಯವಾಣಿ-1098ಗೆ ದೂರು ನೀಡುವುದು.
- ಸರ್ಕಾರಿ ಶಾಲಾ ಮುಖ್ಯಶಿಕ್ಷಕ, ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಲೆಕ್ಕಿಗರಿಗೆ ದೂರು ನೀಡುವುದು.
- ಪೊಲೀಸ್ ಠಾಣೆಗೆ ದೂರು ನೀಡುವುದು.

23. 18 ವರ್ಷದ ತನಕ ಮಕ್ಕಳು ಶಾಲೆ/ಕಾಲೇಜು ಬಿಡದಿರುವಂತೆ ಶಿಕ್ಷಣದ ಅನುಷ್ಠಾನ.
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು.
- ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ ಆದ್ಯತೆ.
- ಮಕ್ಕಳ ಸಹಾಯವಾಣಿ- 1098 ಆರಂಭ.
- ಬಾಲ್ಯವಿವಾಹ ನಿಷೇಧ ಕಾಯಿದೆ- 2006 ಜಾರಿ.
- ಬಾಲ್ಯವಿವಾಹ ನಡೆದರೆ ದೂರು ನೀಡುವುದು.

24. ಸ್ತ್ರೀಯರ ಸ್ವಾಭಿಮಾನ, ಸ್ಥಾನಮಾನವನ್ನು ಕುಗ್ಗಿಸುತ್ತದೆ.
- ಕೌಟುಂಬಿಕ ಕಲಹಗಳನ್ನುಂಟು ಮಾಡುತ್ತದೆ.
- ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚುವುದು.
- ಕೌಟುಂಬಿಕ ಸಂಬಂಧಗಳು ಹಾಳಾಗುವುವು.
- ಮೋಸದ ವಿವಾಹಗಳು ನಡೆಯುತ್ತವೆ.
- ಹೆಣ್ಣು ಭ್ರೂಣ ಹತ್ಯೆ & ಹೆಣ್ಣು ಶಿಶು ಹತ್ಯೆಹೆಚ್ಚುತ್ತವೆ.
- ವಿವಾಹ ವಿಚ್ಛೇದನ ಪ್ರಕರಣಗಳು ಹೆಚ್ಚುತ್ತವೆ.
- ಸ್ತ್ರೀ ಪುರುಷರ ನಡುವೆ ಒಡಕು ಉಂಟಾಗುತ್ತದೆ.

25. ವರದಕ್ಷಿಣೆ ನಿಷೇಧ ಕಾಯ್ದೆ- 1961 ಜಾರಿ.
- ವರದಕ್ಷಿಣೆ ಷರತ್ತಿನ ಮೇರೆಗೆ ವಿವಾಹವಾಗುವುದು ನಿಷೇಧ.
- ಕಾಯ್ದೆ ಉಲ್ಲಂಘನೆಗೆ 5000 ರೂ.ಗಳ ದಂಡ, ಇಲ್ಲವೇ 6 ತಿಂಗಳ ಕಾರಾಗೃಹವಾಸ, ಇಲ್ಲವೇ ಎರಡನ್ನೂ ವಿಧಿಸಬಹುದು.
- ವರದಕ್ಷಿಣೆ ಸಾವು ಪ್ರಕರಣವನ್ನು 'ಭಾರತೀಯ ನ್ಯಾಯ ಸಂಹಿತೆ ಹಾಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ'ಗೆ ಸೇರಿಸಲಾಗಿದೆ.
- ಜನಜಾಗೃತಿ, ಅಂತರ್ಜಾತಿ ವಿವಾಹ, ಮಾಧ್ಯಮಗಳ ಮೂಲಕ ತೊಲಗಿಸಬಹುದು.
- ಮಹಿಳಾ ಸಂಘಟನೆಗಳ ಮೂಲಕ ತೊಲಗಿಸಬಹುದು.

****

ಭೂಗೋಳಶಾಸ್ತ್ರ, ಅಧ್ಯಾಯ– 10

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

ಮಾದರಿ ಉತ್ತರಗಳು

1. B) ಅಗಲವಾಗಿದೆ
2. B) ಮಹಾ ಹಿಮಾಲಯ
3. A) ಮೌಂಟ್ ಗಾಡ್ವಿನ್ ಆಸ್ಟಿನ್/ ಕೆ2
4. D) ಪರ್ಯಾಯ ಪ್ರಸ್ಥಭೂಮಿ
5. ನೀಲಗಿರಿ ಬೆಟ್ಟಗಳು
6. ಉತ್ತರ ಭಾರತದ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಾಣವಾಗಿರುವುದರಿಂದ ಸಂಚಯನ ಮೈದಾನ ಎನ್ನುವರು
7. ಶಿಮ್ಲಾ, ಮಸ್ಸೋರಿ, ರಾಣಿಖೇತ್, ನೈನಿತಾಲ್, ಚಕ್ರಾತ ಮತ್ತು ಡಾರ್ಜಿಲಿಂಗ್.
8. ಹಿಮಾಲಯದ ಪಾದಬೆಟ್ಟಗಳಲ್ಲಿರುವ ಸಮತಟ್ಟಾದ ಕಿರಿದಾದ ಮೈದಾನಗಳನ್ನು ಡೂನ್ ಎನ್ನುವರು.
9. ಪರ್ಯಾಯ ಪ್ರಸ್ಥಭೂಮಿ.
10. ಇದು ಸಂಪೂರ್ಣವಾಗಿ ಹಿಮದಿಂದ ಆವೃತವಾಗಿದೆ.
11. ಆನೈಮುಡಿ
12. ಇಂದಿರಾ ಪಾಯಿಂಟ್
13. $82^0 30^1$ ಪೂರ್ವ ರೇಖಾಂಶ
14. ಸಹ್ಯಾದ್ರಿ
15. ಉತ್ತರದ ಪರ್ವತಗಳು. • ಉತ್ತರದ ಮಹಾಮೈದಾನ • ಪರ್ಯಾಯ ಪ್ರಸ್ಥಭೂಮಿ • ಕರಾವಳಿ ಮೈದಾನಗಳು.
16. ಅಪಾರವಾದ ಖನಿಜ ಸಂಪನ್ಮೂಲಗಳಿವೆ.


• ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

17. ಪಶ್ಚಿಮ ಘಟ್ಟಗಳು	ಪೂರ್ವ ಘಟ್ಟಗಳು
• ಹೆಚ್ಚು ಎತ್ತರವಾಗಿವೆ • ನಿರಂತರವಾಗಿವೆ	• ಹೆಚ್ಚು ಎತ್ತರವಾಗಿಲ್ಲ • ನಿರಂತರವಾಗಿಲ್ಲ


18. ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.

• ಉತ್ತರ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಯುತ್ತವೆ.
• ನದಿಗಳ ಉಗಮ ಪ್ರದೇಶವಾಗಿವೆ.
• ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.
• ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ.
• ಖನಿಜ ಸಂಪನ್ಮೂಲಗಳನ್ನು ಹೊಂದಿವೆ.
• ಪ್ರವಾಸೋದ್ಯಮ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಸಿದ್ಧಿಯಾಗಿವೆ
• ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯತಾಣವಾಗಿವೆ.

IV. 19.



20



ಭೂಗೋಳಶಾಸ್ತ್ರ, ಅಧ್ಯಾಯ– 11

ಭಾರತದ ಋತುಗಳು

1. B) ಮಳೆ ನೆರಳಿನ ಪ್ರದೇಶದಲ್ಲಿವೆ
2. A) ಭೂಮಿ ಮತ್ತು ಸಾಗರಗಳ ನಡುವಿನ ಉಷ್ಣಾಂಶ ಮತ್ತು ಒತ್ತಡಗಳಲ್ಲಿನ ವ್ಯತ್ಯಾಸ
3. B) ಕಾಲ ಬೈಸಾಕಿ
4. A) ಆಂಡೀಸ್
5. D) ಮಾವಿನ ಹೂಯ್ಲು
6. C) ಕಾಫಿ ತುಂತುರು

7. ಬೇಸಿಗೆಯಲ್ಲಿ ಸೂರ್ಯನ ಲಂಬ ಕಿರಣಗಳು ಉತ್ತರಾರ್ಧ ಗೋಳದ ಮೇಲೆ ಬೀಳುವುದರಿಂದ
8. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳು
9. ಉತ್ತರ ಭಾರತದ ಪರ್ವತ ಪ್ರದೇಶ ಮತ್ತು ಪರ್ಯಾಯ ಪ್ರಸ್ಥಭೂಮಿಗಳು
10. ಅರಬ್ಬೀ ಸಮುದ್ರ ಶಾಖೆ ಮತ್ತು ಬಂಗಾಳ ಕೊಲ್ಲಿ ಶಾಖೆ
11. ತಮಿಳುನಾಡು
12. ಚಳಿಗಾಲ
13. ನೈಋತ್ಯ ಮಾನ್ಸೂನ್ ಮಾರುತಗಳ ಅರಬ್ಬೀ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಡುವುದರಿಂದ.
14. ಗಂಗಾನಗರ (ರಾಜಸ್ಥಾನ)
15. ಮಾಸಿನ್ ರಾಮ್ (ಮೇಘಾಲಯ)
16. ರೂಯ್ಲಿ (ರಾಜಸ್ಥಾನ)
17. ಭೂಮಿ ಮತ್ತು ಸಾಗರ ಭಾಗಗಳ ನಡುವಿನ ಉಷ್ಣಾಂಶ ಮತ್ತು ಒತ್ತಡದಲ್ಲಿನ ವ್ಯತ್ಯಾಸ.
18. ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತವಾಗಿರುವುದರಿಂದ.
19. ಬೇಸಿಗೆ ಕಾಲ– (ಮಾರ್ಚ್– ಮೇ)

- ನೈಋತ್ಯ ಮಾನ್ಸೂನ್ ಮಾರುತಗಳ ಕಾಲ ಅಥವಾ ಮುಂಗಾರು ಮಳೆಗಾಲ– (ಜೂನ್– ಸೆಪ್ಟೆಂಬರ್)
- ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು ಮಳೆಗಾಲ– (ಅಕ್ಟೋಬರ್– ನವೆಂಬರ್)
- ಚಳಿಗಾಲ– (ಡಿಸೆಂಬರ್– ಫೆಬ್ರವರಿ)

20. ಅಕ್ಷಾಂಶ

- ಸಮುದ್ರಮಟ್ಟದಿಂದ ಇರುವ ಎತ್ತರ
- ಸಾಗರಗಳಿಂದ ಇರುವ ದೂರ
- ಮಾರುತಗಳ ದಿಕ್ಕು
- ಪರ್ವತ ಸರಣಿಗಳು ಹಬ್ಬಿರುವ ರೀತಿ
- ಸಾಗರ ಪ್ರವಾಹಗಳು.

21. ಅಕ್ಟೋಬರ್ ತಿಂಗಳ ಕೊನೆಯ ಭಾಗದಲ್ಲಿ ಭಾರತ ಉಪಖಂಡದಲ್ಲಿ ಮಳೆ ಸುರಿದ ಪರಿಣಾಮ ಉಷ್ಣಾಂಶ ಕಡಿಮೆಯಾಗುತ್ತದೆ.

- ಈ ಅವಧಿಯಲ್ಲಿ ಸೂರ್ಯನ ಕಿರಣಗಳು ದಕ್ಷಿಣಾರ್ಧಗೋಳದ ಮೇಲೆ ಲಂಬವಾಗಿ ಬೀಳುತ್ತವೆ.
- ಇದರಿಂದ ಉತ್ತರಾರ್ಧಗೋಳದಲ್ಲಿ ಉಷ್ಣಾಂಶ ಕಡಿಮೆಯಾಗಿ ಆ ಪ್ರದೇಶವು ಹೆಚ್ಚು ಒತ್ತಡ ಪ್ರದೇಶವಾಗಿ ಪರಿವರ್ತನೆಯಾಗುತ್ತದೆ.

22. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ

- ಪಶ್ಚಿಮ ಬಂಗಾಳ
- ಅಸ್ಸಾಂ
- ಈಶಾನ್ಯ ರಾಜ್ಯಗಳು.

23. ಜನರ ಪ್ರಧಾನ ಉದ್ಯೋಗ ವ್ಯವಸಾಯವಾಗಿದೆ.

- ನೈಋತ್ಯ ಮಾನ್ಸೂನ್ ಮಾರುತಗಳು ಭಾರತದ ವ್ಯವಸಾಯವನ್ನು ನಿಯಂತ್ರಿಸುತ್ತವೆ.
- ಮಳೆ ಹೆಚ್ಚಾದಾಗ ಪ್ರವಾಹ ಉಂಟಾಗಿ ಹಾನಿಯಾಗುತ್ತದೆ.
- ಮಳೆ ವಿಫಲವಾದರೆ ಬರಗಾಲ ಬರುವುದು.
- ಆದ್ದರಿಂದ ಭಾರತದ ವ್ಯವಸಾಯವನ್ನು ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ ಎನ್ನುವರು.

ಭೂಗೋಳಶಾಸ್ತ್ರ, ಅಧ್ಯಾಯ– 12

ಭಾರತದ ಮಣ್ಣುಗಳು

1. B) ಕೆಂಪು ಮಣ್ಣು
2. C) ಮೆಕ್ಕಲು ಮಣ್ಣು
3. A) ಕಪ್ಪು ಮಣ್ಣು
4. B) ಕಪ್ಪು ಮಣ್ಣು
5. A) ಕೆಂಪು ಮಣ್ಣು
6. B) ಜಂಬಿಟ್ಟಿಗೆ ಮಣ್ಣು
7. A) ಮರುಭೂಮಿ ಮಣ್ಣು
8. A) ಪರ್ವತ ಮಣ್ಣು
9. D) ಜಂಬಿಟ್ಟಿಗೆ ಮಣ್ಣು
10. A) ಕಪ್ಪು ಮಣ್ಣು

11. ಹತ್ತಿ ಬೆಳೆಗೆ ಬಹು ಸೂಕ್ತವಾಗಿರುವುದರಿಂದ
12. ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುವುದರಿಂದ
13. ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ
14. ಕಣಗಳ ನಡುವೆ ಅಧಿಕ ರಂಧ್ರತೆ ಇರುವುದರಿಂದ ನೀರುನಿಲ್ಲದೆ ತೀವ್ರವಾಗಿ ಬಸಿದು ಹೋಗಿ, ಬೇಗ ಆರ್ದ್ರತೆ ಕಡಿಮೆಯಾಗುತ್ತದೆ.
15. 200 ಸೆಂ,ಮೀಗಳಿಗಿಂತ ಹೆಚ್ಚು ಮಳೆ ಬೀಳುವುದರಿಂದ.
16. ಭೂಮೇಲ್ಮೈಯಲ್ಲಿ ಕಂಡು ಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯೇ ಮಣ್ಣಿನ ಸವೆತ ಅಥವಾ ಭೂ ಸವೆತ.
17. ಮಣ್ಣಿನ ಸವೆತವನ್ನು ತಡೆಗಟ್ಟುವುದು ಹಾಗೂ ಅದರ ಫಲವತ್ತತೆ ಕಾಪಾಡುವುದು.
18. ಜಲಾಶಯಗಳಲ್ಲಿ ಹೂಳು ತುಂಬುವುದರಿಂದ.

19. ಹರಿಯುವ ನೀರು, ಗಾಳಿ, ಸಮುದ್ರದ ಅಲೆ ಮುಂತಾದವು.
20. ಅರಣ್ಯಗಳ ನಾಶ
- ಹೆಚ್ಚು ಮೇಯಿಸುವುದು
- ಅವೈಜ್ಞಾನಿಕ ಬೇಸಾಯ
- ಅಧಿಕ ನೀರಾವರಿ ಬಳಕೆ
- ಇಟ್ಟಿಗೆ, ಹೆಂಚು ಮತ್ತು ಮಡಿಕೆ ತಯಾರಿಕೆಗೆ ಮೇಲ್ಮಣ್ಣಿನ ಅತಿಯಾದ ಬಳಕೆ
- ರಭಸವಾಗಿ ಹರಿಯುವ ನೀರು ಮತ್ತು ಪ್ರವಾಹ

21. ಕೊಳೆತ ಜೈವಿಕಾಂಶಗಳನ್ನುಅಧಿಕ ಪ್ರಮಾಣದಲ್ಲಿ ಹೊಂದಿದೆ.
- ಸಾರಜನಕ ಮತ್ತು ಸಾವಯವ ಅವಶೇಷಗಳನ್ನು ಹೆಚ್ಚಾಗಿ ಒಳಗೊಂಡಿದೆ.
- ಹಿಮಾಲಯದ ಪಾದ ಬೆಟ್ಟಗಳು ಹಿಮಾಚಲ ಪ್ರದೇಶ, ಉತ್ತರಾಖಂಡ, ಜಮ್ಮು-ಕಾಶ್ಮೀರಗಳಲ್ಲಿ ಹಂಚಲ್ಪಟ್ಟಿದೆ.
- ಕಾಫಿ, ಚಹಾ, ಸಾಂಬಾರ ಪದಾರ್ಥಗಳು ಮತ್ತು ಹಣ್ಣುಗಳಿಗೆ ಸೂಕ್ತವಾಗಿದೆ.

22. ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ.
- ಕನ್ಯಾಕುಮಾರಿಯಿಂದ ಝಾನ್ಸಿಯವರೆಗೆ ಹಬ್ಬಿದೆ.
- ಕಛ್ ಪ್ರದೇಶದಿಂದ ರಾಜಮಹಲ್ ಬೆಟ್ಟಗಳವರೆಗೂ ವ್ಯಾಪಿಸಿದೆ.
- ರಾಗಿ, ಹೊಗೆಸೊಪ್ಪು, ಎಣ್ಣೆಕಾಳುಗಳು, ಕಬ್ಬು ಪ್ರಮುಖ ಬೆಳೆಗಳು.

23. ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.
- ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.
- ಜಲಾಶಯ ಮತ್ತು ಕೆರೆಗಳ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.
- ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುತ್ತದೆ.

♦ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.

♦ ಕೃಷಿ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ.

31. ಕಪ್ಪು ಮಣ್ಣು	ಜಂಬಿಟ್ಟಿಗೆ ಮಣ್ಣು
♦ ಅಗ್ನಿಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ. ♦ ಫಲವತ್ತಾಗಿದೆ. ♦ ಕಬ್ಬಿಣ, ಸುಣ್ಣ ಮತ್ತು ಮೆಗ್ನೀಷಿಯಂ ಕಾರ್ಬೋನೇಟ್ ಗಳನ್ನು ಅಧಿಕವಾಗಿ ಹೊಂದಿದೆ. ♦ ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ ಬೆಳೆಗಳಿಗೆ ಸೂಕ್ತವಾಗಿದೆ. ♦ ಒಣ ಬೇಸಾಯಕ್ಕೆ ಸೂಕ್ತವಾಗಿದೆ. ♦ ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಉತ್ತರ ಕರ್ನಾಟಕದಲ್ಲಿ ಹರಡಿದೆ.	♦ 200 ಸೆಂ.ಮೀ.ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಉತ್ಪತ್ತಿಯಾಗಿದೆ. ♦ ಫಲವತ್ತತೆ ಅತಿ ಕಡಿಮೆ. ♦ ಸಾರಜನಕ ಮತ್ತು ಲವಣಗಳ ಕೊರತೆಯಿದೆ. ♦ ಕಾಫಿ, ಟೀ, ತೋಟಗಾರಿಕೆ ಬೆಳೆಗಳಿಗೆ ಸೂಕ್ತವಾಗಿದೆ. ♦ ಮಳೆಗಾಲದಲ್ಲಿ ಮೃದುವಾಗಿ ಬೇಸಿಗೆಯಲ್ಲಿ ಒಣಗಿ ಗಟ್ಟಿಯಾಗುತ್ತದೆ. ♦ ಪಶ್ಚಿಮಘಟ್ಟಗಳು, ವಿಂಧ್ಯ, ಸಾತ್ಪುರ, ಪೂರ್ವಾಚಲ ಪ್ರದೇಶಗಳಲ್ಲಿ ಹರಡಿದೆ.

32. ಮೆಕ್ಕಲು ಮಣ್ಣು

♦ ಕಪ್ಪು ಮಣ್ಣು

♦ ಕೆಂಪು ಮಣ್ಣು

♦ ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು

♦ ಮರುಭೂಮಿ ಮಣ್ಣು

♦ ಪರ್ವತ ಮಣ್ಣ

33.

ಮರುಭೂಮಿ ಮಣ್ಣು	ಮೆಕ್ಕಲು ಮಣ್ಣು
♦ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ನಿರ್ಮಾಣ. ♦ ರಾಜಸ್ಥಾನ, ಪಂಜಾಬ್, ಹರಿಯಾಣ, ಕಛ್ ಪ್ರದೇಶಗಳಲ್ಲಿ ಹರಡಿದೆ. ♦ ಕಣಗಳ ನಡುವೆ ಅಧಿಕ ರಂದ್ರತೆ ಇರುತ್ತದೆ. ♦ ನೀರು ನಿಲ್ಲದೆ ತೀವ್ರವಾಗಿ ಬಸಿದು ಹೋಗುತ್ತದೆ. ♦ ಸಜ್ಜೆ, ಖರ್ಜೂರ ಬೆಳೆಯಬಹುದು.	♦ ನದಿಗಳು ಪರ್ವತಗಳಿಂದ ಹೊತ್ತು ತಂದು ಸಂಚಯಿಸಿದ್ದರಿಂದ ನಿರ್ಮಾಣ. ♦ ಭಾರತದಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿದೆ. ♦ ಉತ್ತರಪ್ರದೇಶ, ಬಿಹಾರ, ಪಂಜಾಬ್, ಹರಿಯಾಣಗಳಲ್ಲಿ ಹರಡಿದೆ. ♦ ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಪ್ರಮುಖ ಬೆಳೆಗಳು.

34. ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.

♦ ಅಡ್ಡ ಬದುಗಳನ್ನು ನಿರ್ಮಿಸುವುದು.

♦ ಹಂತ-ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ.

♦ ಅರಣ್ಯ ನಾಶವನ್ನು ತಡೆಗಟ್ಟುವುದು.

♦ ಅರಣ್ಯಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.

♦ ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.

♦ ನೀರಿನ ಯೋಜಿತ ಬಳಕೆ.

♦ ಚೆಕ್ ಡ್ಯಾಮ್‌ಗಳ ನಿರ್ಮಾಣ

****

ಭೂಗೋಳಶಾಸ್ತ್ರ, ಅಧ್ಯಾಯ– 13

ಭಾರತದ ಅರಣ್ಯ ಸಂಪತ್ತು

1. B) ಗಂಗಾನದಿ ಮುಖಜಭೂಮಿ

2. A) ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು

3. D) ಹೆಚ್ಚಿನ ಎತ್ತರ ಹಾಗೂ ವೈವಿಧ್ಯಮಯ ವಾಯುಗುಣ

4. A) ಮರುಭೂಮಿ ಅರಣ್ಯಗಳು

5. D) ಮಧ್ಯಪ್ರದೇಶ

6. B) ಹರಿಯಾಣ

7. D) ಮ್ಯಾಂಗ್ರೋವ್ ಅರಣ್ಯಗಳು

8. C) ನೀಲಗಿರಿ ಜೀವಿಗೋಳ ಮೀಸಲು ಪ್ರದೇಶ

9. ಸುಂದರಿ ಮರಗಳು ಹೇರಳವಾಗಿರುವುದರಿಂದ

10. ಒಂದು ಪ್ರದೇಶದಲ್ಲಿ ಪ್ರಕೃತಿದತ್ತವಾಗಿ ಬೆಳೆದಿರುವ ಎಲ್ಲಬಗೆಯ ಸಸ್ಯ ಸಮೂಹ.

11. ಇವುಗಳು ವರ್ಷದ ನಿರ್ದಿಷ್ಟ ಒಣಹವೆಯ ಋತುವಿನಲ್ಲಿ ಎಲೆ ಉದುರಿಸುವುದರಿಂದ

12. ಅರಣ್ಯಗಳನ್ನು ಮಾನವ, ಪ್ರಾಣಿಗಳು ಹಾಗೂ ನೈಸರ್ಗಿಕ ವಿಪತ್ತುಗಳಿಂದ ಕಾಪಾಡುವುದು

13. ವಿವಿಧ ಪ್ರಾಣಿಗಳನ್ನು ಅವುಗಳ ಮೂಲ ಸ್ಥಳದಲ್ಲಿಯೇ ಸಂರಕ್ಷಿಸಲು.

14. ಉತ್ತರಾಖಂಡದ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ.

15. ಸಸ್ಯ ಸಮೃದ್ಧತೆಯ ಜೊತೆಗೆ ಪ್ರಾಣಿಸಂಪತ್ತಿನ ವೈವಿಧ್ಯತೆ ಒಳಗೊಂಡಿರುವ ಜೈವಿಕ ವ್ಯವಸ್ಥೆಗಳನ್ನು ಕಾಪಾಡಲು.

16. ಸಾಲ್, ಬೈರಾ, ಟೂನ್, ಸಿಲ್ವರ್, ಸ್ಪ್ರೂಸ್, ಲಾರೆಲ್.

17. ಭಾರತದಲ್ಲಿ ಅತಿ ಹೆಚ್ಚು ವಿಸ್ತಾರವಾಗಿ ಹರಡಿವೆ.

♦ 75 ರಿಂದ 250 ಸೆಂ.ಮೀ ಮಳೆ ಬೀಳುವ ಪ್ರದೇಶದಲ್ಲಿ ವಿಸ್ತರಿಸಿವೆ.

♦ ವರ್ಷದ ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ ಎಲೆ ಉದುರಿಸುತ್ತವೆ.

18.

ನಿತ್ಯಹರಿದ್ವರ್ಣದ ಅರಣ್ಯಗಳು	ಎಲೆ ಉದುರಿಸುವ ಅರಣ್ಯಗಳು
♦ 250 ಸೆಂ.ಮೀಗಿಂತ ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಹರಡಿವೆ.	♦ 75 ರಿಂದ 250 ಸೆಂ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಹರಡಿವೆ.
♦ ಪಶ್ಚಿಮಘಟ್ಟಗಳು, ಅಸ್ಸಾಂ, ಮೇಘಾಲಯ, ತ್ರಿಪುರ, ಮಣಿಪುರ, ಅಂಡಮಾನ್–ನಿಕೋಬಾರ್ ಹಾಗೂ ಲಕ್ಷದ್ವೀಪಗಳಲ್ಲಿ ಕಂಡುಬರುತ್ತವೆ.	♦ ಭಾರತದಲ್ಲಿ ಅತಿ ಹೆಚ್ಚು ವಿಸ್ತಾರವಾಗಿ ಹರಡಿವೆ. ♦ ನಿರ್ದಿಷ್ಟ ಒಣಹವೆಯ ಋತುವಿನಲ್ಲಿ ಎಲೆ ಉದುರಿಸುತ್ತವೆ.
♦ ವರ್ಷವಿಡೀ ಹಸಿರಾಗಿರುತ್ತವೆ.	♦ ಭಾರತದ ಒಟ್ಟು ಅರಣ್ಯ ಪ್ರದೇಶದ ಶೇ.65.50 ಭಾಗದಲ್ಲಿ ಹರಡಿವೆ.

19. ವ್ಯವಸಾಯದ ವಿಸ್ತರಣೆ.

♦ ಹೈನುಗಾರಿಕೆ.

♦ ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ.

♦ ನೀರಾವರಿ ಯೋಜನೆಗಳ ನಿರ್ಮಾಣ.

♦ ಕಾಡ್ಗಿಚ್ಚು.

♦ ಗಣಿಗಾರಿಕೆ.

20. ನಿತ್ಯಹರಿದ್ವರ್ಣದ ಅರಣ್ಯಗಳು.

♦ ಎಲೆಉದುರಿಸುವ ಮಾನ್ಸೂನ್ ಅರಣ್ಯಗಳು.

♦ ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು.

♦ ಮ್ಯಾಂಗ್ರೋವ್ ಅರಣ್ಯಗಳು.

♦ ಮರುಭೂಮಿ ಅರಣ್ಯಗಳು.

♦ ಹಿಮಾಲಯದ ಆಲ್ಪೈನ್ ಅರಣ್ಯಗಳು.

21. ತಮಿಳುನಾಡು–ಮದುಮಲೈ, ಕನ್ಯಾಕುಮಾರಿ.

♦ ಪಶ್ಚಿಮಬಂಗಾಳ–ಮಹಾನಂದ, ಚಪ್ರಮರಿ.

♦ ರಾಜಸ್ಥಾನ–ಬಸ್ಸಿ, ಸವಾಯಿ ಮಾನ್ ಸಿಂಗ್.

♦ ಹರಿಯಾಣ–ಕಲೇಸಾರ್, ನಹರ್.

♦ ಪಂಜಾಬ್ –ಬಿರ್ ಮೋತಿಭಾಗ್, ಹರಿಕೆ.

♦ ಆಂಧ್ರಪ್ರದೇಶ–ಕೊಲ್ಲೇರು, ಕೃಷ್ಣಾ.

22. ಕಾಜಿರಂಗ ರಾಷ್ಟ್ರೀಯ ಉದ್ಯಾನವನ– ಅಸ್ಸಾಂ

♦ ಸುಂದರಬನ್ ರಾಷ್ಟ್ರೀಯ ಉದ್ಯಾನವನ–ಪಶ್ಚಿಮಬಂಗಾಳ

• ಹಜಾರಿಬಾಗ್ ರಾಷ್ಟ್ರೀಯ ಉದ್ಯಾನವನ–ಜಾರ್ಖಂಡ್
• ಗಿರ್ ರಾಷ್ಟ್ರೀಯ ಉದ್ಯಾನವನ–ಗುಜರಾತ್
• ಕನ್ಹಾ ರಾಷ್ಟ್ರೀಯ ಉದ್ಯಾನವನ–ಮಧ್ಯಪ್ರದೇಶ
• ತಡೋಬಾ ರಾಷ್ಟ್ರೀಯ ಉದ್ಯಾನವನ–ಮಹಾರಾಷ್ಟ್ರ

23. ಶುದ್ಧವಾಯು, ಆಹಾರ ಹಾಗೂ ಮೇವನ್ನು ಪೂರೈಸುತ್ತವೆ.
• ಉತ್ತಮ ಮಳೆ ತರಲು ಸಹಾಯಕವಾಗಿವೆ.
• ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ.
• ಪ್ರಾಣಿ, ಪಕ್ಷಿಗಳಿಗೆ ಆಶ್ರಯ ತಾಣವಾಗಿವೆ.
• ಔಷಧಿಯ ಸಸ್ಯಗಳ ಆಗರವಾಗಿವೆ.
• ಪ್ರವಾಸಿಗರನ್ನು ಆಕರ್ಷಿಸುತ್ತವೆ.
• ಉದ್ಯೋಗವಕಾಶಗಳನ್ನು ಒದಗಿಸುತ್ತವೆ.
• ಜೈವಿಕ ಪರಿಸರ ಸಮತೋಲನವನ್ನು ಕಾಪಾಡುತ್ತವೆ.

24. ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
• ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
• ಸಸಿಗಳನ್ನು ನೆಡುವುದು.
• ಬೀಜಗಳನ್ನು ಹರಡುವುದು.
• ಕಾನೂನು ಬಾಹಿರವಾಗಿ ಮರ ಕಡಿಯುವುದನ್ನು ನಿಯಂತ್ರಿಸುವುದು.
• ಅರಣ್ಯಗಳಲ್ಲಿ ಸಾಕುಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು.
• ಸಾರ್ವಜನಿಕರನ್ನು ಗಿಡ ನೆಡಲು ಪ್ರೋತ್ಸಾಹಿಸುವುದು.
• ಜನರಿಗೆ ತಿಳುವಳಿಕೆ ನೀಡಿ ಅರಣ್ಯ ರಕ್ಷಣೆಗೆ ಪ್ರೇರೇಪಿಸುವುದು.
• ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಕಾರ್ಯಗತಗೊಳಿಸುವುದು.

****

ಭೂಗೋಳಶಾಸ್ತ್ರ, ಅಧ್ಯಾಯ– 14
ಭಾರತದ ಜಲ ಸಂಪನ್ಮೂಲಗಳು

1) C) ಭಾರತ
2) D) ಆಂಧ್ರ ಪ್ರದೇಶ
3) B) ದಾಮೋದರ ನದಿಕಣಿವೆ ಯೋಜನೆ
4) A) ಹಿರಾಕುಡ್ ಅಣೆಕಟ್ಟು
5) B) ಕೋಸಿ ನದಿ
6) B) ಕೃಷ್ಣಾ ನದ
7. A) ದಾಮೋದರ ನದಿಯು ಬಂಗಾಳದ ದುಃಖದ ನದಿಯಾಗಿ ಉಳಿದಿಲ್ಲ
8. A) ಹಿರಾಕುಡ್
9. A) ಭಾಕ್ರಾ ನಂಗಲ್

10. ವ್ಯವಸಾಯದ ಭೂಮಿಗೆ ಕೃತಕವಾಗಿ ಕಾಲುವೆ, ಬಾವಿ ಮತ್ತು ಕೆರೆಗಳಿಂದ ನೀರು ಸರಬರಾಜು ಮಾಡುವುದು.
11. ತೆಹ್ರಿ ಅಣೆಕಟ್ಟು
12. ಕೋಸಿ ಯೋಜನೆ
13. ಮಳೆ ನೀರನ್ನು ಸಂಗ್ರಹಿಸಿ ಬಳಕೆ ಮಾಡುವುದನ್ನು ಮಳೆಕೊಯ್ಲು ಎಂದು ಕರೆಯುವರು.
14.ಮಳೆ ನೀರು ಹರಿದು ಹೋಗದಂತೆ ತಡೆಯೊಡ್ಡಿ ಭೂಮಿಯಲ್ಲಿ ಇಂಗುವಂತೆ ಮಾಡುವುದರಿಂದ ಅಂತರ್ಜಲ ಮಟ್ಟವು ಮರುಪೂರಣಗೊಳ್ಳುವುದು.
15. ಪಶ್ಚಿಮ ಬಂಗಾಳದಲ್ಲಿ ಪ್ರವಾಹಗಳಿಂದ ಜೀವ ಹಾಗೂ ಆಸ್ತಿಗೆ ಅಪಾರ ಹಾನಿ ಉಂಟು ಮಾಡುತ್ತದೆ.

16. ಹೆಚ್ಚುವರಿ ವಿದ್ಯುತ್ತನ್ನು ಕೊರತೆಯಿರುವ ಪ್ರದೇಶಗಳಿಗೆ ಸಾಗಿಸಲು ಹಾಗೂ ವಿದ್ಯುತ್ತನ್ನು ಸಮರ್ಪಕವಾಗಿ ಪ್ರಸರಣ ಮಾಡಲು ನಿರ್ಮಿಸಿರುವುದೇ ರಾಷ್ಟ್ರೀಯ ವಿದ್ಯುತ್ ಜಾಲ.

17. ಬಾವಿ ನೀರಾವರಿ

• ಕೆರೆ ನೀರಾವರಿ

• ಕಾಲುವೆ ನೀರಾವರಿ

18. ದೇಶದಲ್ಲಿ ಅತಿ ಹೆಚ್ಚು ಕೃಷಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸುತ್ತದೆ.

• ಕಡಿಮೆ ಮಳೆ ಬೀಳುವ ಭಾಗಗಳಲ್ಲಿ ಹೆಚ್ಚು ಉಪಯುಕ್ತವಾಗಿದೆ.

• ಬಾವಿಗಳ ನಿರ್ಮಾಣ ಮತ್ತು ನಿರ್ವಹಣೆ ಸುಲಭ.

• ಕೆರೆ ಮತ್ತು ಕಾಲುವೆ ನೀರಾವರಿ ಸೌಲಭ್ಯವಿಲ್ಲದ ಭಾಗಗಳಲ್ಲಿ ಅವಶ್ಯಕ.

19.

ಸರ್ವಕಾಲಿಕ ಕಾಲುವೆ	ಪ್ರವಾಹ ಕಾಲುವೆ
• ನದಿಗಳಿಗೆ ಆಣೆಕಟ್ಟುಗಳನ್ನು ಕಟ್ಟಿ, ನೀರನ್ನು ಸಂಗ್ರಹಿಸಿ, ಕೃಷಿ ಭೂಮಿಗೆ ನೀರನ್ನೊದಗಿಸಲು ನಿರ್ಮಿಸಲಾಗುತ್ತದೆ. • ಬಹುತೇಕ ಎಲ್ಲಾ ಕಾಲಗಳಲ್ಲಿಯೂ ನೀರು ಹರಿಯುವುದು.	• ಆಣೆಕಟ್ಟುಗಳನ್ನು ಕಟ್ಟದೆ ನದಿಗಳಿಂದ ನೇರವಾಗಿ ತೋಡುವ ಕಾಲುವೆಗಳು. • ನದಿಗಳು ತುಂಬಿ ಹರಿಯುವಾಗ ಮಾತ್ರ ನೀರು ಹರಿಯುವುದು.

20. ನೀರು ಅತಿ ಅಮೂಲ್ಯವಾದದು.

• ಭಾರತದಲ್ಲಿ ಜಲಸಂಪತ್ತಿನ ಹಂಚಿಕೆಯು ತಾರತಮ್ಯಗಳಿಂದ ಕೂಡಿದೆ.

• ಹೆಚ್ಚು ಮಳೆ ಬೀಳುವ ಪ್ರದೇಶಗಳೂ ಮಳೆರಹಿತ ಪ್ರದೇಶಗಳಾಗುತ್ತಿವೆ.

• ಮಳೆಗಾಲದ ಅವಧಿ ಕಡಿಮೆಯಾಗಿದೆ.

• ಬೇಸಿಗೆಯಲ್ಲಿ ನೀರಿನ ಕೊರತೆ ಕಂಡುಬರುತ್ತದೆ.

• ಜಲಕ್ಷಾಮದ ಪರಿಹಾರಕ್ಕೆ ಸರಳ ಮಾರ್ಗವಾಗಿದೆ.

21. ಮಳೆ ನೀರು ಸಂಗ್ರಹಣೆ ಮಾಡುವ ವಿಧಾನಗಳು

• ಮಳೆಬಿದ್ದ ಸ್ಥಳದಲ್ಲಿಯೇ ನೀರನ್ನು ಸಂಗ್ರಹಿಸುವುದು.

• ಮಳೆ ಬಿದ್ದ ನಂತರ ಹರಿಯುವ ನೀರನ್ನು ಸಂಗ್ರಹಿಸುವುದು.

• ವ್ಯವಸಾಯ ಕ್ಷೇತ್ರಗಳಲ್ಲಿ ಹೊಂಡಗಳನ್ನು ತೋಡಿ ನೀರನ್ನು ಸಂಗ್ರಹಿಸುವುದು.

• ಹರಿಯುವ ಮಳೆ ನೀರನ್ನು ತಡೆದು ಇಂಗಿಸುವುದು.

• ಮನೆಯ ಮೇಲ್ಛಾವಣಿಯ ಮೇಲೆ ಬಿದ್ದ ನೀರನ್ನು ಸಂಗ್ರಹಿಸುವುದು.

• ಹರಿಯುವ ನೀರಿಗೆ ಅಡ್ಡಗಟ್ಟೆಗಳನ್ನು ನಿರ್ಮಿಸಿ ಸಣ್ಣ ಹೊಂಡ, ಕೆರೆಗಳಲ್ಲಿ ನೀರನ್ನು ಸಂಗ್ರಹಿಸುವುದು.

22. ಭಾರತದಲ್ಲಿ ನೀರಾವರಿಯ ಅವಶ್ಯಕತೆ

• ನೀರಿನ ಲಭ್ಯತೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗಿದೆ.

• ನೀರಿನ ಲಭ್ಯತೆ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗಿದೆ.

• ಅಸಮಾನ ಮಳೆಯ ಹಂಚಿಕೆ.

• ಮಳೆಯು ಅನಿಶ್ಚಿತ ಹಾಗೂ ನಿಯತಕಾಲಿಕವಾಗಿದೆ.

• ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಮತ್ತು ವ್ಯವಸಾಯವು ಅತ್ಯಂತ ಪ್ರಧಾನವಾಗಿರುವ ಕಡೆ ನೀರಾವರಿ ಅವಶ್ಯಕ.

23. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳು

• ನೀರಾವರಿ ಸೌಲಭ್ಯವನ್ನು ಒದಗಿಸುವುದು.

• ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು.

• ನದಿಗಳ ಪ್ರವಾಹವನ್ನು ನಿಯಂತ್ರಿಸುವುದು.

• ನೌಕಾಯಾನದ ಸೌಲಭ್ಯವನ್ನು ಒದಗಿಸುವುದು.


• ಗೃಹಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು.

• ಮಣ್ಣಿನ ಸವಕಳಿಯ ನಿಯಂತ್ರಣ.

• ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು.

• ಅರಣ್ಯ ಸಂಪತ್ತನ್ನು ವೃದ್ಧಿಸುವುದು.

VI. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಪ್ರಮುಖ ವಿವಿದೋದ್ದೇಶ ನದಿ ಕಣಿವೆ ಯೋಜನೆಗಳನ್ನು ಗುರುತಿಸಿ.



****

ಭೂಗೋಳಶಾಸ್ತ್ರ, ಅಧ್ಯಾಯ– 25

ಭಾರತದ ಭೂ ಬಳಕೆ ಹಾಗೂ ಕೃಷಿ

1. B) ಸ್ಥಿರ ಬೇಸಾಯ
2. C) ಪಶ್ಚಿಮ ಬಂಗಾಳ
3. A) ಪಂಜಾಬ್
4. C) ಸ್ಥಳಾಂತರ ಬೇಸಾಯ
5. B) ವಾಣಿಜ್ಯ ಬೇಸಾಯ

6. ವಿವಿಧ ಉದ್ದೇಶಗಳಿಗೆ ಭೂಮಿಯನ್ನು ಬಳಸುವುದನ್ನೇ ಭೂ ಬಳಕೆ ಎನ್ನುವರು.
7. ತೋಟಗಾರಿಕೆ ಬೇಸಾಯದ ಪ್ರಗತಿಯನ್ನು ಸುವರ್ಣ ಕ್ರಾಂತಿ ಎನ್ನುವರು.
8. ಮಣ್ಣಿನ ರಾಸಾಯನಿಕ ಸಂಯೋಜನೆಯ ಬದಲಾವಣೆಗಳಿಂದಾಗಿ/ ಫಲವತ್ತತೆ ಕಡಿಮೆಯಾಗಿ
9. ನಿಪ್ಪಾಣಿ.
10. ವಾಣಿಜ್ಯ ಮಾದರಿಯ ಪುಷ್ಪ ಕೃಷಿ / ಬೇಸಾಯವನ್ನು ಫ್ಲೋರಿಕಲ್ಚರ್ ಎನ್ನುವರು.
11. ಹಿಂಗಾರು/ ರಬಿ ಬೇಸಾಯದ ಅವಧಿ
12. ಬೆಳೆಯು ಕೊಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರಬೇಕಾದುದರಿಂದ.
13. ಒಂದು ವರ್ಷದಲ್ಲಿ ಒಂದೇ ವ್ಯವಸಾಯ ಕ್ಷೇತ್ರ ದಿಂದ 2–3 ಬೆಳೆಗಳನ್ನು ಬೆಳೆಯುವುದಕ್ಕೆ ಸಾಂದ್ರ ಬೇಸಾಯ ಎನ್ನುವರು.
14. ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಹುಟ್ಟುವಳಿಗಳನ್ನು ಬೆಳೆಯುವುದಕ್ಕೆ ಜೀವನಾಧಾರ ಬೇಸಾಯ ಎನ್ನುವರು.
15. ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವದಕ್ಕಷ್ಟೇ ಅಲ್ಲದೆ ದನ ಕರು, ಕೋಳಿ, ಜೇನು, ಹಂದಿ ಸಾಕಾಣಿಕೆ ಮುಂತಾದ ಉದ್ದೇಶಗಳಿಗೆ ಬಳಸುವುದೇ ಮಿಶ್ರ ಬೇಸಾಯ.

16. ಮುಂಗಾರು ಅಥವಾ ಖಾರೀಫ್ ಬೇಸಾಯ

• ಹಿಂಗಾರು ಅಥವಾ ಚಳಿಗಾಲದ ಅಥವಾ ರಬಿ ಬೇಸಾಯ

• ಬೇಸಿಗೆಯ ಅಥವಾ ಜೇಡ್ ಬೇಸಾಯ

17. 20^0–25^0 ಸೆ ಉಷ್ಣಾಂಶ

• 75–150 ಸೆಂ.ಮೀಗಿಂತ ಹೆಚ್ಚು ಮಳೆ

• ಕಪ್ಪು ಮಣ್ಣು ಮತ್ತು ಮೆಕ್ಕಲು ಮಣ್ಣು ಸೂಕ್ತ.

18. ವೈವಿಧ್ಯಮಯ ಭೂ ಸ್ವರೂಪ

- ವಾಯುಗುಣ
- ಮಣ್ಣು
- ನೀರಾವರಿ ಸೌಲಭ್ಯ
- ಕಾರ್ಮಿಕರು
- ಮಾರುಕಟ್ಟೆ
- ಸರ್ಕಾರದ ಉತ್ತೇಜನ.

19. **ಪ್ರಾಕೃತಿಕ ಅಂಶಗಳು–** ಭೂ ಸ್ವರೂಪಗಳು, ವಾಯುಗುಣ, ಮಣ್ಣಿನ ಲಕ್ಷಣಗಳು.

- **ಆರ್ಥಿಕ ಅಂಶಗಳು–** ಭೂ ಹಿಡುವಳಿ, ಮಾರುಕಟ್ಟೆ, ಜನಸಂಖ್ಯೆ, ವ್ಯವಸಾಯೋತ್ಪನ್ನಗಳ ಬೇಡಿಕೆ, ಉದ್ಯೋಗ.
- **ಸಾಮಾಜಿಕ ಅಂಶಗಳು–** ಜನರ ಮನೋಭಾವ, ಸಾಮಾಜಿಕ ಪರಿಸ್ಥಿತಿ ಮೊದಲಾದವು.
- **ಇತರೆ ಅಂಶಗಳು–** ತಾಂತ್ರಿಕತೆ, ನೀರಾವರಿ ಸೌಲಭ್ಯ, ಮಾನವನ ಸಾಮರ್ಥ್ಯ, ಭೂ ಒಡೆತನ.

20. ನಿವ್ವಳ ಸಾಗುವಳಿ ಕ್ಷೇತ್ರ

- ಅರಣ್ಯ ಭೂಮಿ
- ವ್ಯವಸಾಯೇತರ ಭೂ ಬಳಕೆ
- ಬೀಳು ಭೂಮಿ
- ಹುಲ್ಲುಗಾವಲು
- ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ.

21. ಸಾಂದ್ರ ಬೇಸಾಯ

- ಜೀವನಾಧಾರ ಬೇಸಾಯ
  - A) ಸ್ಥಿರ ಬೇಸಾಯ
  - B) ಸ್ಥಳಾಂತರ ಬಬೇಸಾಯ
- ವಾಣಿಜ್ಯ ಬೇಸಾಯ
- ಮಿಶ್ರ ಬೇಸಾಯ
- ತೋಟಗಾರಿಕಾ ಬೇಸಾಯ

22. ಭಾರತೀಯರ ಮುಖ್ಯ ಉದ್ಯೋಗವಾಗಿದೆ.

- ಆಹಾರ ಧಾನ್ಯಗಳನ್ನು ಪೂರೈಸುತ್ತದೆ.
- ಜೀವನಾಧಾರ ಉದ್ಯೋಗವಾಗಿದೆ.
- ಹೆಚ್ಚು ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿದೆ.
- ಹಲವಾರು ಕೈಗಾರಿಕೆಗಳನ್ನು ಪೋಷಿಸುತ್ತದೆ.
- ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ.

23. **ನೈಸರ್ಗಿಕ ಅಂಶಗಳು–** ಭೂ ಸ್ವರೂಪ, ವಾಯುಗುಣ ಮತ್ತು ಮಳೆ.

- **ಆರ್ಥಿಕ ಅಂಶಗಳು–** ಹಿಡುವಳಿಯ ಗಾತ್ರ, ಲಾಭ ಪಡೆಯುವಿಕೆ.
- **ಸಾಮಾಜಿಕ ಅಂಶಗಳು–** ಸಂಪ್ರದಾಯ, ಮೂಡನಂಬಿಕೆ, ಅನಕ್ಷರತೆ, ರೈತರ ಮನೋಭಾವ / ರೈತರ ಧೋರಣೆ.
- **ಇತರೆ ಅಂಶಗಳು–** ನೀರಿನ ಪೂರೈಕೆ, ಮಾರುಕಟ್ಟೆ, ರಾಸಾಯನಿಕ ಗೊಬ್ಬರ, ಸಾರಿಗೆ ಸಂಪರ್ಕ, ಸುಧಾರಿತ ತಳಿಗಳು.

****

ಭೂಗೋಳಶಾಸ್ತ್ರ, ಅಧ್ಯಾಯ– 26

ಭಾರತದ ಖನಿಜ ಹಾಗೂ ಶಕ್ತಿ ಸಂಪನ್ಮೂಲಗಳು

1. C) ಬಾಂಬೆ ಹೈ
2. C) ಪೆಟ್ರೋಲಿಯಂ
3. C) ಯುದ್ಧ ಮತ್ತು ಶಾಂತಿಕಾಲಗಳಲ್ಲಿ ಬಳಕೆಯಾಗುತ್ತದೆ .
4. A) ಪೆಟ್ರೋಲಿಯಂ
5. A) ಅಭ್ರಕ

6. C) ಪಾವಗಡ

7. ಬೆರಿಲಿಯಂ

8. ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿರುವುದರಿಂದ.

9. ವೈವಿಧ್ಯಮಯ ಉಪಯೋಗಗಳಿಗಾಗಿ ಬಳಸಲ್ಪಡುವುದರಿಂದ

10. ಚಿನ್ನ

11. ಕರ್ನಾಟಕದ ಹಟ್ಟಿ ಚಿನ್ನದ ಗಣಿ

12. ಅಸ್ಲಾಂನ ದಿಗ್ಬಾಯ್

13. ಭೂಮಿಯ ವಾಯುಮಂಡಲದ ಉಷ್ಣಾಂಶ ಹೆಚ್ಚಾಗುವ ಸಂಭವನೀಯತೆಯೇ ಗ್ಲೋಬಲ್ ವಾರ್ಮಿಂಗ್.

14. ಬಹು ಉಪಯೋಗಿ ಶಕ್ತಿ ಸಂಪನ್ಮೂಲವಾಗಿರುವುದರಿಂದ

15. ರಾಜಸ್ಥಾನದ ಬಾರ್ ಮರ್

16. ಕೀಟ ನಿರೋಧಕಗಳು ♦ ಸ್ಫೋಟಕ ವಸ್ತುಗಳು ♦ ಕೃತಕ ನಾರು ♦ ರಾಸಾಯನಿಕ ಗೊಬ್ಬರಗಳು ♦ ಪ್ಲಾಸ್ಟಿಕ್

♦ ಕೃತಕ ರಬ್ಬರ್ ತಯಾರಿಕೆಯಲ್ಲಿ ಹಾಗೂ ವಿದ್ಯುತ್ ಉತ್ಪಾದನೆಯಲ್ಲಿ ಬಳಸುತ್ತಾರೆ.

17. ಭಾರತದಲ್ಲಿ ಬಳಸುವ ಶಕ್ತಿ ಸಂಪನ್ಮೂಲಗಳಲ್ಲಿ ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳೇ ಪ್ರಧಾನವಾಗಿವೆ.

♦ ಈ ಶಕ್ತಿ ಸಂಪನ್ಮೂಲಗಳ ಉತ್ಪಾದನೆಯು ಕಡಿಮೆಯಿದೆ.

♦ ಇದನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ.

♦ ರಾಷ್ಟ್ರೀಯ ಆದಾಯದ ಮೇಲೆ ಪರಿಣಾಮ ಉಂಟಾಗುತ್ತದೆ.

♦ ಆದ್ದರಿಂದ ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಉಪಯೋಗ ಅನಿವಾರ್ಯವಾಗಿದೆ.

18. ಪೈರೋಲೋಸೈಟ್

♦ ಸೈಲೋಮೆಲೆನ್

♦ ಮ್ಯಾಂಗನೈಟ್

♦ ಬ್ರಾನೈಟ್

♦ ಹೋಲ್ಯಾಂಡೈಟ್

19. ಉಕ್ಕಿನ ಉತ್ಪಾದನೆಯಲ್ಲಿ ಬಳಸುವರು.

♦ ರಾಸಾಯನಿಕಗಳ ತಯಾರಿಕೆಯಲ್ಲಿ ಬಳಸುವರು.

♦ ವಿದ್ಯುತ್ ಉಪಕರಣಗಳ ತಯಾರಿಕೆಯಲ್ಲಿ ಬಳಸುವರು.

♦ ಬಣ್ಣದ ಗಾಜುಗಳ ತಯಾರಿಕೆಯಲ್ಲಿ ಬಳಸುವರು.

20. ಶಾಖ ನಿರೋಧಕ ಹಾಗೂ ವಿದ್ಯುತ್ ನಿರೋಧಕ ವಸ್ತುವಾಗಿ ಟೆಲಿಫೋನ್, ಟೆಲಿಗ್ರಾಫ್ ,ನಿಸ್ತಂತು ಸೇವೆ, ಗಾಜು ತಯಾರಿಕೆ, ಬಣ್ಣ ಹಾಗೂ ವಾರ್ನಿಷ್ , ಕೃತಕ ರಬ್ಬರ್ ಡೈನೊಮೋಗಳು, ರಾಸಾಯನಿಕ ಕೈಗಾರಿಕೆಗಳಲ್ಲಿ ಉಪಯೋಗಿಸಲಾಗುತ್ತದೆ.

21. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು.

♦ ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವುದು.

♦ ಬದಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು.

♦ ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹಿಸುವುದು.

♦ ಶಕ್ತಿ ಸಂಪನ್ಮೂಲಗಳನ್ನು ಮಿತವಾಗಿ ಬಳಸಲು ತಿಳುವಳಿಕೆ ನೀಡುವುದು.

♦ ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು.

****

ಭೂಗೋಳಶಾಸ್ತ್ರ, ಅಧ್ಯಾಯ– 27

ಭಾರತದ ಸಾರಿಗೆ ಹಾಗೂ ಸಂಪರ್ಕ

1. D) ಮುಂಬೈ

2. D) ಕೋಲ್ಕತ್ತಾ

3. A) ರಾಷ್ಟ್ರೀಯ ಹೆದ್ದಾರಿ 44

4. C) 1995

5. D) ವಿಶಾಖಪಟ್ಟಣಂ
6. A) ಜಿ.ಪಿ.ಎಸ್.

7. ನಾವಿಕ್
8. ವಸ್ತುಗಳು ಸೇವೆಗಳು ಮಾಹಿತಿ ಮತ್ತು ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದನ್ನೇ ಸಾರಿಗೆ ಎನ್ನುವರು.
9. ಲಡಾಖ್ ನ ಉಮ್ಲಿಂಗ್ಲಾ ಕಣಿವೆಯಲ್ಲಿ
10. 1988
11. ವಸ್ತುವನ್ನು ಭೌತಿಕವಾಗಿ ಸ್ಪರ್ಶಿಸದೆ ದೂರದಿಂದಲೇ ಅವುಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಣೆ.
12. ಮುಂಬೈ ಬಂದರಿನ ಹೆಚ್ಚಿನ ಒತ್ತಡವನ್ನು ನಿವಾರಿಸಲು
13. ಎಲ್ಲಾ ಜನರನ್ನು ತಲುಪುವ ಸಂಪರ್ಕ ಮಾಧ್ಯಮವೇ ಸಮೂಹ ಮಾಧ್ಯಮ.

14. ರಸ್ತೆ ಸಾರಿಗೆ
- ರೈಲು ಸಾರಿಗೆ
- ಜಲ ಸಾರಿಗೆ
- ವಾಯು ಸಾರಿಗೆ

15. ರಾಷ್ಟ್ರೀಯ ಹೆದ್ದಾರಿಗಳು
- ರಾಜ್ಯ ಹೆದ್ದಾರಿಗಳು
- ಜಿಲ್ಲಾ ರಸ್ತೆಗಳು
- ಗ್ರಾಮೀಣ ರಸ್ತೆಗಳು

16. ಆರ್ಥಿಕ ಅಭಿವೃದ್ಧಿಯ ಸಾಧನವಾಗಿದೆ
- ಪ್ರಯಾಣಿಕರು ಹಾಗೂ ಸರಕು ಸಾಗಣೆಗೆ ತುಂಬಾ ಅನುಕೂಲ
- ಕಡಿಮೆ ವೆಚ್ಚದಲ್ಲಿ ಪ್ರಯಾಣಕ್ಕೆ ಅವಕಾಶ
- ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳನ್ನು ತ್ವರಿತವಾಗಿ ಸಾಗಿಸಲು ಸಹಾಯಕ

17. ಹಳ್ಳಿಯ ಮತ್ತು ಕೃಷಿಯ ಅಭಿವೃದ್ಧಿಗೆ ಅವಶ್ಯಕ
- ಹಳ್ಳಿಗಳಿಗೆ ಅವಶ್ಯಕ ವಸ್ತುಗಳನ್ನು ಪೂರೈಸಲು ಸಹಾಯಕ
- ರೈಲು ಸಾರಿಗೆಗೆ ಪೂರಕವಾಗಿದೆ
- ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಸಹಾಯಕ
- ಸರಕು ಸಾಗಾಣಿಕೆಗೆ ಸಹಾಯಕ

18. ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಅನುಪಯುಕ್ತವಾಗಿರುತ್ತವೆ
- ಪರಿಸರ ಮಾಲಿನ್ಯ, ವಾಹನ ದಟ್ಟಣೆ ಹಾಗೂ ಅಪಘಾತಗಳಿಗೆ ಕಾರಣವಾಗಿವೆ
- ಮಳೆ, ಪ್ರವಾಹ ಮತ್ತು ಚಂಡಮಾರುತಗಳಿಂದ ಪ್ರತಿ ವರ್ಷವೂ ಹಾಳಾಗುತ್ತಿವೆ
- ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯು ಅಸಮರ್ಪಕ
- ರಸ್ತೆಗಳ ಬದಿಯಲ್ಲಿ ಅಗತ್ಯವಿರುವ ಮೂಲಸೌಕರ್ಯಗಳ ಕೊರತೆಯನ್ನು ಕಾಣಬಹುದು

19. ತೂತುಕುಡಿ
- ಚೆನ್ನೈ
- ವಿಶಾಖಪಟ್ಟಣಂ
- ಪಾರಾದೀಪ್
- ಕೋಲ್ಕತ್ತ
- ಹಾಲ್ದಿಯಾ

20. ಕಾಂಡ್ಲಾ

♦ ಮುಂಬೈ
♦ ನವಶೇವಾ
♦ ಮರ್ಮಗೋವಾ
♦ ನವ ಮಂಗಳೂರು
♦ ಕೊಚ್ಚಿ


21. ದೇಶದ ಜನರಿಗೆ ವಿವಿಧ ಪ್ರದೇಶಗಳ ಆಗು-ಹೋಗುಗಳನ್ನು ತಿಳಿಸುತ್ತವೆ
♦ ಸರಕಾರದ ನೀತಿ ನಿಯಮಗಳನ್ನು ತಿಳಿಸಿ ತಿಳುವಳಿಕೆಯನ್ನು ಮೂಡಿಸಬಹುದು
♦ ವ್ಯವಸಾಯ, ಕೈಗಾರಿಕೆ ಮುಂತಾದವುಗಳ ಜ್ಞಾನವನ್ನು ನೀಡುತ್ತವೆ
♦ ವಾಣಿಜ್ಯ ಮತ್ತು ವ್ಯಾಪಾರದ ಅಭಿವೃದ್ಧಿಗೆ ಮೂಲ ಅಗತ್ಯವಾಗಿವೆ
♦ ದೇಶದ ಏಕತೆ, ಒಗ್ಗಟ್ಟು ಹಾಗೂ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಅನುಕೂಲವಾಗುವುದು.

22. ತಂತ್ರಜ್ಞಾನ ಆಧಾರಿತ ನಕ್ಷೆಗಳು ಹೆಚ್ಚು ಆಕರ್ಷಕವಾಗಿವೆ.
♦ ಮಾಹಿತಿಯನ್ನು ಸ್ಪಷ್ಟವಾಗಿ ನೀಡುತ್ತವೆ.
♦ ವಿವಿಧ ಬಗೆಯ ಮಾಹಿತಿಯನ್ನು ವಿಶ್ಲೇಷಿಸಬಹುದು.
♦ ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಅಗತ್ಯ.
♦ ಇದು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದೆ.
♦ ನಕ್ಷೆಗಳನ್ನು ಅತಿ ಶೀಘ್ರವಾಗಿ ಪಡೆಯಬಹುದು.
♦ ಕಡಿಮೆ ಅವಧಿಯಲ್ಲಿ ಮಾಹಿತಿ ಪಡೆಯಬಹುದು.


23. ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕೈಗೊಳ್ಳಲು ಉಪಯುಕ್ತ
♦ ಅರಣ್ಯ ಹಾಗೂ ಪರ್ವತ ಚಾರಣ ಮಾಡುವವರಿಗೆ ಮಾರ್ಗ ತಿಳಿಯಲು ಉಪಯುಕ್ತ
♦ ಸಾರಿಗೆ ನಿರ್ವಹಣೆಯಲ್ಲಿಯೂ ಇದರ ಬಳಕೆ ಹೆಚ್ಚಾಗಿದೆ
♦ ಸೈನಿಕರು, ವೈಮಾನಿಕರು, ಮೀನುಗಾರರು ಹಾಗೂ ನಾವಿಕರು ಸರಿಯಾದ ಮಾರ್ಗವನ್ನು ಅನುಸರಿಸಲು ಅಗತ್ಯ ಮಾಹಿತಿ ನೀಡುವುದು
♦ ನಗರಗಳಲ್ಲಿ ಮನೆಬಾಗಿಲಿಗೆ ಸೇವೆ ಕೊಡುವ ಸಂಸ್ಥೆಗಳಿಗೆ ಜೀವಾಳವಾಗಿದೆ
♦ ಗೂಗಲ್ ಮ್ಯಾಪ್ ನಂತಹ ವ್ಯವಸ್ಥೆಗಳು ಜಿ.ಪಿ.ಎಸ್ ವ್ಯವಸ್ಥೆಯನ್ನು ಬಳಸಿ ದಾರಿ ತೋರಿಸುತ್ತವೆ

24. ಆ ಕಾಲದ ನೈಜ, ಸ್ಪಷ್ಟ ಮಾಹಿತಿ ದೊರೆಯುವುದು.
♦ ಇದರಿಂದ ಪಡೆಯುವ ಮಾಹಿತಿಯನ್ನು ಸುಲಭವಾಗಿ ಕಂಪ್ಯೂಟರುಗಳಿಂದ ವಿಶ್ಲೇಷಿಸಬಹುದು.
♦ ಕಡಿಮೆ ವೆಚ್ಚದ ಮಾಹಿತಿ ಸಂಗ್ರಹಣೆ ವಿಧಾನವಾಗಿದೆ.
♦ ಹವಾಮಾನ ವೈಪರೀತ್ಯವಿದ್ದರೂ ಚಿತ್ರ ಪಡೆಯಬಹುದು.
♦ ನೈಸರ್ಗಿಕ ವಿಕೋಪಗಳ ಪ್ರಭಾವದ ಪ್ರದೇಶ ಹಾಗೂ ಅನಾಹುತಗಳ ತೀವ್ರತೆಯ ಅಧ್ಯಯನಕ್ಕೆ ಉಪಯುಕ್ತ.
♦ ಭೂಬಳಕೆ, ಅರಣ್ಯ, ಜಲರಾಶಿ, ವಸತಿ, ಬೆಳೆ ಹಂಚಿಕೆ, ಇತ್ಯಾದಿ
♦ ನೈಸರ್ಗಿಕ ಸಂಪನ್ಮೂಲಗಳ ವಿಶ್ಲೇಷಣೆಯಲ್ಲಿ ಅಗತ್ಯ.

25.



26.



ಭೂಗೋಳಶಾಸ್ತ್ರ, ಅಧ್ಯಾಯ– 28

ಭಾರತದ ಪ್ರಮುಖ ಕೈಗಾರಿಕೆಗಳು

1. D) ಕುಲ್ಟಿ
2. B) ಮುಂಬೈ
3. A) ಬೆಂಗಳೂರು
4. C) 1969
5. D) ಭಾರತ

6. ಕೈಗಾರಿಕೆಗಳು ಹೆಚ್ಚು ಕೇಂದ್ರೀಕೃತವಾಗಿರುವ ಪ್ರದೇಶಗಳನ್ನು ಕೈಗಾರಿಕಾವಲಯ ಎಂದು ಕರೆಯುವರು
7. ಈ ಕೈಗಾರಿಕೆಯು ಹಲವಾರು ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾವಸ್ತುವನ್ನು ಒದಗಿಸುವುದು.
8. ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವುದನ್ನು ಜವಳಿ ಕೈಗಾರಿಕೆ ಎಂದು ಕರೆಯುತ್ತಾರೆ
9. ಮುಂಬೈನಲ್ಲಿ ಅತಿ ಹೆಚ್ಚು ಹತ್ತಿ ಗಿರಣಿಗಳಿರುವುದರಿಂದ
10. ಪಶ್ಚಿಮ ಬಂಗಾಳದ ಸೆರಾಂಪುರ
11. ಜ್ಞಾನಾಧಾರಿತ ಕೈಗಾರಿಕೆಗಳು
12. ಮಾನವನ ಜ್ಞಾನವೇ ಆಧಾರವಾಗಿರುವುದರಿಂದ ಈ ಹೆಸರು ಬಂದಿದೆ
13. ಸಾಫ್ಟ್ ವೇರ್ ಉದ್ಯಮದ ಬೆಳವಣಿಗೆಯನ್ನು ಪ್ರೋತ್ಸಾಹಿಸಿ ರಫ್ತನ್ನು ಉತ್ತೇಜಿಸಲು
14. ಬೆಂಗಳೂರು ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿರುವುದರಿಂದ
15. ಬೆಂಗಳೂರು
16. ಡಾ.ವಿಕ್ರಮ್ ಸಾರಾಭಾಯ್
17. ಭಾರತೀಯ ರಾಷ್ಟ್ರೀಯ ಉಪಗ್ರಹ ವ್ಯವಸ್ಥೆಯ ಅಭಿವೃದ್ಧಿ

- ಮೊದಲ ಪ್ರಯತ್ನದಲ್ಲೇ ಮಂಗಳ ಗ್ರಹಕ್ಕೆ ತಲುಪಿದ ಮೊದಲ ರಾಷ್ಟ್ರ
- ಚಂದ್ರನ ದಕ್ಷಿಣ ಧ್ರುವದ ಬಳಿ ಆಹ್ಯಾಕಾಶ ನೌಕೆಯನ್ನು ಇಳಿಸಿದ ಮೊದಲ ದೇಶ ಭಾರತ.ಈ ಎಲ್ಲಾ ಸಾಧನೆಗಳ ಹಿಂದಿನ ಶಕ್ತಿ ಇಸ್ರೋ

18. ಬಿದಿರು

- ಮರದ ತಿರುಳು
- ಹುಲ್ಲು
- ಚಿಂದಿ ಬಟ್ಟೆ
- ಕಬ್ಬಿನ ಸಿಪ್ಪೆ

19. ಕೈಗಾರಿಕೆಗಳ ಪ್ರಗತಿ ದೇಶದ ಆರ್ಥಿಕ ಪ್ರಗತಿಯನ್ನು ನಿರ್ಧರಿಸುತ್ತದೆ

- ಕೈಗಾರಿಕೆಗಳು ಆಧುನಿಕ ನಾಗರಿಕತೆಯ ಲಕ್ಷಣ
- ಅವಶ್ಯಕ ವಸ್ತುಗಳ ಪೂರೈಕೆ
- ಕಚ್ಚಾ ವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿಸುತ್ತವೆ
- ಉದ್ಯೋಗಾವಕಾಶಗಳನ್ನು ದೊರಕಿಸಿಕೊಡುತ್ತವೆ


20. ಸಸ್ಯ, ಪ್ರಾಣಿ ಮೊದಲಾದವುಗಳಿಗೆ ಕಸಿ ಮಾಡುವಿಕೆಯಿಂದ ಮತ್ತು ಹೊಸ ಹೊಸ ಬೀಜ , ಔಷಧ, ರಸಗೊಬ್ಬರ, ಸಾವಯವ ಗೊಬ್ಬರಗಳ ಬಳಕೆಯಿಂದ ಸೋಯಾ ಅವರೆ, ಮೆಕ್ಕೆಜೋಳ, ಹತ್ತಿ ಮೊದಲಾದ ಸಮ್ಮಿಶ್ರ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ.

- ಇತ್ತೀಚೆಗೆ ಸಸ್ಯ ಜೈವಿಕ ತಂತ್ರಜ್ಞಾನ, ಪರಿಸರ, ಜೈವಿಕ ವೈವಿಧ್ಯ, ವೈದ್ಯಕೀಯ ಜೈವಿಕ ತಂತ್ರಜ್ಞಾನವನ್ನು ಸಹ ಬಳಸಿಕೊಳ್ಳಲಾಗುತ್ತದೆ.

21. ಕಚ್ಚಾವಸ್ತುಗಳು

- ಶಕ್ತಿ ಸಂಪನ್ಮೂಲಗಳು
- ಮಾರುಕಟ್ಟೆ
- ಸಂಚಾರ ಸೌಲಭ್ಯ
- ಕಾರ್ಮಿಕರ ಪೂರೈಕೆ
- ಬಂದರುಗಳ ಸೌಲಭ್ಯ
- ಕಡಿಮೆ ದರದ ಭೂಮಿ ದೊರೆಯುವಿಕೆ

♦ ತಾಂತ್ರಿಕತೆ
♦ ಸರ್ಕಾರದ ನೀತಿ ನಿಯಮಗಳು
22. ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ – ಜಮ್‌ಶೆಡ್‌ಪುರ, ಜಾರ್ಖಂಡ್
♦ ಇಂಡಿಯನ್ ಐರನ್ ಮತ್ತು ಸ್ಟೀಲ್ ಕಂಪನಿ – ಬರ್ನ್ ಪುರ, ಪಶ್ಚಿಮ ಬಂಗಾಳ
♦ ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಕಂಪನಿ – ಭದ್ರಾವತಿ, ಕರ್ನಾಟಕ
♦ ಭಿಲಾಯಿ ಸ್ಟೀಲ್ ಪ್ಲಾಂಟ್ – ಭಿಲಾಯಿ, ಛತ್ತೀಸ್‌ಘಡ್
♦ ದುರ್ಗಾಪುರ ಸ್ಟೀಲ್ ಪ್ಲಾಂಟ್ – ದುರ್ಗಾಪುರ , ಪಶ್ಚಿಮ ಬಂಗಾಳ
♦ ಬೊಕಾರೊ ಸ್ಟೀಲ್ ಪ್ಲಾಂಟ್ – ಬೊಕಾರೊ, ಜಾರ್ಖಂಡ್
♦ ಸೇಲಂ ಸ್ಟೀಲ್ ಪ್ಲಾಂಟ್ – ಸೇಲಂ, ತಮಿಳುನಾಡು
♦ ವಿಶಾಖಪಟ್ಟಣಂ ಸ್ಟೀಲ್ ಪ್ಲಾಂಟ್ – ವಿಶಾಖಪಟ್ಟಣಂ, ಆಂಧ್ರ ಪ್ರದೇಶ
23. ಹೂಗ್ಲಿ ಪ್ರದೇಶ
♦ ಮುಂಬೈ–ಪುಣೆ ಪ್ರದೇಶ
♦ ಅಹಮದಾಬಾದ್–ವಡೋದರ ಪ್ರದೇಶ
♦ ದಾಮೋದರ ಕಣಿವೆ ಪ್ರದೇಶ
♦ ದಕ್ಷಿಣದ ಕೈಗಾರಿಕಾ ಪ್ರದೇಶ
♦ ನ್ಯಾಷನಲ್ ಕ್ಯಾಪಿಟಲ್ ಪ್ರದೇಶ
♦ ವಿಶಾಖಪಟ್ಟಣಂ–ಗುಂಟೂರು ಪ್ರದೇಶ
♦ ಕೊಲ್ಲಂ–ತಿರುವನಂತಪುರ ಪ್ರದೇಶ
24. ಟೆಲಿಫೋನ್
♦ ಅಂತರ್ಜಾಲ ಸಂಪರ್ಕ
♦ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಫೋನ್, ಯುದ್ಧ ಸಾಮಗ್ರಿಗಳ ತಯಾರಿಕೆ, ಪರಮಾಣು ಬಾಂಬ್ ತಯಾರಿಕೆ
♦ ಉಪಗ್ರಹ ಉಡಾವಣೆ
♦ ಚಂದ್ರನ ಮೇಲೆ ಪಾದಾರ್ಪಣೆ
♦ ಸರ್ಕಾರಿ ಕಛೇರಿಗಳಲ್ಲಿ ಪಾರದರ್ಶಕ ಇ–ಆಡಳಿತ
♦ ಜಾಗತಿಕ ಆರ್ಥಿಕ ವ್ಯವಸ್ಥೆಯ ಸುಧಾರಣೆ
♦ ಕೃತಕ ಬುದ್ಧಿಮತ್ತೆಯ ಬಳಕೆ
25.



****

ಭೂಗೋಳಶಾಸ್ತ್ರ, ಅಧ್ಯಾಯ– 29

ಭಾರತದ ನೈಸರ್ಗಿಕ ವಿಕೋಪಗಳು

1. D) ಜಾಗತಿಕ ತಾಪಮಾನ ಹೆಚ್ಚಳದಿಂದ
2. D) ಅರಣ್ಯೀಕರಣ
3. B) ಪ್ರವಾಹ ನಿಯಂತ್ರಿಸಲು
4. D) ಮ್ಯಾಂಗ್ರೋವ್ ಅರಣ್ಯ
5. C) ಕೇರಳ
6. A) ಪ್ರವಾಹ ನಿಯಂತ್ರಸಲು

7. ಭೂಮಿ ಸಾಗರ ಭಾಗಗಳ ನಡುವಿನ ಉಷ್ಣಾಂಶ ಹಾಗೂ ಒತ್ತಡದಲ್ಲಿನ ತೀವ್ರ ವ್ಯತ್ಯಾಸ

8. ಅತ್ಯಧಿಕ ಮಳೆ ಸುರಿದಾಗ ಮತ್ತು ಅತ್ಯಧಿಕ ಪ್ರಮಾಣದಲ್ಲಿ ಹಿಮ ಕರಗಿದಾಗ ನದಿಗಳ ನೀರಿನ ಪ್ರಮಾಣವು ಅವುಗಳ ಪಾತ್ರದ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ನದಿ ದಂಡೆಗಳ ಇಕ್ಕೆಲಗಳಲ್ಲಿ ಉಕ್ಕಿ ಹರಿಯುವುದನ್ನು ಪ್ರವಾಹಗಳೆಂದು ಕರೆಯುತ್ತಾರೆ

9. ಆಳದಲ್ಲಿರುವ ಅದಿರಿನ ನಿಕ್ಷೇಪದವರೆಗೆ ಗಣಿಗಳನ್ನು ತೆಗೆಯುವುದರಿಂದ ಭೂಕುಸಿತಗಳು ಉಂಟಾಗುತ್ತವೆ.

10. ಪರ್ವತಗಳ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಕಡಿದಾದ ಇಳಿಜಾರಿನಗುಂಟ ಕೆಳಕ್ಕೆ ಜಾರುವ ಭೂರಾಶಿಗೆ ಭೂಕುಸಿತ ಅಥವಾ ಭೂಪಾತ ಎನ್ನುವರು.

11. ಸಮುದ್ರದ ಅಲೆಗಳಿಂದ ತೀರ ವಲಯವು ಸವೆಸಲ್ಪಡುವುದನ್ನು ತೀರ ಪ್ರದೇಶದ ಕೊರೆತ ಅಥವಾ ಕಡಲಕೊರೆತ ಎಂದು ಕರೆಯುತ್ತಾರೆ.

12. ಭೂಮಿಯ ಒಳಗಿನ ಆಂತರಿಕ ಶಕ್ತಿಯಿಂದ ಅನಿರೀಕ್ಷಿತವಾಗಿ ಭೂಮಿಯ ಮೇಲ್ಪದರವು ಕಂಪಿಸುವುದನ್ನು ಭೂಕಂಪ ಎನ್ನುವರು.

13. ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ, ಆಸ್ತಿ–ಪಾಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ವಿನಾಶಕಾರಿ ಘಟನೆಗಳನ್ನು ನೈಸರ್ಗಿಕ ವಿಕೋಪಗಳು ಎನ್ನುವರು.

14. ನೈಋತ್ಯ ಮಾನ್ಸೂನ್ ಮಾರುತಗಳ ಆರಂಭದಲ್ಲಿ ಅರಬ್ಬೀ ಸಮುದ್ರದಲ್ಲಿ ಅತಿ ಎತ್ತರದ ಅಲೆಗಳು ತೀರ ಪ್ರದೇಶಕ್ಕೆ ಅಪ್ಪಳಿಸಿ ಭೂ ಪ್ರದೇಶವನ್ನು ಕಬಳಿಸುತ್ತವೆ

15. ಕಡಲ ಕೊರೆತವನ್ನು ನಿಯಂತ್ರಿಸಲು/ನಿರ್ವಹಿಸಲು

16. ತಮಿಳುನಾಡು, ಓಡಿಶಾ

17. ನದಿಯ ಇಕ್ಕೆಲಗಳಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸುವುದು

- ನದಿಗಳಿಗೆ ಆಣೆಕಟ್ಟುಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿ ಇತರೆಡೆಗೆ ಹರಿಸುವುದು
- ಪ್ರವಾಹಗಳ ಮುನ್ಸೂಚನೆಯನ್ನು ನೀಡಲು ಮಾಹಿತಿ ಕೇಂದ್ರಗಳನ್ನು ಸ್ಥಾಪಿಸುವುದು
- ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸುವುದು

18. ಅನೇಕ ಚಿಕ್ಕ ನದಿಗಳು ಹರಿಯುವುದಕ್ಕೆ ಅಡ್ಡಿ ಉಂಟಾಗುತ್ತದೆ

- ಸಾರಿಗೆ ಸಂಚಾರಕ್ಕೆ ಅಡ್ಡಿ ಉಂಟಾಗುತ್ತದೆ
- ಹಳ್ಳಗಳು ಮತ್ತು ಅನೇಕ ಸಸ್ಯವರ್ಗಗಳು ಭೂಗತವಾಗುತ್ತವೆ
- ಅಪಾರ ಜೀವಹಾನಿ ಮತ್ತು ಆಸ್ತಿಹಾನಿಯನ್ನುಂಟು ಮಾಡುತ್ತವೆ

19. ಅಪಾರ ಭೂಪ್ರದೇಶ ಸಮುದ್ರದ ಪಾಲಾಗುವುದು

- ಮನೆ, ರಸ್ತೆ ಮೊದಲಾದವು ಮುಳುಗಿ ಅಪಾರ ನಷ್ಟವುಂಟಾಗುವುದು

20. ತೀರ ಪ್ರದೇಶದಲ್ಲಿ ಮರಳು ತಗೆಯುವುದನ್ನು ನಿಯಂತ್ರಿಸುವುದು

- ತೀರ ಪ್ರದೇಶದುದ್ದಕ್ಕೂ ತಡೆಗೋಡೆ ನಿರ್ಮಿಸುವುದು
- ತೀರದುದ್ದಕ್ಕೂ ದಪ್ಪ ಬಂಡೆಗಳ ರಾಶಿ ಹಾಕಿ ಅಲೆಗಳ ಪ್ರಭಾವವನ್ನು ನಿಯಂತ್ರಿಸುವುದು
- ತೀರದುದ್ದಕ್ಕೂ ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸುವುದು

21. ಭೂಮಿಯ ಅಂತರಾಳದಲ್ಲಿರುವ ಶಿಲಾಫಲಕಗಳ ಚಲನೆ

- ಮ್ಯಾಗ್ಮಾ ಒಂದೆಡೆಯಿಂದ ಇನ್ನೊಂದೆಡೆ ಸರಿಯುವುದು
- ನಗರೀಕರಣ
- ಅರಣ್ಯನಾಶ

• ಆಣೆಕಟ್ಟುಗಳ ನಿರ್ಮಾಣ
• ಗಣಿಗಾರಿಕೆ
22. ಜನಜೀವನ ಮಾರ್ಪಾಡು ಹೊಂದುವುದು
• ಅಪಾರ ಸಾವು ನೋವು ಉಂಟಾಗುತ್ತದೆ
• ಒಳನಾಡಿನ ಜಲರಾಶಿಗಳು ಲವಣಯುಕ್ತವಾಗುತ್ತವೆ
• ಬೆಳೆಗಳು ಸಂಪೂರ್ಣ ನಾಶವಾಗುತ್ತವೆ
• ಸಾರಿಗೆ ಸಂಪರ್ಕ, ವಿದ್ಯುತ್ ಸೌಕರ್ಯ, ಜನಜೀವನ ಅಸ್ತವ್ಯಸ್ತವಾಗುತ್ತದೆ
• ಸಾಂಕ್ರಾಮಿಕ ರೋಗಗಳು ಹರಡುತ್ತವೆ
23. ಅಪಾಯಕಾರಿ ತಗ್ಗು ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವುದು
• ವಿದ್ಯುಜ್ಜನಕ ಯಂತ್ರಗಳು, ದೋಣಿಗಳು, ಹೆಲಿಕಾಪ್ಟರ್‌ಗಳನ್ನು ಸಜ್ಜಾಗಿರಿಸುವುದು
• ಚಂಡಮಾರುತ ವಲಯಗಳಿಂದ ರೈಲು–ಬಸ್ಸು ಮಾರ್ಗಗಳ ಬದಲಾವಣೆ
• ಸಮೂಹಮಾಧ್ಯಮಗಳ ಮೂಲಕ ಜನರಿಗೆ ಮಾಹಿತಿ ಒದಗಿಸುವುದು
• ಸೇನಾ ತುಕಡಿಗಳನ್ನು ಸಿದ್ಧಗೊಳಿಸಿಡುವುದು
• ಸಿಹಿನೀರು, ಆಹಾರ ಮತ್ತು ಉಡುಪುಗಳನ್ನು ಸಂಗ್ರಹಿಸಿಡುವುದು
• ಔಷಧ ಹಾಗೂ ವೈದ್ಯಕೀಯ ನೆರವಿಗಾಗಿ ಸಿದ್ಧರಾಗಿರುವುದು

24. ಅತ್ಯಧಿಕ ಮಳೆ ಬೀಳುವುದು.
• ನದಿಯ ಪಾತ್ರಗಳಲ್ಲಿ ಹೂಳು ತುಂಬುವುದು
• ಅಣೆಕಟ್ಟುಗಳು ಒಡೆದು ಒಮ್ಮೆಲೆ ನೀರು ಬಿಡುಗಡೆಯಾಗುವುದು.
• ನದಿಗಳ ಪಾತ್ರ ಬದಲಾವಣೆ
• ಚಂಡಮಾರುತಗಳಿಂದ ಅಪಾರ ಮಳೆ ಬೀಳುವುದು
• ಸಮುದ್ರ ಮಧ್ಯ ಭಾಗದಲ್ಲಿ ಭೂಕಂಪಗಳು ಸಂಭವಿಸುವುದು.
25. ಪರ್ವತಗಳಲ್ಲಿ ಹರಿಯುವ ನೀರು
• ಸಮುದ್ರ ತೀರಗಳಲ್ಲಿನ ಅಲೆಗಳು ಭೂಮಿಯನ್ನು ಕೊರೆಯುವುದು
• ಪರ್ವತ ವಲಯಗಳಲ್ಲಿ ರಸ್ತೆ, ರೈಲುಮಾರ್ಗ, ಕಾಲುವೆಗಳ ನಿರ್ಮಾಣ
• ಸಡಿಲವಾದ ಮಣ್ಣಿನ ಪದರ
• ಗಣಿಗಾರಿಕೆ
• ಅರಣ್ಯನಾಶ
• ಕಡಿದಾದ ಇಳಿಜಾರಿನಲ್ಲಿ ಉಳುಮೆ ಮಾಡುವುದು
26. ಜನರ ಸಾವು ನೋವು ಮತ್ತು ಆಸ್ತಿ ಪಾಸ್ತಿಗಳಿಗೆ ಹಾನಿ
• ಸಾರಿಗೆ ಸಂಪರ್ಕ ಕಡಿತ
• ರೋಗಗಳ ಹರಡುವಿಕೆ
• ಸಾಗರದ ಅಲೆಗಳು ದಡಗಳಿಗೆ ಅಪ್ಪಳಿಸುವಿಕೆ
• ಸುನಾಮಿ
• ನದಿಯ ದಿಕ್ಕು ಬದಲಾಗುವಿಕೆ.
27. ಭೂಕಂಪ ವಲಯಗಳಲ್ಲಿ ಬಹು ಅಂತಸ್ತಿನ ಕಟ್ಟಡಗಳ ನಿಷೇಧ
• ಹಗುರವಾದ ವಸ್ತುಗಳಿಂದ ಕಟ್ಟಡಗಳ ನಿರ್ಮಾಣ
• ಕಟ್ಟಡಗಳು ಸ್ಥಿತಿಸ್ಥಾಪಕತ್ವ ಗುಣ ಹೊಂದುವಂತೆ ನಿರ್ಮಿಸುವುದು
• ಭೂಕಂಪ ಸಂಭವನೀಯ ಪ್ರದೇಶಗಳಲ್ಲಿ ಶೀಘ್ರ ವೈದ್ಯಕೀಯ ಸೇವಾ ವ್ಯವಸ್ಥೆ
• ಭೂಕಂಪ ಸಂಭವಿಸಿದಾಗ ಹೇಗೆ ಪ್ರತಿಕ್ರಿಯಿಸಬೇಕು ಎಂಬ ಬಗ್ಗೆ ಜನರಿಗೆ ತಿಳುವಳಿಕೆ ನೀಡಬೇಕು
28. ಜನರ ಆಸ್ತಿ ಪಾಸ್ತಿ ಹಾನಿ
• ಭೂಮಿ ಮತ್ತು ಬೆಳೆ ಹಾನಿ

• ದೂರಸಂಪರ್ಕ, ವಿದ್ಯುತ್ ಪೂರೈಕೆ, ಸಾರಿಗೆ ಸೌಲಭ್ಯ ಅಸ್ತವ್ಯಸ್ತ
• ಮಣ್ಣಿನ ಮೇಲ್ಭಾಗವು ಕೊಚ್ಚಿ ಹೋಗುತ್ತದೆ
• ಗಿಡ ಮರಗಳು ಹಾನಿಗೊಳಗಾಗುತ್ತವೆ
• ರೋಗಗಳ ಉಲ್ಬಣ

29. ಭೂಕಂಪಗಳು
• ಪ್ರವಾಹಗಳು
• ಕ್ಷಾಮಗಳು
• ಚಂಡಮಾರುತಗಳು
• ಭೂಕುಸಿತ
• ಕರಾವಳಿ ಕೊರೆತ
• ಹಿಮಪಾತ
• ಮೇಘಸ್ಫೋಟ
• ಉಷ್ಣಗಾಳಿ

30. ಸಿದ್ಧಪಡಿಸಿದ ಆಹಾರ
• ಆಹಾರದ ಹಂಚಿಕೆ
• ಶುದ್ಧ ಕುಡಿಯುವ ನೀರಿನ ಪೂರೈಕೆ
• ಔಷಧಿ ಹಂಚಿಕೆ
• ತಾತ್ಕಾಲಿಕ ವಸತಿ ವ್ಯವಸ್ಥೆ
• ಅಗತ್ಯ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸುವುದು
• ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ನೆರವನ್ನು ಪಡೆಯುವುದು

31.



****

ಅರ್ಥಶಾಸ್ತ್ರ, ಅಧ್ಯಾಯ– 15

ಅರ್ಥವ್ಯವಸ್ಥೆ ಮತ್ತು ಸರಕಾರ

1. C) ಡಾ. ಎಂ. ಎಸ್. ಸ್ವಾಮಿನಾಥನ್
2. D) ಉಪಾಧ್ಯಕ್ಷರು
3. B) ಎಲ್ಲರನ್ನೂ ಒಳಗೊಂಡ ಬೆಳವಣಿಗೆ
4. A) ರಾಷ್ಟ್ರೀಯ ಅಭಿವೃದ್ಧಿ ಮಂಡಳಿ

5. ಅರ್ಥವ್ಯವಸ್ಥೆಯು ಹೆಚ್ಚಿನ ಏರಿಳಿತಗಳಿಲ್ಲದೆ ಪ್ರಗತಿಯತ್ತ ಸಾಗುವುದನ್ನು ಆರ್ಥಿಕ ಸ್ಥಿರತೆ ಎನ್ನುತ್ತಾರೆ

6. ದೇಶದ ಆದಾಯ ಮತ್ತು ಸಂಪತ್ತು ಸಮಾಜದ ಎಲ್ಲ ಜನರಲ್ಲಿ ಆದಷ್ಟು ಸಮಾನವಾಗಿ ಹಂಚಿಕೆಯಾಗುವುದೇ ಸಾಮಾಜಿಕ ನ್ಯಾಯ

7. ಸರಕಾರವು ಕೆಲವು ನಿರ್ಧಿಷ್ಟ ಧ್ಯೇಯೋದ್ದೇಶಗಳೊಂದಿಗೆ, ದೇಶದಲ್ಲಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ಜನರ ಸುಖವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲು, ಪ್ರಜ್ಞಾ ಪೂರ್ವಕವಾಗಿ ಮತ್ತು ವಿವೇಕಯುತವಾಗಿ ಜಾರಿಗೊಳಿಸುವ ಪ್ರಕ್ರಿಯೆಯನ್ನು ಆರ್ಥಿಕ ಯೋಜನೆ ಎನ್ನುತ್ತೇವೆ

8. ಭಾರತದ ಆರ್ಥಿಕ ಅಭಿವೃದ್ಧಿಗೆ ಯೋಜನೆಯ ಅಗತ್ಯವನ್ನು ಒತ್ತಿ ಹೇಳಿದರು. ಹಾಗಾಗಿ ಸರ್. ಎಂ ವಿಶ್ವೇಶ್ವರಯ್ಯನವರನ್ನು 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಎಂದು ಕರೆಯಲಾಗುತ್ತಿದೆ

9. ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು 'ಹಸಿರುಕ್ರಾಂತಿ' ಎಂದು ಕರೆಯುವರು

10. ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಬಳಕೆಗೆ ತರಲಾದ ಸುಧಾರಿತ ತಂತ್ರಜ್ಞಾನವನ್ನು 'ಸುಗ್ಗಿ ನಂತರದ ತಂತ್ರಜ್ಞಾನ' ಎಂದು ಕರೆಯುತ್ತಾರೆ

11. ಕೃಷಿಯಲ್ಲಿ ಎಲ್ಲ ರೀತಿಯ ಪರಸರ ಸ್ನೇಹಿ ತಂತ್ರಗಳನ್ನು ಬಳಸುವ ಮೂಲಕ ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದನ್ನು 'ಎರಡನೇ ಹಸಿರು ಕ್ರಾಂತಿ' ಅಥವಾ 'ಸದಾ ಹಸಿರು ಕ್ರಾಂತಿ' ಎನ್ನುವರು

12. ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು

- ಉದ್ಯೋಗವಕಾಶಗಳನ್ನು ಹೆಚ್ಚಿಸುವುದು
- ಆರ್ಥಿಕ ಅಸಮಾನತೆಯನ್ನು ಕಡಿಮೆಮಾಡುವುದು
- ಆರ್ಥಿಕಸ್ಥಿರತೆಯನ್ನು ಕಾಯ್ದುಕೊಳ್ಳುವುದು
- ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು ಇತ್ಯಾದಿ

13. ಭಾರತ ಸರಕಾರದ ಅತ್ಯುನ್ನತ ಸಾರ್ವಜನಿಕ ನೀತಿ ಚಿಂತಕರ ಚಾವಡಿಯಾಗಿ ಕಾರ್ಯನಿರ್ವಹಿಸುವುದು

- ಆರ್ಥಿಕ ಅಭಿವೃದ್ಧಿಯನ್ನು ವೇಗಗೊಳಿಸುವ ಕಾರ್ಯದ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವುದು
- ಕೆಳಮಟ್ಟದಿಂದ ಸಂಪನ್ಮೂಲಗಳನ್ನು ಬಳಸಿಕೊಂಡು ಆರ್ಥಿಕ ನೀತಿ ನಿರೂಪಣೆಯಲ್ಲಿ ಭಾರತದ ರಾಜ್ಯ ಸರಕಾರಗಳ ಒಳಗೊಳ್ಳುವಿಕೆಯ ಮೂಲಕ ಸಹಕಾರಿ ಒಕ್ಕೂಟವನ್ನು ಉತ್ತೇಜಿಸುತ್ತದೆ

14. ರಾಷ್ಟ್ರೀಯ ಆದಾಯದ ಬೆಳವಣಿಗೆಯ ವೇಗ ಕ್ರಮೇಣ ಹೆಚ್ಚಿದೆ

- ತಲಾ ಆದಾಯದ ಬೆಳವಣಿಗೆಯೂ ಹೆಚ್ಚಿದೆ
- ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲಾಗಿದೆ
- ಕೈಗಾರಿಕೆ ಮತ್ತು ಸೇವಾವಲಯಗಳ ವಿಸ್ತರಣೆಯಿಂದ ಉದ್ಯೋಗಾವಕಾಶಗಳು ಹೆಚ್ಚಿವೆ
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಕಂಡುಬಂದಿದೆ
- ಜನರ ನಿರೀಕ್ಷಿತ ಜೀವಿತಾವಧಿ ಮತ್ತು ಸಾಕ್ಷರತಾ ಪ್ರಮಾಣ ಹೆಚ್ಚುತ್ತಿದೆ
- ಶಿಶುಮರಣ ಮತ್ತು ತಾಯಂದಿರ ಮರಣದರಗಳು ಕಡಿಮೆಯಾಗುತ್ತಿವೆ
- ಜನನ ಮತ್ತು ಮರಣದರಗಳೆರಡೂ ಕಡಿಮೆಯಾಗುತ್ತಿದ್ದು, ಜನಸಂಖ್ಯಾ ಬೆಳವಣಿಗೆದರ ಇಳಿಕೆಯಾಗುತ್ತಿದೆ

15. ಸುಗ್ಗಿ ಪೂರ್ವ ತಂತ್ರಜ್ಞಾನ:–

- ಹೆಚ್ಚು ಇಳುವರಿ ಬೀಜಗಳ ಬಳಕೆ
- ರಾಸಾಯನಿಕ ಗೊಬ್ಬರ ಬಳಕೆ
- ಕ್ರಿಮಿನಾಶಕಗಳ ಬಳಕೆ
- ನೀರಾವರಿ ಸೌಲಭ್ಯಗಳ ಬಳಕೆ

ಸುಗ್ಗಿ ನಂತರದ ತಂತ್ರಜ್ಞಾನ:–

- ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಬಳಕೆಗೆ ತಂದ ಸುಧಾರಿತ ತಂತ್ರಜ್ಞಾನ.

****

ಅರ್ಥಶಾಸ್ತ್ರ, ಅಧ್ಯಾಯ– 16

ಗ್ರಾಮೀಣಾಭಿವೃದ್ಧಿ

1. B) ಅತ್ಯಂತ ಕಡಿಮೆ ಇದೆ.

2. A) ಗಾಂಧೀಜಿ

3. C) 73 ನೇ

4. B) ಪ್ರಜಾಪ್ರಭುತ್ವ

5. C) ಸುವರ್ಣ ಗ್ರಾಮೋದಯ ಯೋಜನೆ
6. A) ಮಹಿಳಾ ಸ್ವಸಹಾಯ ಸಂಘ (ಸ್ತ್ರೀ ಶಕ್ತಿ ಸಂಘ)
7. D) ಮಹಾತ್ಮ ಗಾಂಧಿ

8. ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಗ್ರಾಮೀಣ ಜನರ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಸ್ಥಿತಿ–ಗತಿಗಳನ್ನು ಉನ್ನತೀಕರಿಸುವುದೇ ಗ್ರಾಮೀಣ ಅಭಿವೃದ್ಧಿಯಾಗಿದೆ.
9. ವಿಕೇಂದ್ರೀಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿ ಪಡಿಸುವುದೇ ಗ್ರಾಮ ಸ್ವರಾಜ್ಯವಾಗಿದೆ.
10. ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸಿಕೊಡುವುದೇ ಅಧಿಕಾರ ವಿಕೇಂದ್ರೀಕರಣ.

11. 01. ಗ್ರಾಮ ಪಂಚಾಯತ್ 02. ತಾಲ್ಲೂಕು ಪಂಚಾಯತ್ 03. ಜಿಲ್ಲಾ ಪಂಚಾಯತ್
12. ಪ್ರಧಾನ ಮಂತ್ರಿ ಆವಾಸ್ ಯೋಜನೆ, ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ, ಆಶ್ರಯ ಯೋಜನೆ, ಬಸವ ವಸತಿ ಯೋಜನೆ .
13. ಗ್ರಾಮೀಣ ಜನರ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ
- ಬಡತನ ಹೆಚ್ಚಾಗಿದೆ
- ಉದ್ಯೋಗಾವಕಾಶಗಳು ಕಡಿಮೆಯಾಗಿವೆ
- ಆದಾಯ ತುಂಬಾ ಕಡಿಮೆ ಇದೆ
- ಅನಕ್ಷರತೆ ಎದ್ದು ಕಾಣುತ್ತಿದೆ
- ಅಪೌಷ್ಟಿಕತೆ ಕಂಡು ಬರುತ್ತದೆ

14. ಗ್ರಾಮಗಳಿಗೆ ಮೂಲ ಸೌಕರ್ಯ ಒದಗಿಸುವುದು.
- ಗ್ರಾಮೀಣ ಜನರ ದುಡಿಯುವ ಸಾಮರ್ಥ್ಯ ಹೆಚ್ಚಿಸುವುದು
- ಕೃಷಿಯನ್ನು ಲಾಭದಾಯಕ ಮತ್ತು ಆಕರ್ಷಕವಾಗಿಸುವುದು.
- ಗ್ರಾಮೀಣ ಜನರ ವಲಸೆಯನ್ನು ತಪ್ಪಿಸುವುದು.
- ಕೃಷಿ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡುವುದು.
- ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
- ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿ.
- ನಗರ ಸೌಲಭ್ಯಗಳು ಗ್ರಾಮಗಳಲ್ಲಿ ದೊರೆಯುವದು.
- ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಳ್ಳಿಗರು ಭಾಗವಹಿಸುವದು

15. ಅಭಿವೃದ್ಧಿಯಲ್ಲಿ ಗ್ರಾಮದ ಜನರು ಪಾಲ್ಗೊಳ್ಳುವಂತೆ ಮಾಡುವದು.
- ಗ್ರಾಮೀಣ ಮೂಲ ಸೌಕರ್ಯಗಳ ಅಭಿವೃದ್ಧಿ.
- ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಕೆ ಪ್ರೋತ್ಸಾಹ.
- ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ.
- ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ.
- ಬಡತನ ಮತ್ತು ನಿರುದ್ಯೋಗ ಹೋಗಲಾಡಿಸುವುದು
- ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡಬಹುದು.
- ಬಡಜನರಿಗೆ ಆಹಾರ ಧಾನ್ಯ ಒದಗಿಸುವುದು.
- ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸಬಹುದು.
- ಗ್ರಾಮೀಣ ಕಲೆ, ಸಂಸ್ಕೃತಿ ಶ್ರೀಮಂತಗೊಳ್ಳುತ್ತದೆ.

16. ಮಹಿಳೆಯರಿಗೆ ಆರ್ಥಿಕ ಸಾಕ್ಷರತೆಯನ್ನು ಕೊಡುತ್ತಿದೆ
- ಮಹಿಳೆಯರಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ
- ಸ್ವ ಉದ್ಯೋಗದಲ್ಲಿ ತರಬೇತಿಯನ್ನು ನೀಡುತ್ತಿದೆ
- ಹಣದ ಉಳಿತಾಯಕ್ಕೆ ಮಾರ್ಗದರ್ಶನ ಮಾಡುತ್ತದೆ
- ಮಹಿಳಾ ದೌರ್ಜನ್ಯದ ವಿರುದ್ಧ ಜಾಗೃತಿಯನ್ನು ಮೂಡಿಸುತ್ತಿದೆ

• ಮಹಿಳೆಯರನ್ನು ಸಂಘಟಿಸುತ್ತಿದೆ
• ಗೃಹ ಉತ್ಪನ್ನ ತಯಾರಿಕೆ ಮತ್ತು ಮಾರಾಟದ ತರಬೇತಿಯನ್ನು ಕೊಡುತ್ತದೆ.

17. ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೆ ವಹಿಸುವುದು.

• ಇದನ್ನೇ ಅಧಿಕಾರ ವಿಕೇಂದ್ರೀಕರಣ ಎನ್ನುವರು.
• ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು.
• ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.
• ಇದು ಎಲ್ಲ ರೀತಿಯ ಶೋಷಣೆಗಳನ್ನು ತಡೆಯುತ್ತದೆ.
• ಮಾನವನ ಸ್ವಾತಂತ್ರ್ಯ & ಘನತೆಯನ್ನು ರಕ್ಷಿಸುತ್ತದೆ.
• ಸಹಾನುಭೂತಿ, ಸಹಕಾರದಂತಹ ಮೌಲ್ಯಗಳನ್ನು ವೃದ್ಧಿಸುತ್ತದೆ.

****

ಅರ್ಥಶಾಸ್ತ್ರ, ಅಧ್ಯಾಯ– 17

ಸಾರ್ವಜನಿಕ ಹಣಕಾಸು ಹಾಗೂ ಆಯ–ವ್ಯಯ

1. C) ಮಾರ್ಚ್ 31
2. D) ಕೇಂದ್ರ ಹಣಕಾಸು ಸಚಿವರು
3. C) ಕೊರತೆಯ ಆಯ–ವ್ಯಯ
4. C) ಕಂಪನಿ ತೆರಿಗೆ
5. C) ಮಾರ್ಚ್ 31

6. ವ್ಯಕ್ತಿ ಅಥವಾ ಕುಟುಂಬದ ಆದಾಯ ವೆಚ್ಚ ಮತ್ತು ಸಾಲದ ನಿರ್ವಹಣೆಯನ್ನು ವೈಯಕ್ತಿಕ ಹಣಕಾಸು ಎನ್ನುವರು.
7. ಸರ್ಕಾರದ ಆದಾಯ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದನ್ನು ಸಾರ್ವಜನಿಕ ಹಣಕಾಸು ಎನ್ನುವರು.
8. ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿಯನ್ನು ಮುಂಗಡಪತ್ರ / ಆಯ–ವ್ಯಯ ಎನ್ನುವರು.
9. ಆಯ–ವ್ಯಯ ಪತ್ರದಲ್ಲಿ ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಕೊರತೆಯ ಆಯ–ವ್ಯಯ ಎನ್ನುವರು.
10. ವೆಚ್ಚವನ್ನು ಹೆಚ್ಚು ಮಾಡಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಕೊರತೆಯ ಆಯವ್ಯಯವನ್ನು ಮಂಡಿಸಲಾಗುತ್ತದೆ.
11. ಶಿಕ್ಷಣ ಸೇವೆ, ಆರೋಗ್ಯ ಸೇವೆ
12. ರಕ್ಷಣಾ ವೆಚ್ಚ
13. ಸರ್ಕಾರ ತನ್ನ ಆದಾಯ, ವೆಚ್ಚ ಸಾಲಕ್ಕೆ ಸಂಬಂಧಿಸಿದಂತೆ ಅನುಸರಿಸುವ ನೀತಿಯೇ ವಿತ್ತೀಯ ನೀತಿ.
14. ಸರಕಾರವು ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವಂತಿದ್ದರೆ ಅದೇ ಪ್ರತ್ಯಕ್ಷ ತೆರಿಗೆ.
15. ಸರ್ಕಾರವು ವಿವಿಧ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳು, ರಾಷ್ಟ್ರ ನಿರ್ಮಾಣ ಕಾರ್ಯಗಳು ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡುತ್ತದೆ. ಇದೇ ಯೋಜನಾ ವೆಚ್ಚ.
16. ದೇಶದಲ್ಲಿರುವ ಪ್ರಜೆಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಉದ್ಯಮ ಸಂಸ್ಥೆಗಳು ಮುಂತಾದವುಗಳಿಂದ ಸಂಗ್ರಹಿಸುವ ಸಾಲವನ್ನು ಆಂತರಿಕ ಸಾಲ ಎನ್ನುತ್ತಾರೆ.
17. ಸರ್ಕಾರವು ಸಾಮಾನ್ಯ ಜನರು ಬಳಸುವ ವಸ್ತುಗಳಿಗೆ ಕಡಿಮೆ ತೆರಿಗೆಯನ್ನು ಹಾಗೂ ಶ್ರೀಮಂತರು ಬಳಸುವ ವಸ್ತುಗಳಿಗೆ ಹೆಚ್ಚಿನ ತೆರಿಗೆಯನ್ನು ವಿಧಿಸಲು ಅನುಸರಿಸುವ ನೀತಿ.
18. ಉಳಿತಾಯ ಆಯ–ವ್ಯಯ

• ಕೊರತೆಯ ಆಯ–ವ್ಯಯ
• ಸಮತೋಲನ ಆಯ–ವ್ಯಯ

19. ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ, ಸಾರಿಗೆ– ಸಂಪರ್ಕ, ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ ಸೇವೆಗಳನ್ನು ಆರ್ಥಿಕ ಸೇವೆಗಳು ಎನ್ನುವರು
20. ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಕೆಯನ್ನು ತೆರಿಗೆ ಎನ್ನುವರು. ಉದಾಹರಣೆ – ವರಮಾನ ತೆರಿಗೆ, ಆಮದು–ರಫ್ತು ತೆರಿಗೆ ಇತ್ಯಾದಿಗಳು.

21. ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ, ಸ್ಟಾಂಪ್ ತೆರಿಗೆ ಇತ್ಯಾದಿ.

22. **ವೈಯಕ್ತಿಕ ಹಣಕಾಸು**	**ಸಾರ್ವಜನಿಕ ಹಣಕಾಸು**
• ವ್ಯಕ್ತಿ ಅಥವಾ ಕುಟುಂಬದ ಆದಾಯ ವೆಚ್ಚಗಳಿಗೆ ಸಂಬಂಧಿಸಿದೆ • ಆದಾಯಕ್ಕೆ ತಕ್ಕಂತೆ ವೆಚ್ಚ ಮಾಡಲಾಗುತ್ತದೆ • ಹಣಕಾಸಿನ ವ್ಯವಹಾರಗಳನ್ನು ಗೌಪ್ಯವಾಗಿಡಲಾಗುತ್ತದೆ. • ವ್ಯಕ್ತಿ ಅಥವಾ ಕುಟುಂಬ ಉಳಿತಾಯ ಮಾಡಿದರೆ ಅದು ಅವರ ಪ್ರಗತಿ, ಅಭಿವೃದ್ಧಿಗೆ ಪೂರಕವಾಗಿರುತ್ತದೆ.	• ಸರ್ಕಾರದ ಆದಾಯ ವೆಚ್ಚಗಳಿಗೆ ಸಂಬಂಧಿಸಿದೆ • ವೆಚ್ಚಗಳಿಗೆ ತಕ್ಕಂತೆ ಆದಾಯವನ್ನು ಹೊಂದಿಸಲಾಗುತ್ತದೆ • ಇದನ್ನು ಮಾಧ್ಯಮಗಳಲ್ಲಿ ಪ್ರಚಾರ ಮಾಡಲಾಗುತ್ತದೆ. • ಸರ್ಕಾರವು ಉಳಿತಾಯ ಮಾಡಿದರೆ ದೇಶದ ಪ್ರಗತಿಯನ್ನು ಕುಂಠಿತ ಗೊಳಿಸುತ್ತದೆ.

23. ಭಾರತೀಯ ರಿಸರ್ವ್ ಬ್ಯಾಂಕ್ ಗಳಿಸುವ ನಿವ್ವಳ ಲಾಭ
• ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ
• ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ
• ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ
• ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ
• ವಿವಿಧ ರೀತಿಯ ಶುಲ್ಕಗಳು ಮತ್ತು ದಂಡಗಳು ಇತ್ಯಾದಿ

24 **ಪ್ರತ್ಯಕ್ಷ ತೆರಿಗೆ**	**ಪರೋಕ್ಷ ತೆರಿಗೆ**
• ತೆರಿಗೆ ವಿಧಿಸಲ್ಪಟ್ಟ ವ್ಯಕ್ತಿಯೇ ತೆರಿಗೆಯನ್ನು ಕಟ್ಟಬೇಕು. • ತೆರಿಗೆ ಹೊರೆಯನ್ನು ವರ್ಗಾಯಿಸಲಾಗುವುದಿಲ್ಲ. • ಉದಾ: ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ, ಸ್ಟಾಂಪ್ ಶುಲ್ಕ	• ತೆರಿಗೆ ವಿಧಿಸಲ್ಪಟ್ಟ ವ್ಯಕ್ತಿ ತೆರಿಗೆಯನ್ನು ಕಟ್ಟುವಂತಿಲ್ಲ. • ತೆರಿಗೆ ಹೊರೆಯನ್ನು ವರ್ಗಾಯಿಸಬಹುದು. • ಉದಾ: ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ, ಸ್ಟಾಂಪ್ ಶುಲ್ಕ

25. ದೇಶದ ಅಭಿವೃದ್ಧಿಯನ್ನು ಬಿಂಬಿಸುತ್ತದೆ
• ದೇಶದ ಸಂಪನ್ಮೂಲಗಳನ್ನು ಉತ್ಪಾದನಾಂಗಗಳಲ್ಲಿ ಸಮರ್ಪಕವಾಗಿ ಹಂಚುತ್ತದೆ
• ಉತ್ಪಾದನೆಯನ್ನು ಗರಿಷ್ಟೀಕರಣ ಗೊಳಿಸುತ್ತದೆ
• ದೇಶದಲ್ಲಿ ಶಾಂತಿಯನ್ನು ತರುವಂತೆ ಮಾಡುತ್ತದೆ
• ಪ್ರಜೆಗಳ ಕಲ್ಯಾಣವನ್ನು ಮಾಡುತ್ತದೆ
• ಬಂಡವಾಳ ಹೆಚ್ಚುವಂತೆ ಮಾಡುತ್ತದೆ
• ಸಮತೋಲಿತ ಅಭಿವೃದ್ಧಿಯನ್ನು ಖಾತರಿಪಡಿಸುತ್ತದೆ

26. **1. ಆರ್ಥಿಕ ಸೇವೆಗಳು:** ಕೃಷಿ, ಕೈಗಾರಿಕೆ, ಸಾರಿಗೆ, ಸಂಪರ್ಕ, ಇಂಧನ, ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ
• **2. ಸಾಮಾಜಿಕ ಸೇವೆಗಳು:** ಶಿಕ್ಷಣ, ಆರೋಗ್ಯ, ನೈರ್ಮಲ್ಯ, ನೀರು ಪೂರೈಕೆ, ಗೃಹ ನಿರ್ಮಾಣ, ಸಾಮಾಜಿಕ ಕಲ್ಯಾಣ
• **3. ಸಾಮಾನ್ಯ ಸೇವೆಗಳು:** ದೇಶದಲ್ಲಿ ಶಾಂತಿ– ಸುವ್ಯವಸ್ಥೆ ಕಾಪಾಡಲು ಮಾಡುವ ವೆಚ್ಚಗಳು.

****

ವ್ಯವಹಾರ ಅಧ್ಯಯನ, ಅಧ್ಯಾಯ– 16

ಬ್ಯಾಂಕ್ ವ್ಯವಹಾರಗಳು

1. B) ಬ್ಯಾಂಕೊ
2. A) ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ
3. A) ಉಳಿತಾಯ ಖಾತೆ
4. B) ಆವರ್ತ ಠೇವಣಿ ಖಾತೆ
5. A) ಅಂಚೆ ಇಲಾಖೆ
6. A) ಚಾಲ್ತಿ ಖಾತೆ
7. C) ಚಾಲ್ತಿ ಖಾತೆ

8. ರಿಜರ್ವ್ ಬ್ಯಾಂಕ್
9. ಭದ್ರತಾ ಕಪಾಟು ಸೇವೆ

10. Automated Teller Machine
11. "ಬ್ಯಾಂಕ್"

12. ಹಣದ ವಹಿವಾಟನ್ನು ಮಾಡುತ್ತವೆ
♦ ಬ್ಯಾಂಕು ಒಬ್ಬ ವ್ಯಕ್ತಿ, ಸಂಸ್ಥೆ ಅಥವಾ ಕಂಪನಿ ಆಗಿರಬಹುದು
♦ ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತದೆ
♦ ಸಾಲಗಳನ್ನು ಕೊಡುವುದು
♦ ಲಾಭ ಮತ್ತು ಸೇವಾ ಭಾವನೆ ಹೊಂದಿದೆ
♦ ತಮ್ಮ ಕಾರ್ಯಗಳನ್ನು ನಿರಂತರವಾಗಿ ವಿಸ್ತರಿಸುತ್ತವೆ
♦ ಸಂಬಂಧ ಕಲ್ಪಿಸುವ ಕೊಂಡಿ
13 ಕೇಂದ್ರ ಬ್ಯಾಂಕು / ಭಾರತೀಯ ರಿಜರ್ವ್ ಬ್ಯಾಂಕು
♦ ವಾಣಿಜ್ಯ ಬ್ಯಾಂಕುಗಳು
♦ ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
♦ ಭೂ–ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
♦ ಸ್ಥಳೀಯ ಬ್ಯಾಂಕುಗಳು (ಲೇವಾದೇವಿಗಾರ/ಸಾಹುಕಾರ)
♦ ಸಹಕಾರಿ ಬ್ಯಾಂಕುಗಳು
14. ಸಾರ್ವಜನಿಕರಿಂದ ಠೇವಣಿ ಅಂಗೀಕರಿಸುವುದು
♦ ಸಾಲಗಳನ್ನು ಕೊಡುವುದು
♦ ಹಣವನ್ನು ವರ್ಗಾಯಿಸುವುದು
♦ ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು
♦ ಖರ್ಚು ಕಾರ್ಡು ಮತ್ತು ಜಮಾ ಕಾರ್ಡು ಕೊಡುವುದು
♦ ಹಣದ ವಹಿವಾಟನ್ನು ಮಾಡುತ್ತವೆ
♦ ಹಣದ ಭದ್ರತೆಯನ್ನು ಕಾಪಾಡುತ್ತವೆ
♦ ಸಹಿಗಳಿಗೆ ಜವಾಬ್ದಾರಿ ಹಾಕುವುದು
♦ ಸಾಲಪತ್ರಗಳನ್ನು ಮತ್ತು ಜವಾಬ್ಧಾರಿ ಪತ್ರ ಕೊಡುವುದು
♦ ಸರ್ಕಾರದ ಹಣಕಾಸಿನ ವ್ಯವಹಾರ ನಿರ್ವಹಿಸುವುದು
15. ಜಮಾ ಕಾರ್ಡು ಕೊಡುವುದು
♦ ಖಾಸಗಿ ಸಾಲಗಳು
♦ ಮನೆ ಕಟ್ಟಲು, ವಾಹನ ಖರೀದಿಸಲು ಸಾಲ ಕೊಡುವುದು
♦ ವ್ಯಾಪಾರಕ್ಕೆ ಬೇಕಾದ ಸಾಲಗಳು
♦ ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು
♦ ಡೆಬಿಟ್ ಕಾರ್ಡುಗಳು
♦ ಭರವಸೆ ಸೇವೆಗಳು
16. ಹಣದ ಭದ್ರತೆ ಕಾಪಾಡುವುದು
♦ ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ
♦ ಹಣ ವಸೂಲು ಮಾಡಲು ಸಹಾಯ ಮಾಡುತ್ತದೆ
♦ ಸಾಲ ಪಡೆಯಲು ಸಾಧ್ಯವಾಗುತ್ತದೆ
♦ ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ
♦ ಭದ್ರತಾ ಕಪಾಟುಗಳನ್ನು ಪಡೆಯಬಹುದು
17. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ನೀಡುತ್ತದೆ
♦ ಅಂಚೆ ಉಳಿತಾಯ ಖಾತೆಗಳನ್ನು ಆರಂಭಿಸಿದೆ
♦ ಕಿಸಾನ್ ವಿಕಾಸ ಪತ್ರಗಳನ್ನು ನೀಡುತ್ತದೆ
♦ ಅಂಚೆ ವಿಮೆ ಯೋಜನೆ

• ನಿವೃತ್ತಿವೇತನ ಯೋಜನೆ
• ಹಣವನ್ನು ವರ್ಗಾಯಿಸುವುದು
18. ಯಾವ ಖಾತೆ ತೆಗೆಯಬೇಕೆಂದು ನಿರ್ಧರಿಸುವುದು
• ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು
• ಪ್ರಸ್ತಾವನೆ ಅರ್ಜಿ ನಮೂನೆಯನ್ನು ತುಂಬುವುದು
• ಪರಿಚಿತರ ಉಲ್ಲೇಖನವನ್ನು ಕೊಡುವುದು
• ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು
• ಅಧಿಕಾರಿಯ ಒಪ್ಪಿಗೆ ಪಡೆಯುವುದು
• ಪ್ರಾರಂಭಿಕ ಠೇವಣಿ ಕಟ್ಟುವುದು

19. **ಉಳಿತಾಯ ಖಾತೆ**	**ಚಾಲ್ತಿ ಖಾತೆ**
• ವೇತನ ಪಡೆಯುವ, ನಿಯಮಿತ ಆದಾಯ ಹೊಂದಿರುವ ಜನರು ತೆರೆಯುವರು. • ವಿಧ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ತೆರೆಯುತ್ತಾರೆ. • ಠೇವಣಿಗಳಿಗೆ ಬಡ್ಡಿಯನ್ನು ಕೊಡುತ್ತವೆ.	• ಹೆಚ್ಚು ಬ್ಯಾಂಕ್ ವ್ಯವಹಾರ ನಡೆಸುವವರು ತೆರೆಯುತ್ತಾರೆ. • ವ್ಯಾಪಾರಸ್ಥರು, ವಾಣಿಜ್ಯ ಸಂಸ್ಥೆಯವರು ತೆರೆಯುತ್ತಾರೆ. • ಠೇವಣಿಗಳಿಗೆ ಬಡ್ಡಿಯನ್ನು ಕೊಡುವುದಿಲ್ಲ. ಬದಲಾಗಿ ಸೇವಾ ಶುಲ್ಕ ವಸೂಲು ಮಾಡುತ್ತವೆ.

****

ವ್ಯವಹಾರ ಅಧ್ಯಯನ, ಅಧ್ಯಾಯ– 32

ಉದ್ಯಮಶೀಲತೆ

1. ಎಂಟ್ರ ಪ್ರೆಂಡೆ
2. ಹೊಸ ಕಲ್ಪನೆಯನ್ನು ವ್ಯವಹಾರದಲ್ಲಿ ರೂಢಿಗೆ ತರುವವನನ್ನು ಉದ್ಯಮಿ ಎನ್ನುವರು.
3. ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಯನ್ನು ಉದ್ಯಮಶೀಲತೆ ಎನ್ನುವರು
4. 1978
5. ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ ಹಾಗೂ ಸಮಗ್ರತೆಯನ್ನು ಕೇಂದ್ರೀಕರಿಸಲು.

6. ಸೃಜನಾತ್ಮಕ
• ಕ್ರಿಯಾತ್ಮಕ
• ನಾಯಕತ್ವ
• ತಂಡವನ್ನು ಕಟ್ಟುವುದು
• ಸಮಸ್ಯೆಯ ಪರಿಹಾರ
• ನಷ್ಟ ಪರಿಹಾರಕ್ಕೆ ಸಿದ್ಧ
• ವಚನ ಬದ್ಧತೆ
• ಗುರಿ ಮುಟ್ಟುವಿಕೆ
• ಆತ್ಮವಿಶ್ವಾಸ
• ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು
• ಹೊಸ ಪದ್ಧತಿಯನ್ನು ರೂಢಿಗೆ ತರುವುದು
7. ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
• ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
• ಉತ್ಪಾದಿಸುವ ವಸ್ತುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
• ಎಲ್ಲ ಅಂಶಗಳನ್ನು ಸಂಯೋಜಿಸುತ್ತಾನೆ.
• ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
• ತನ್ನಉದ್ಯಮದ ಆಯವ್ಯಯ ನಿಭಾಯಿಸುತ್ತಾನೆ.
• ಕಷ್ಟನಷ್ಟಗಳು ಮತ್ತು ಅನಿಶ್ಚಿತತೆಗಳನ್ನು ಎದುರಿಸುತ್ತಾನೆ.
• ವ್ಯಾಪಾರದ ಮಾರ್ಗಗಳನ್ನು ತಿಳಿಸಿ, ಅದು ಕಾರ್ಯಗತಗೊಳ್ಳಲು ಮಾರ್ಗದರ್ಶನ ನೀಡುತ್ತಾನೆ.

8. ಇದು ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸಾಮರ್ಥ್ಯವಾಗಿದೆ.

♦ ಇದು ಬೇರೆಯವರಿಂದ ಕಷ್ಟಸಾಧ್ಯವಾದ ಗೊಂದಲಮಯ, ವಿರೋಧಾತ್ಮಕ, ಅಸ್ತವ್ಯಸ್ತತೆಯಿಂದ ಕೂಡಿದ ಅವಕಾಸ ಗುರುತಿಸಿ ಕಾರ್ಯರೂಪಕ್ಕೆ ತರುವುದಾಗಿದೆ.

♦ ಅವಕಾಶಗಳನ್ನು ಅನ್ವೇಷಿಸಿ ನಷ್ಟಗಳನ್ನು ಲೆಕ್ಕಾಚಾರ ಹಾಕಿ ಲಾಭಗಳಿಸುವ ಸಾಹಸ ಕಾರ್ಯವಾಗಿದೆ.

9. ಜನರ ಉಳಿತಾಯವನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸುತ್ತಾರೆ.

♦ ಉದ್ಯೋಗಗಳನ್ನು ಒದಗಿಸುತ್ತಾರೆ.

♦ ದೇಶದ ಆದಾಯ ಮತ್ತು ತಲಾವರಮಾನ ಹೆಚ್ಚಿಸುತ್ತಾರೆ.

♦ ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.

♦ ಉತ್ತಮ ವಸ್ತುಗಳನ್ನು ಕಡಿಮೆ ದರದಲ್ಲಿ ಒದಗಿಸುವರು.

♦ ಜನರ ಜೀವನಮಟ್ಟ ಉತ್ತಮಗೊಳ್ಳಲು ಶ್ರಮಿಸುತ್ತಾರೆ.

♦ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುತ್ತಾರೆ.

♦ ಸಮಾಜದ ಏಳಿಗೆಗೆ ಸಹಾಯ ಮಾಡುತ್ತಾರೆ.

♦ ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.

10. ಜಾಹಿರಾತು ಸೇವಾಸಂಸ್ಥೆಗಳು

♦ ಮಾರುಕಟ್ಟೆ ಸಲಹಾ ಸಂಸ್ಥೆ

♦ ಕೈಗಾರಿಕಾ ಸಲಹಾ ಸಂಸ್ಥೆ

♦ ವಸ್ತುಗಳನ್ನು ಬಾಡಿಗೆ & ಗುತ್ತಿಗೆಗೆ ನೀಡುವ ಸಂಸ್ಥೆಗಳು

♦ ಛಾಯಾಪ್ರತಿ ತೆಗೆಯುವ ಕೇಂದ್ರಗಳು

♦ ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯ

♦ ಅಂತರ್ಜಾಲ ಮತ್ತು ಸಂಹವನ ಅಂಗಡಿಗಳು

♦ ಕ್ರೆಚ್ ಮತ್ತು ಬ್ಯೂಟಿಪಾರ್ಲರ್‌ಗಳು

11. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು

♦ ಕೃಷಿ & ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕ್

♦ ಆಮದು ಮತ್ತು ರಫ್ತು ಬ್ಯಾಂಕು

♦ ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕು

♦ ಭಾರತೀಯ ಕೈಗಾರಿಕಾ ಹಣಕಾಸು ನಿಗಮ

♦ ವಾಣಿಜ್ಯ ಮತ್ತು ಇತರೆ ಬ್ಯಾಂಕುಗಳು

♦ ರಾಜ್ಯ ಹಣಕಾಸು ನಿಗಮಗಳು

♦ ಭಾರತೀಯ ಜೀವ ವಿಮಾ ನಿಗಮ

12. ಜಿಲ್ಲಾ ಕೈಗಾರಿಕೆ ಕೇಂದ್ರಗಳು

♦ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ

♦ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ

♦ ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ

♦ ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆ

♦ ಕೈಗಾರಿಕಾ ಪ್ರದೇಶಗಳು

♦ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

♦ ತಾಂತ್ರಿಕ ಸಲಹಾ ಸಂಸ್ಥೆಗಳು

13. ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ.

♦ ವಿಶೇಷ ಯೋಜನಾ ವರದಿ ಅಂಗೀಕರಿಸುವುದು.

♦ ಉದ್ದಿಮೆ ಅಭಿವೃದ್ಧಿ ಕಾರ್ಯಕ್ರಮದೆಡೆ ತರಬೇತಿ.

♦ ಕಚ್ಚಾ ಪದಾರ್ಥಗಳ ಹಂಚಿಕೆ.

♦ ಸ್ವಯಂ ಉದ್ಯೋಗದಡಿಯಲ್ಲಿ ಹಣಕಾಸಿನ ನೆರವು.

• ವಸ್ತು ಪ್ರದರ್ಶನ, ವ್ಯಾಪಾರಿ ಜಾತ್ರೆಗಳಲ್ಲಿ ಮಾರುಕಟ್ಟೆ ವ್ಯವಸ್ಥೆ.

• ಸಣ್ಣ ಕೈಗಾರಿಕೆಗಳ ನೋಂದಣಿ ವ್ಯವಸ್ಥೆ.

• ಉದ್ದಿಮೆಯನ್ನು ಆಧುನಿಕರಿಸುವಲ್ಲಿ ಸಹಾಯ.

• ವಸ್ತುಗಳನ್ನು ರಫ್ತು ಮಾಡಲು ಸಹಾಯ.

****

ವ್ಯವಹಾರ ಅಧ್ಯಯನ, ಅಧ್ಯಾಯ– 33

ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

1. A) ಮಾರ್ಚ್ 15

2. D) ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

3. A) ಗ್ರಾಹಕ

4. ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದ ಇಂದು ಮನೆಯಲ್ಲೇ ಕುಳಿತು ವಸ್ತುಗಳನ್ನು ಕೊಳ್ಳುವುದನ್ನು `ಟೆಲಿಷಾಪಿಂಗ್' ಎನ್ನುತ್ತಾರೆ.

5. ಗ್ರಾಹಕರನ್ನು ಉತ್ಪಾದಕರ ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸುವುದು.

6. ರಾಜ್ಯ ಸರ್ಕಾರ

7. 1986

8. ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿ ಇವರಿಬ್ಬರ ನಡುವೆ ನೇರ ವ್ಯವಹಾರ ಇಲ್ಲವಾಯಿತು.

• ಉತ್ಪಾದಕರು ಹಾಗೂ ಗ್ರಾಹಕರು ಕೂಡಿ ನಿರ್ಧರಿಸಬೇಕಾದ ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸತೊಡಗಿದರು.

• ಇದರಿಂದ ಗ್ರಾಹಕರಿಗೆ ಕಷ್ಟ, ನಷ್ಟ ಮತ್ತು ಸಮಸ್ಯೆಗಳಾದವು.

9. ಅಮೇರಿಕಾದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ತನ್ನ ದೇಶದ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ಆಯ್ಕೆ ಹಾಗೂ ಮಾಹಿತಿ ಪಡೆಯುವ ಮತ್ತು ಆಲಿಸುವ ಹಕ್ಕುಗಳನ್ನು 1962 ರ ಮಾರ್ಚ್ 15ರಂದು ರಂದು ನೀಡಿದರು.

10. 'ಗ್ರಾಹಕ ಸಂರಕ್ಷಣಾ ಕಾಯ್ದೆ'ಯು ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು.

• 'ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ತಪ್ಪಿಸುವುದು.

• ಮಾರುಕಟ್ಟೆಯಲ್ಲಿ ನಡೆಯಬಹುದಾದ ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು.

• ಗುಣಮಟ್ಟ, ಅಳತೆ, ತೂಕ, ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು.

• ಬಳಕೆದಾರರು ತಾವು ಖರೀದಿಸುವ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಅವರಿಗೆ ಸೂಕ್ತ ಪರಿಹಾರ ಕೊಡಿಸುವುದು.

• ಗ್ರಾಹಕ ಶಿಕ್ಷಣ ನೀಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.

11. ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಿಸಲ್ಪಡುವ ಹಕ್ಕು.

• ಮಾಹಿತಿ ಪಡೆಯುವ ಹಕ್ಕು

• ವಸ್ತುಗಳ ಆಯ್ಕೆಯ ಹಕ್ಕು

• ವಸ್ತುಗಳ ಬಗ್ಗೆ ಆಲಿಸುವ ಹಕ್ಕು

• ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು

• ಗ್ರಾಹಕ ಶಿಕ್ಷಣದ ಹಕ್ಕು

• ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು

• ಈ ಮೇಲ್ಕಂಡ ಹಕ್ಕುಗಳ ಮೂಲಕ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡುತ್ತದೆ.

12. ದೂರು ಸಲ್ಲಿಸಲು ಯಾವುದೇ ನಿಗದಿತ ನಮೂನೆ ಇರುವುದಿಲ್ಲ

• ದೂರು ಕೈಬರಹ/ ಬೆರಳಚ್ಚು ಮಾದರಿಯಲ್ಲಿರಬೇಕು

• ದೂರು ಕೊಡುವವನ ಹೆಸರು, ವಿಳಾಸ, ದೂರವಾಣಿ

• ದೂರು ಕೊಡಬೇಕಾದ ವ್ಯಾಪಾರಿಯ ಹೆಸರು

• ಯಾವ ವಸ್ತುವಿನಿಂದ ನಷ್ಟವಾಗಿದೆ/ ಮೋಸವಾಗಿದೆ

• ನಷ್ಟ ಹೊಂದಿರುವ ಮೊಬಲಗು (ಮೊತ್ತ)

• ನಷ್ಟದ ಸೂಕ್ತ ಪರಿಹಾರದ ಮೊಬಲಗು

• ದೂರಿಗೆ ಸಂಬಂಧಪಟ್ಟ ರಸೀತಿ ಅಥವಾ ಬಿಲ್ಲು

****